# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಡಿಸೆಂಬರ್, ೨೦೧೩ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೩ ಸಂಚಿಕೆ ೫

**ಚಂದಾ :** ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ.೧೫/-



**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಬಿಜೆಪಿಯ ಪ್ರಧಾನ ಮಂತ್ರಿ ಅಭ್ಯರ್ಥಿ ನರೇಂದ್ರ ಮೋದಿಯವರು ದೊಡ್ಡ ಸಂಕಷ್ಟಕ್ಕೆ ಸಿಕ್ಕಿಕೊಂಡಂತೆ ಕಾಣುತ್ತಿದೆ. ಬಿಜೆಪಿಯವರು ಯಶಸ್ವಿಯಾಗಿ ಕಟ್ಟತೊಡಗಿದ್ದ ಅವರ ಸ್ವಚ್ಛ, ದಕ್ಷ, ವೀರ 'ಸ್ವಯಂಸೇವಕ' ವ್ಯಕ್ತಿತ್ವದ ಬಿಂಬಕ್ಕೆ ಚ್ಯುತಿಯನ್ನು ಉಂಟುಮಾಡಬಹುದಾದಂತಹ ಹಳೆಯ ಘಟನೆಯೊಂದು ಈಗ ಹೊರ ಬಿದ್ದಿದೆ. ೨೦೦೯ರಲ್ಲಿ ಗುಜರಾತ್ ಸರ್ಕಾರದ ಗೃಹಮಂತ್ರಿ ಮತ್ತು ಅವರ ಬಲಗೈ ಬಂಟ ಅಮಿತ್ ಷಾ ಯುವತಿಯೊಬ್ಬಳ ಸಕಲ ಚಲನವಲನ, ಮಾತುಕತೆ ಮತ್ತು ದೂರವಾಣಿ ಕರೆಗಳ ಮೇಲೆ ಅಹೋರಾತ್ರಿ ನಿಗಾ ಇಡುವಂತೆ ತಮ್ಮ ನಂಬಿಕಸ್ಥ ಪೋಲೀಸ್ ಅಧಿಕಾರಿಯೊಬ್ಬರಿಗೆ ನಿರಂತರ ಸೂಚನೆಗಳನ್ನು ನೀಡುತ್ತಿದ್ದುದರ ಧ್ವನಿ ಮುದ್ರಿಕೆಯೊಂದನ್ನು ಸಾರ್ವಜನಿಕ ಜಾಗೃತಿ ಸೇವಾ ಸಂಸ್ಥೆಯೊಂದು ಬಿಡುಗಡೆ ಮಾಡಿದೆ. ಷಾ ಅವರ ಸೂಚನೆಗಳಲ್ಲಿನ ಅಪಾಯಕಾರಿ ಅಂಶವೆಂದರೆ, ಅವನ್ನು ತಾವು ತಮ್ಮ 'ಸಾಹೇಬ್'ರ ಪರವಾಗಿ ನೀಡುತ್ತಿರುವುದಾಗಿ ಅವರು ಹೇಳಿರುವುದು.

ಬಿಜೆಪಿ ವಕ್ತಾರರೇನೋ ಆ ಯುವತಿ ಪೋಲೀಸ್ ಅಧಿಕಾರಿಯೊಬ್ಬನಿಂದ ಕಿರುಕುಳದ ಭೀತಿ ಎದುರಿಸುತ್ತಿದ್ದಳೆಂದೂ, ಹಾಗಾಗಿ ಅವಳ ತಂದೆಯ ದೂರಿನನ್ವಯ ಈ ನಿಗಾ ಕ್ರಮ ಕೈಗೊಳ್ಳಲಾಯಿತೆಂದೂ ಸ್ಪಷ್ಟೀಕರಣ ನೀಡಿ ಈ ಘಟನೆಯ ನಿಜತ್ವವನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಆದರೆ ಪೋಲೀಸ್ ಅಧಿಕಾರಿಯ ಕಿರುಕುಳದ ಭೀತಿ ಇದ್ದರೆ, ಆ ಅಧಿಕಾರಿಯ ವಿರುದ್ಧ ದೂರು ಏಕೆ ದಾಖಲಾಗಿಲ್ಲ ಮತ್ತು ಯುವತಿಯ ತಂದೆ ತಾಯಿಗಳ ಚಲನವಲನ, ಮಾತುಕತೆ ಮತ್ತು ದೂರವಾಣಿ ಕರೆಗಳ ಮೇಲೂ ಏಕೆ ನಿಗಾ ಇಡಲಾಗಿತ್ತು ಹಾಗೂ ಮತ್ತೂ ಮುಖ್ಯವಾಗಿ ಷಾ ಅವರ 'ಸಾಹೇಬ್'ರಿಗೇಕೆ ಈ ವಿಷಯದಲ್ಲಿ ಇಷ್ಟು ವೈಯಕ್ತಿಕ ಆಸಕ್ತಿ ಎಂಬ ಮುಖ್ಯ ಪ್ರಶ್ನೆಗಳಿಗೆ ಈ ವಕ್ತಾರರು ಈವರೆಗೆ ಸಮರ್ಪಕ ಉತ್ತರ ನೀಡಿಲ್ಲ. ಈ ಪ್ರಕರಣದ ಇನ್ನೊಂದು ಕುತೂಹಲಕಾರಿ ಮತ್ತು ಅಷ್ಟೇ ಭಯಂಕರವಾದ ಅಂಶವೆಂದರೆ, ಗೃಹ ಮಂತ್ರಿ ತನ್ನ ಸಾಮಾನ್ಯ ಪ್ರಜೆಯೊಬ್ಬರ ಮೇಲೆ ನಿಗಾ ಇಡುವ ಪ್ರಯತ್ನ ಮಾಡುತ್ತಿದ್ದಾಗಲೇ, ಇನ್ನೊಂದೆಡೆಯಿಂದ ಸ್ವತಃ ಅವರ ಮೇಲೇ ನಿಗಾ ಇಡುವ ವ್ಯವಸ್ಥೆಯೂ ಇದೆ ಎಂಬುದು! ಜಗತ್ತಿನ ಅತಿ ದೊಡ್ಡ ಮತ್ತು ಪ್ರಬುದ್ಧವೆಂದು ಹೇಳಿಕೊಳ್ಳಲಾಗುವ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಯಾರ ಖಾಸಗಿ ಬದುಕೂ ಸುರಕ್ಷಿತವಲ್ಲವೆಂದು ಕಾಣುತ್ತದೆ. ಅದೇನೇ ಇರಲಿ, ಮುಂದೆ ಈ ಪ್ರಕರಣ ಯಾವ ಯಾವ ತಿರುವು ತೆಗೆದುಕೊಳ್ಳುವುದೋ ಕಾದು ನೋಡಬೇಕು.

ಆದರೆ ಇದೇ ಸಂದರ್ಭದಲ್ಲಿ, ಈ ಧ್ವನಿ ಮುದ್ರಿಕೆ ಬಯಲಾಗಿರುವುದು, ಪ್ರಜೆಗಳ ಖಾಸಗಿತನದ ಸುರಕ್ಷತೆಯ ಬಗೆಗಿನ ರಾಜಕಾರಣಿಗಳ ಕಳಕಳಿಯಿಂದಲ್ಲ ಎಂಬುದನ್ನೂ ನಾವು ಗಮನಿಸಬೇಕು. ಇದು ಬರಲಿರುವ ಲೋಕಸಭಾ ಚುನಾವಣೆಗಳಾಗಿ ನಡೆದಿರುವ ಬಿರುಸಿನ ತಯಾರಿಯಲ್ಲಿ ರಾಷ್ಟ್ರದ ಎರಡು ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಗಳು ನಡೆಸಿರುವ ಪರಸ್ಪರ ಕೆಸರೆರಚಾಟದ ಒಂದು ಅಂಕವಷ್ಟೆ. ಈ ಕೆಸರೆರಚಾಟದಲ್ಲಿ, ಆಡಳಿತದ ಅತಿ ದೀರ್ಘ ಅನುಭವ ಹೊಂದಿರುವ ಕಾಂಗ್ರೆಸ್ ಅಪೂರ್ವ ಪರಿಣತಿಯನ್ನೇ ಸಾಧಿಸಿದೆ ಎಂದು ಹೇಳಬೇಕು. ಅದರಲ್ಲೂ ಬರಲಿರುವ ಚುನಾವಣೆಗಳಲ್ಲಿ ಮತ್ತು ಇದಕ್ಕೆ ಪೂರ್ವ ಪೀಠಿಕೆಯಂತೆ ನಡೆದಿರುವ ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳಲ್ಲಿ ಕನಿಷ್ಠ ಮೂರರಲ್ಲಿ ಖಚಿತ ಸೋಲಿನ ಭೀತಿಯಲ್ಲಿರುವ ಈ ಪಕ್ಷ ಹತಾಶೆಯಲ್ಲಿ ಕೈಗೊಳ್ಳುತ್ತಿರುವ ಕುತ್ಸಿತ ಕ್ರಮಗಳನ್ನೇ ನೋಡಿ. ದೆಹಲಿಯಲ್ಲಿ ತನ್ನನ್ನು ಬುಡಮೇಲುಗೊಳಿಸುತ್ತಿರುವ ಆಮ್ ಆದ್ಮಿ ಪಕ್ಷಕ್ಕೆ ವಿದೇಶಗಳಲ್ಲಿರುವ ಭಾರತೀಯ ಪ್ರಜೆಗಳಿಂದ ಬಂದಿರುವ ದೇಣಿಗೆಯ ಬಗ್ಗೆ ವಿಚಾರಣೆಗೆ ಆಜ್ಞೆ ಮಾಡಿದೆ. ಇದನ್ನು, ಆಮ್ ಆದ್ಮಿ ಪಕ್ಷದಿಂದ ಅಷ್ಟೇ ಅಪಾಯ ಎದುರಿಸುತ್ತಿರುವ ಬಿಜೆಪಿ ಕೂಡ ಸಂಭ್ರಮದಿಂದ ಸ್ವಾಗತಿಸಿದೆ. ಆದರೆ ಈ ಎರಡೂ ದೊಡ್ಡ ಪಕ್ಷಗಳ ದೊಡ್ಡ ಗಾತ್ರದ ಚುನಾವಣಾ ನಿಧಿಗಳ ಅತಿ ದೊಡ್ಡ ಭಾಗಗಳ ಮೂಲಗಳ ಬಗ್ಗೆ ಅನೇಕ ಸಾರ್ವಜನಿಕ ದೂರುಗಳು ಬಂದಿದ್ದರೂ ತನಿಖೆ ಅಗತ್ಯವಿಲ್ಲವಂತೆ! ಇನ್ನು ಅಣ್ಣಾ ಹಜಾರೆಯವರ ಇತ್ತೀಚಿನ ಮಾತುಗಳನ್ನು ಗಮನಿಸಿದರೆ ಕಾಂಗ್ರೆಸ್ ಇವರಿಗೂ ಎಲ್ಲೋ 'ಹಿಡಿ' ಹಾಕಿ 'ಸರಿ' ಮಾಡಿಕೊಂಡಿರುವಂತೆ ತೋರುತ್ತಿದೆ. ಇದು ಸಹಜವಾಗಿ ಬಿಜೆಪಿಗೂ ಅಪ್ಯಾಯಮಾನವಾಗಿ ಕಂಡಿದೆ. ಸಮೂಹ ಮಾಧ್ಯಮಗಳ ಮೇಲಾಟದ ಈ ಕಾಲದಲ್ಲಿ ಜನ ಇದೆಲ್ಲವನ್ನೂ ಗಮನಿಸುತ್ತಿರುತ್ತಾರೆ ಎಂಬ ಪರಿವೆಯಾದರೂ ಈ ಪಕ್ಷಗಳಿಗೆ ಬೇಡವೇ?

ಇಲ್ಲಿ ನಮ್ಮ ಸಿದ್ಧರಾಮಯ್ಯನವರನ್ನು ನೋಡಿ. ಎಸ್.ಎಸ್ ಹಿರೇಮಠ್‌ರ ಸಮಾಜ ಪರಿವರ್ತನಾ ಸಮಾಜದ ಲೆಕ್ಕಪತ್ರಗಳಲ್ಲಿ ಜುಜುಬಿ ಎರಡು ಸಾವಿರ ಡಾಲರುಗಳ ಲೆಕ್ಕ ತಪ್ಪಿದೆ(ಹಣದ ದುರುಪಯೋಗ ಅಲ್ಲ) ಎಂದು ಗಣಿ ಉದ್ಯಮಿಯೊಬ್ಬ ಕಳ್ಳನಿಗೊಂದು ಪಿಳ್ಳೆ ನೆಪ ಎಂಬಂತೆ ನೀಡಿರುವ ದೂರಿನ ಬಗ್ಗೆ ತಕ್ಷಣ ತನಿಖೆಗೆ ಆಜ್ಞೆ ಮಾಡಿದ್ದಾರೆ. ಇಷ್ಟೇ ರಭಸವಾಗಿ ಗಣಿ ಅಕ್ರಮ, ಕೆಪಿಎಸ್‌ಸಿ ದುರ್ವ್ಯವಹಾರ, ಅಕ್ರಮ ನಿವೇಶನ ಮಂಜೂರಾತಿ, ಸರ್ಕಾರಿ ಜಮೀನು ಕಬಳಿಕೆ ಮುಂತಾದ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳಲ್ಲೂ ನಮ್ಮ ಮುಖ್ಯ ಮಂತ್ರಿಗಳು ಕ್ರಮ ಕೈಗೊಂಡಿದ್ದರೆ ಅವರು ಈ ಹೊತ್ತಿಗೆ ಜನತೆಯ ಕಣ್ಮಣಿಯಾಗಿ ಕಂಗೊಳಿಸುತ್ತಿದ್ದರು. ಆದರೆ ಇಂದು ಸಿದ್ಧರಾಮಯ್ಯ ತಮ್ಮ ತಪ್ಪು ನಿರ್ಧಾರಗಳು ಮತ್ತು ತಪ್ಪು ಆದ್ಯತೆಗಳಿಂದಾಗಿ ಜನತೆ ತಮ್ಮಲ್ಲಿಟ್ಟಿದ್ದ ಭರವಸೆಯನ್ನು ಭಂಗಗೊಳಿಸಿಕೊಳ್ಳತೊಡಗಿದ್ದಾರೆ. ಶಾದಿ ಭಾಗ್ಯ ಸಾಮಾಜಿಕ ಅವಿವೇಕದ ಕಾರ್ಯಕ್ರಮವಾದರೆ, ಸರ್ಕಾರಿ ಶಾಲೆಗಳಲ್ಲಿನ ಅಹಿಂದ ಮಕ್ಕಳ ಕರ್ನಾಟಕ ದರ್ಶನ ಕಾರ್ಯಕ್ರಮ ಸಾಮಾಜಿಕ ಅಶ್ಲೀಲತೆಯ ಕಾರ್ಯಕ್ರಮವಾಗಿದೆ. ಇನ್ನು ಮೂಢ ನಂಬಿಕೆ ತಡೆ ಮಸೂದೆಯ ಹಿಂದೆ ತಾತ್ವಿಕ ಪ್ರದರ್ಶನಪ್ರಿಯತೆಯ ಅವಸರವಿದ್ದಂತಿದೆ. ಈ ಮೂರೂ ಈಗ ಸಿದ್ಧರಾಮಯ್ಯನವರ ಮುಖದ ಮೇಲೆ ಸಿಡಿದು ಅವರಿಗೆ ದೊಡ್ಡ ಮುಜುಗರವನ್ನೇ ಉಂಟು ಮಾಡಿದೆ. ಸಿದ್ಧರಾಮಯ್ಯ ತಮ್ಮ ಹಿತದೃಷ್ಟಿಯಿಂದಲೇ ಮೊದಲು ತಮ್ಮ ಆಪ್ತ ರಾಜಕೀಯ ಸಲಹಾಕಾರರ ತಂಡವನ್ನು ಬದಲಿಸಿಕೊಳ್ಳಬೇಕಿದೆ.

ಲೋಹಿಯಾರ ಶಿಷ್ಯರೆಂದು ಹೇಳಿಕೊಳ್ಳುವ ಸಿದ್ಧರಾಮಯ್ಯ ಮೊದಲು ತಿಳಿಯಬೇಕಾದ್ದೇನೆಂದರೆ, ಸಾಮಾಜಿಕ ನ್ಯಾಯವೆಂಬುದು

ತಾನಾಗಿ ಒಂದು ನ್ಯಾಯವಲ್ಲ. ಅದನ್ನು ಸಾರ್ವತ್ರಿಕ ನ್ಯಾಯದ ಅವಿಭಾಜ್ಯ ಅಂಗವಾಗಿ ಗ್ರಹಿಸಿದಾಗ ಮಾತ್ರ ಅದು ನ್ಯಾಯವೆನಿಸಿಕೊಳ್ಳುತ್ತದೆ. ಅದು ಮನದಟ್ಟಾಗಲು ಮೊದಲು ಅವರ ಮನಸ್ಸಿನ ಆಳದಲ್ಲಿ ತಾವು ಇಡೀ ರಾಜ್ಯದ ಜನತೆಯ ಮುಖ್ಯಮಂತ್ರಿ ಎಂಬ ಭಾವನೆ ಸ್ಥಾಪಿತವಾಗಬೇಕು. ಅದಾಗಿದ್ದಲ್ಲಿ ಇಂತಹ ಅಗ್ಗದ, ಕ್ಷಣಿಕ ರಾಜಕೀಯ ಲಾಭದ ಸಾಮಾಜಿಕ ಅನ್ಯಾಯದ ಕಾರ್ಯಕ್ರಮಗಳು ಅವರ ರಾಜಕೀಯ ದರ್ಶನದ ಭಾಗವಾಗಿ ಮೂಡಿಬರುತ್ತಿರಲಿಲ್ಲ. ಲೋಹಿಯಾ ತಮ್ಮ ಸಮಾಜವಾದದ ಸಮಾನತೆಯ ತತ್ವವನ್ನು ಇತರ ಸಮಾಜವಾದಿ ದರ್ಶನಗಳಲ್ಲಿನ ಸಮಾನತೆಯ ತತ್ವಕ್ಕಿಂತ ಭಿನ್ನವಾಗಿ ಸಮತೆ ಎಂದು ಅರ್ಥೈಸಿದ್ದರು. ಸಮತೆ ಎಂದರೆ ಒಳಗಿನ ಮತ್ತು ಹೊರಗಿನ ಸಮಾನತೆಗಳೆರಡರ ನಡುವೆ ಸಾಧಿತವಾಗಬೇಕಾದ ಸಮತೋಲನ. ನಮ್ಮ ಮುಖ್ಯಮಂತ್ರಿಗಳು ತಮ್ಮ ಅಧಿಕಾರದ ಅವಧಿಯ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ಅದಕ್ಕೆ ಒಂದು ಸಾಮಾಜಿಕ ಘನತೆ ಒದಗಿಸುವ ಕಡೆ ಗಮನ ಹರಿಸಲಿ. ಅದರಿಂದ ಸರ್ವಜನತೆಯ ವಿಶ್ವಾಸ ದೊರೆತು ಅವರ ಸ್ಥಾನ ಹೆಚ್ಚು ಭದ್ರವಾದೀತು.

## ಕನ್ನಡಕ್ಕೆ ಭಾರತ ರತ್ನ!



ಅಂತೂ 'ಕರ್ನಾಟಕ ರತ್ನ' ಸಿ.ಎನ್.ಆರ್. ರಾವ್ ಅವರಿಗೆ ಕೇಂದ್ರ ಸರ್ಕಾರ 'ಭಾರತ ರತ್ನ' ಗೌರವವನ್ನು ದಯಪಾಲಿಸಿದೆ. ನೊಬೆಲ್ ಗೌರವವೊಂದನ್ನು ಬಿಟ್ಟು ಅವರ ವಿಜ್ಞಾನ ಕ್ಷೇತ್ರದಲ್ಲಿನ ಎಲ್ಲ ಜಾಗತಿಕ ಪ್ರಶಸ್ತಿ-ಪುರಸ್ಕಾರ-ಗೌರವಗಳಿಗೂ ಭಾಜನರಾಗಿರುವ ಪ್ರೊ. ರಾವ್ ಅವರಿಗೆ ಎಂದೋ ಈ ಗೌರವ ನೀಡಿ ರಾಷ್ಟ್ರ ಕೃತಜ್ಞತೆ ಸಲ್ಲಿಸಬೇಕಿತ್ತು. ಈಗ ಕ್ರಿಕೆಟ್ ತಾರೆ ಸಚಿನ್‌ರ ನಿವೃತ್ತಿ ಸಂದರ್ಭದಲ್ಲಿ ಮಾಧ್ಯಮ ಜಗತ್ತು ತನ್ನ ಮಾರುಕಟ್ಟೆ ಉದ್ದೇಶಗಳಿಗಾಗಿ ಸೃಷ್ಟಿಸಿದ ಜನಪ್ರಿಯತೆಯ ಉಬ್ಬರದ ಒತ್ತಡಕ್ಕೆ ಸಿಕ್ಕಿ ಅವರಿಗೆ ಭಾರತ ರತ್ನ ನೀಡಬೇಕಾಗಿ ಬಂದ ಸಂದರ್ಭದ ತನ್ನ ಪಾಲಿನ ರಾಜಕೀಯ ಲಾಭವನ್ನು ಮರೆಮಾಚಿಕೊಳ್ಳುವ ಪ್ರಯತ್ನವಾಗಷ್ಟೇ ಸರ್ಕಾರ ಪ್ರೊ. ರಾವ್ ಅವರಿಗೆ ಈ ಗೌರವ ನೀಡಿದಂತಿದೆ. ಈ ಸಂದರ್ಭದಲ್ಲಿ ವಿಜ್ಞಾನ ಕ್ಷೇತ್ರವನ್ನು ನಿರ್ಲಕ್ಷಿಸುತ್ತಿರುವ ರಾಜಕಾರಣಿಗಳ ಮೂರ್ಖತನವನ್ನು ಟೀಕಿಸಿರುವ ಮೂಲಕ ಅವರು ಪರೋಕ್ಷವಾಗಿ ಇದನ್ನೇ ಸೂಚಿಸುತ್ತಿರುವಂತಿದೆ.

ಅದೇನೇ ಇರಲಿ, ಪ್ರೊ. ರಾವ್ ಅವರಿಗೆ ತಡವಾಗಿಯಾದರೂ ಈ ಗೌರವ ಸಂದದ್ದು 'ಹೊಸ ಮನುಷ್ಯ'ಕ್ಕೆ ವಿಶೇಷ ಸಂತೋಷ ತಂದಿದೆ. ಕಾರಣ, ರಾಯರು ನಿಜವಾದ ಅರ್ಥದಲ್ಲಿ ಕನ್ನಡದ ಹೆಮ್ಮೆ. ಕನ್ನಡ ಮಾಧ್ಯಮದಲ್ಲೇ ಶಾಲಾ ಶಿಕ್ಷಣ ಪಡೆದು ಜಗತ್ತಿನ ಅತ್ಯುನ್ನತ ವಿಜ್ಞಾನಿಗಳಲ್ಲೊಬ್ಬರಾಗಿ ಮಾನ್ಯತೆ ಪಡೆದಿರುವ ರಾಯರು ಬಹುಪಾಲು ಜನರಂತೆ ಜಾಗತಿಕ ಇಂಗ್ಲಿಷ್ ಪ್ರತಿಷ್ಠೆಯ ದಂತ ಗೋಪುರ ಸೇರಿಕೊಳ್ಳದೆ ಈಗಲೂ ನಮ್ಮ ಮಕ್ಕಳಿಗೆ ವಿಜ್ಞಾನ ವಿಷಯಗಳೂ ಸೇರಿದಂತೆ ಶಾಲಾ ಶಿಕ್ಷಣವನ್ನಾದರೂ ಕನ್ನಡದಲ್ಲಿ ನೀಡಬೇಕೆಂದು ಆಗ್ರಹಿಸುತ್ತಿದ್ದಾರೆ. ಅಷ್ಟೇ ಅಲ್ಲದೆ, ಸ್ವತಃ ತಾವೇ ರಾಜ್ಯದ ಹಲವೆಡೆ ವಿಜ್ಞಾನವನ್ನು ಕನ್ನಡದಲ್ಲಿ ಬೋಧಿಸುವ ಪ್ರಾತ್ಯಕ್ಷಿಕೆಗಳನ್ನೂ ನಡೆಸುತ್ತಿದ್ದಾರೆ. ಆದರೆ ಯಾರ ಮತ್ತು ಯಾವ ವಿವೇಕದ ಮಾತುಗಳಿಗೂ ಕಿವಿಗೊಡದೆ ನಮ್ಮ ಮಕ್ಕಳನ್ನು ತಮ್ಮ ಹುಸಿ ಲೌಕಿಕ ಆಸೆ-ಪ್ರತಿಷ್ಠೆಗಳಿಗಾಗಿ ಇಂಗ್ಲಿಷ್ ಮಾಧ್ಯಮಕ್ಕೆ ತಳ್ಳಿ ಮಕ್ಕಳ ನಿಜ ಜ್ಞಾನ ಸಂಪಾದನೆಗೆ ಚ್ಯುತಿ ತರುತ್ತಿರುವ ಮತ್ತು ಆ ಮೂಲಕ ಈ ದೇಶವನ್ನು ಕುರುಡು ತಂತ್ರಜ್ಞಾನದ ನರಕವನ್ನಾಗಿಸಲು ಕಾರಣರಾಗುತ್ತಿರುವ ನಮ್ಮ ತಂದೆ ತಾಯಿಗಳು ಈಗಲಾದರೂ ಎಚ್ಚೆತ್ತುಕೊಳ್ಳುವುದಾದರೆ ಅದೇ ಈ ಮಹಾನ್ ಕನ್ನಡಿಗನಿಗೆ ಕನ್ನಡಿಗರಾಗಿ ನಾವು ಸಲ್ಲಿಸುವ ನಿಜವಾದ ಗೌರವವಾಗುತ್ತದೆ.

ಅಂದ ಮಾತ್ರಕ್ಕೆ ತೆಂಡೂಲ್ಕರ್ ಪ್ರತಿಭಾವಂತ ಆಟಗಾರನಲ್ಲ ಎಂದಲ್ಲ. ಅವರ ಆಟದ ದಾಖಲೆಗಳೇ ಅವರ ಅನುಪಮ ಪ್ರತಿಭೆಯನ್ನು ಹೇಳುತ್ತವೆ. ಆದರೆ ಕ್ರಿಕೆಟ್ಟಿಗಿಂತ ಹೆಚ್ಚು ಜಾಗತಿಕ ಮಾನ್ಯತೆ ಪಡೆದ ಆಟಗಳಲ್ಲಿ ಇಷ್ಟೇ ಪ್ರತಿಭೆ-ಸಾಧನೆ ಪ್ರದರ್ಶಿಸಿರುವ ಆಟಗಾರರನ್ನು ನಿರ್ಲಕ್ಷಿಸುತ್ತಾ ಬಂದಿರುವ ನಮ್ಮ ಸರ್ಕಾರದ ನೀತಿ ಇಲ್ಲಿ ಪ್ರಶ್ನಾರ್ಹವಾಗಿದೆ. ಮೊನ್ನೆ ಜಾಗತಿಕ ಕ್ರಿಕೆಟ್‌ನ ಇನ್ನೊಂದು ದಂತಕಥೆಯೆನಿಸಿರುವ ವಿವಿಯನ್ ರಿಚರ್ಡ್ಸ್ ವರ್ಣಿಸಿದ ಹಾಗೆ, ತೆಂಡೂಲ್ಕರ್ ಪರಿಪೂರ್ಣ 'ವೃತ್ತಿಪರ' ಆಟಗಾರ. ಅಂದರೆ ಸಚಿನ್‌ಗೆ ಕ್ರಿಕೆಟ್ ಒಂದು ವೃತ್ತಿ. ಅದರಲ್ಲಿ ಆತ ಪರಿಪೂರ್ಣತೆಯನ್ನು ಸಾಧಿಸಿದ್ದಾನೆ. ಇದರ ಬಗ್ಗೆ ಯಾರಿಗೂ ತಕರಾರಿರಲಾರದು.

**–ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಕನ್ನಡ ಮನಸ್ಸನ್ನು ಕುರಿತ ನಿಮ್ಮ ಲೇಖನ ಇಷ್ಟವಾಯಿತು. 'ಅತಿ ದೇಸೀಯತೆಯ ಕನ್ನಡವಷ್ಟೇ ಸಾಕು. ಉಳಿದೇನೂ ಬೇಡ' ಎನ್ನುವ ಧೋರಣೆ ಬಿರುಗಾಳಿಯಾಗುತ್ತಿದೆಯೆಯೋ, ಜ್ಞಾನ, ತಿಳುವಳಿಕೆಗಳ ಕಿಟಕಿಗಳನ್ನೆಲ್ಲ ಮುಚ್ಚುತ್ತಿದೆಯೆಯೋ ಅನ್ನುವ ಆತಂಕ ಹುಟ್ಟುತ್ತಿದೆ. ಅನ್ಯದೊಡನೆ ಸಂವಾದ, ಘರ್ಷಣೆ, ಅನುಸಂಧಾನಗಳಿಲ್ಲದೆ 'ವಿದ್ವತ್ತು' ಕೂಡ ಬೆಳೆಯುವುದಿಲ್ಲ. ಸೃಜನಶೀಲತೆಯೂ ಸಾಧ್ಯವಾಗುವುದಿಲ್ಲ. ಇತ್ತೀಚೆಗೆ ಹಲವು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿದ್ಯಾರ್ಥಿಗಳನ್ನು ಕಂಡಾಗ, ಕನ್ನಡತನ ಅನ್ನುವುದು ಅವರ ಜಡತ್ವ, ಸೋಮಾರಿತನದ ರಕ್ಷಾಕವಚವಾಗಿ ಬಳಕೆಯಾಗುತ್ತಿದೆಯೆಯೋ ಅನ್ನಿಸುತ್ತದೆ. ನಿಮ್ಮ ಲೇಖನ ಕನ್ನಡ ಮನಸ್ಸುಗಳ ಬಗ್ಗೆ ಚರ್ಚೆ ಅಗತ್ಯವೆನಿಸುವಷ್ಟು ಸಮರ್ಥವಾಗಿದೆ. ಥ್ಯಾಂಕ್ಸ್.

ನಾವು ಯಾವು ಯಾವುದನ್ನು ಅತ್ಯಂತ ಮುಖ್ಯ ಸಂಗತಿಗಳು ಎಂದು ಭಾವಿಸಿದ್ದೆವೋ, ಅವು ಯಾವುವೂ ಇವತ್ತಿನ ಲೋಕಕ್ಕೆ ಬೇಕಾಗಿಯೇ ಇಲ್ಲ ಅನ್ನಿಸುತ್ತಾ ನಾವು ಅಪ್ರಸ್ತುತರಾಗುತ್ತಿದ್ದೇವೆ ಎಂಬ ವಿಷಾದ ಆವರಿಸಿದಾಗಲೂ ನಿಮ್ಮ 'ಹೊಸ ಮನುಷ್ಯ'ನ ಸಾಹಸ ಮನಸ್ಸನ್ನು ತುಂಬುತ್ತದೆ. ಇಡೀ ಲೋಕ ಹಾಗಿರಲಿ, ನಮ್ಮ ನಮ್ಮ ಬದುಕು ಅರ್ಥಪೂರ್ಣ ಅನ್ನಿಸುವ ಹಾಗೆ ಕಾಪಾಡುತ್ತಿರುವ ವೈದ್ಯರು ನೀವು.

**–ಓ.ಎಲ್. ನಾಗಭೂಷಣ ಸ್ವಾಮಿ,** ಬೆಂಗಳೂರು

'ಸಮಕಾಲೀನ'ದಲ್ಲಿನ ಸುದೀರ್ಘವಾದ ನಿಮ್ಮ 'ಕನ್ನಡಕ್ಕಿದು ಕಷ್ಟಕಾಲ' ಲೇಖನವನ್ನು ಓದುತ್ತಾ ಅದು 'ನನ್ನ ಕನ್ನಡಕ್ಕಿದು ಕಷ್ಟಕಾಲ'ವಾಗಿಬಿಟ್ಟಿತು. ಚರಿತ್ರೆಯ ಬೆಳಕಲ್ಲಿ ಇಂದಿನ ಸಮಸ್ಯೆಯನ್ನು ಗುರುತಿಸುತ್ತಾ ಕೊನೆಗೆ ಒಕ್ಕೂಟ ಸಂಸ್ಕೃತಿಯ ವೈಫಲ್ಯದಿಂದಾಗಿ ಪ್ರಾದೇಶಿಕ ಸಂಸ್ಕೃತಿ ಮೂಲೆಗುಂಪಾಗುತ್ತಿರುವುದನ್ನು ಎತ್ತಿ ತೋರಿಸಿದ್ದು ವಿಶೇಷವಾಗಿದೆ. ಪ್ರಾಮಾಣಿಕವಾದ ಕನ್ನಡ ಮನಸ್ಸಿನ ಆತಂಕವೇನು ಎಂಬುದನ್ನು ಬಿಡಿಸಿ ಹೇಳಿರುವುದು ಕೂಡ ವಿಶೇಷವೇ.

ಕೆ.ಪಿ. ನಟರಾಜರ ಗೋಳು ನನ್ನಂತಹ ಗಣಿತಶಾಸ್ತ್ರ ಉಪನ್ಯಾಸಕಿಯ ಗೋಳೂ ಆಗಿದೆ. ಬರಿಯ ಕನ್ನಡವಷ್ಟೇ ಅಲ್ಲ, ಯಾವ ವಿಜ್ಞಾನದ ವಿಷಯವನ್ನೂ ಕೂಡ ಈ ವಿಜ್ಞಾನ ವಿದ್ಯಾರ್ಥಿಗಳು ಗ್ರಹಿಸಲಾರರು, ಯೋಚಿಸಲಾರರು. ಯಾವುದರಲ್ಲೂ ಮನಃಪೂರ್ವಕವಾಗಿ ತೊಡಗಲಾರರು. ಮಾತೃಭಾಷೆಯಲ್ಲಿ ಕಲಿಯದಿರುವುದೇ ಈ ಎಲ್ಲ ಶೈಕ್ಷಣಿಕ, ಸಾಮಾಜಿಕ ಸಮಸ್ಯೆಗಳ ಮೂಲ ಎಂಬುದು ನನ್ನ ಬಲವಾದ ನಂಬಿಕೆ. ಒಟ್ಟಿನಲ್ಲಿ ನೀವಂದಂತೆ ಕನ್ನಡಕ್ಕಿದು ಕಷ್ಟಕಾಲವೇ!

**–ಟಿ.ಎಲ್. ರೇಖಾಂಬ,** ಶಂಕರಘಟ್ಟ

ಕನ್ನಡ ಮನಸ್ಸನ್ನು ಕುರಿತ ನಿಮ್ಮ ಲೇಖನ ನಮ್ಮಂತಹ ಹೊಸ ಮನಸ್ಸುಗಳಿಗೆ ಅನೇಕ ಹೊಸ ಪಾಠಗಳನ್ನು ಹೇಳಿದಂತಿದೆ.

**–ಬಿ.ವಿ. ಸುರೇಂದ್ರ,** ಧಾರವಾಡ

ನೀನಾಸಂ ಶಿಬಿರ ಕುರಿತ ನಿಮ್ಮ ಮಾತು ಮನ ತಟ್ಟಿತು. ಅನಂತಮೂರ್ತಿಯವರನ್ನು ಕುರಿತ ಮಾತು ಹೃದಯ ತಟ್ಟಿತು.

**–ಕೆ.ಪಿ. ಮೃತ್ಯುಂಜಯ,** ಬಜಗೋಳಿ(ದ.ಕ.)

# ನಮಗೆ ಎಂತಹ ಅಭಿವೃದ್ಧಿ ಬೇಕು?: ಶಿವಮೊಗ್ಗದಲ್ಲಿ ವಿಚಾರ ಸಂಕಿರಣ



**ಹ**ಳ್ಳಿಯ ಜನ ಹಳ್ಳಿಯಲ್ಲಿಯೇ ಉಳಿಯುವಂತೆ ಮಾಡುವುದೇ ಇಂದು ನಿಜವಾದ ಅಭಿವೃದ್ಧಿ ಎನಿಸಿಕೊಳ್ಳಬಲ್ಲದು ಎಂದು ಹೆಗ್ಗೋಡಿನ 'ಚರಕ'ದ ಪ್ರಸನ್ನ ಹೇಳಿದರು. ಅವರು ಇದೇ ಅಕ್ಟೋಬರ್ ೨೭ರಂದು ಶಿವಮೊಗ್ಗದ ಬಿ. ಕೃಷ್ಣಪ್ಪ ಗೆಳೆಯರ ಬಳಗವು ದಲಿತ ನಾಯಕ ಪ್ರೊ. ಬಿ. ಕೃಷ್ಣಪ್ಪನವರ ವಾರ್ಷಿಕ ನೆನಪಿನ ಕಾರ್ಯಕ್ರಮದ ಅಂಗವಾಗಿ ಸಾಗರದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ, ಬೆಂಗಳೂರಿನ ಬಿ.ಕೃಷ್ಣಪ್ಪ ಟ್ರಸ್ಟ್ ಹಾಗೂ ಶಿವಮೊಗ್ಗದ 'ಸೃಷ್ಟಿ' ಸಾಂಸ್ಕೃತಿಕ ವೇದಿಕೆಗಳ ಸಂಯುಕ್ತ ಆಶ್ರಯದಲ್ಲಿ ಶಿವಮೊಗ್ಗದ ಕಮಲಾ ನೆಹ್ರೂ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಏರ್ಪಡಿಸಿದ್ದ 'ನಮಗೆ ಎಂತಹ ಅಭಿವೃದ್ಧಿ ಬೇಕು?' ವಿಷಯ ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಶ್ರಮ ಸಂಸ್ಕೃತಿಯನ್ನು ನಾಶ ಮಾಡಿ ಯಂತ್ರ ಸಂಸ್ಕೃತಿಯ ಸರಕುಗಳ ಬಳಕೆಯನ್ನು ಆಧರಿಸಿದ ಜೀವನ ಶೈಲಿಯನ್ನು ನಾವು ಅಳವಡಿಸಿಕೊಂಡಿದ್ದೇ, ಹಳ್ಳಿಗರೂ ಯಂತ್ರ ನಾಗರೀಕತೆಗೆ ಬಲಿಯಾಗಿ ನಗರಗಳಿಗೆ ಗುಳೆ ಹೋಗುವಂತಹ ಪರಿಸ್ಥಿತಿಗೆ ಕಾರಣವಾಗಿದೆ ಎಂದ ಅವರು, ಶ್ರಮ ಸಂಸ್ಕೃತಿಯನ್ನು ಆಧರಿಸಿದ ಜೀವನ ಶೈಲಿಯ ಪರವಾದ ಹೋರಾಟಗಳನ್ನು ನಾವಿಂದು ಹಳ್ಳಿಗಳಿಂದಲೇ ಆರಂಭಿಸಬೇಕಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಆಶಯ ನುಡಿಗಳನ್ನಾಡಿದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ಅವರು, ಭೂಮಿಯನ್ನು ಒಂದು ಭೌತ ವಸ್ತುವಿನಂತೆ ನೋಡಲಾರಂಭಿಸಿದ ಐರೋಪ್ಯ ಪುನರುಜ್ಜೀವನ ಯುಗದ ತಾತ್ವಿಕ ದೃಷ್ಟಿಕೋನವನ್ನು ಆಧುನಿಕತೆಯ ಹೆಸರಿನಲ್ಲಿ ಬೇಷರತ್ತಾಗಿ ಒಪ್ಪಿಕೊಂಡುದುದೇ ಯಂತ್ರ ಸಂಸ್ಕೃತಿಗೆ ನಾವು ಶರಣಾಗಿರಲು ಮೂಲ ಕಾರಣವಾಗಿದೆ ಎಂದರು. ಈ ಯಂತ್ರ ಸಂಸ್ಕೃತಿಯ ಹಿಂದಿನ ಬಂಡವಾಳ ಹೂಡಿಕೆಯ ಪ್ರವೃತ್ತಿಯು ತಾನು ಉಳಿದು ಬೆಳೆಯಲು, ಅಗತ್ಯ ಮತ್ತು ಆಸೆಗಳ ನಡುವಣ ವ್ಯತ್ಯಾಸಗಳನ್ನೇ ಅಳಿಸಿಹಾಕಿ, 'ಅಭಿವೃದ್ಧಿ' ಎಂಬ ಮಾಯಾಜಿಂಕೆಯನ್ನು ಸೃಷ್ಟಿಸಿ ನಮ್ಮ ಮುಂದೆ ಬಿಟ್ಟಿದೆ ಎಂದರು.

ಲೇಖಕಿ ಡಾ. ಸಬಿತಾ ಬನ್ನಾಡಿ ಮಾತನಾಡಿ, ಅಭಿವೃದ್ಧಿಯ ಈ ಆಟಕ್ಕೆ ಮಹಿಳೆಯನ್ನು ಸಾಧನವಾಗಿ ಬಳಸಿಕೊಳ್ಳುತ್ತಿರುವ ರೀತಿ ನೀತಿಗಳು ಬದುಕಿನ ಅಮಾನವೀಕರಣಕ್ಕೆ ಕಾರಣವಾಗುತ್ತಿರುವ ಪರಿಯನ್ನು ವಿವರಿಸಿದರು. ಬಿ. ಕೃಷ್ಣಪ್ಪ ಟ್ರಸ್ಟಿನ ಅಧ್ಯಕ್ಷೆ ಇಂದಿರಾ ಕೃಷ್ಣಪ್ಪನವರು ಮಾತನಾಡಿ, ಈ ದೇಶದ ಬಡವರನ್ನು ದಮನ ಮಾಡುವ ಅಭಿವೃದ್ಧಿ ಇಂದು ಚಾಲ್ತಿಯಲ್ಲಿದ್ದು, ನರೇಂದ್ರ ಮೋದಿ ಇಂತಹ ಅಭಿವೃದ್ಧಿಯ ಒಂದು ಪ್ರತೀಕವಾಗಿದ್ದಾರೆ ಎಂದರು. ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ. ರಾಚಪ್ಪನವರು ಮಾತನಾಡುತ್ತಾ, ಅನ್ನ, ನೀರು, ಸೂರು, ಬಟ್ಟೆ, ಶಿಕ್ಷಣ ಇತ್ಯಾದಿ ಮೂಲಭೂತ ಅವಶ್ಯಕತೆಗಳನ್ನು ಒದಗಿಸದ ಯಾವುದೇ ಅಭಿವೃದ್ಧಿಯ ಮಾತು ಇಂದು ನಿರರ್ಥಕ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ 'ಸೃಷ್ಟಿ'ಯ ಸಂಚಾಲಕ ಪ್ರೊ. ಎಂ. ಬಿ. ನಟರಾಜ್ ಮಾತನಾಡಿ, 'ಅಭಿವೃದ್ಧಿ' ಎಂಬ ಪರಿಕಲ್ಪನೆ ಅದು ಚಾಲ್ತಿಗೆ ಬಂದಾಗಿನಿಂದಲೂ ಚರ್ಚೆಯ ವಸ್ತುವಾಗಿದ್ದು, ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಅದು ನಿರ್ಣಾಯಕ ಹಂತ ತಲುಪಿದೆ ಎಂದರು.

(ವರದಿ: **ಸವಿತಾ ನಾಗಭೂಷಣ**)

# ಬೆಂಗಳೂರಿನಲ್ಲಿ ಆಚಾರ್ಯ ನರೇಂದ್ರ ದೇವ ಅವರ ಸ್ಮರಣೆ

**ಗಾ**ಂಧಿ ಮತ್ತು ನೆಹ್ರೂರಂತಹ ಎರಡು ಆಲದ ಮರಗಳಿಂದ ದೂರವೇ ಉಳಿದು ಬೆಳೆದ ಸಮಾಜವಾದಿಗಳು ಹಲವು ವಿಭಜನೆಗಳಿಗೆ ತುತ್ತಾದರಾದರೂ, ಇಂದಿಗೂ ಭಾರತದ ರಾಜಕಾರಣದಲ್ಲಿ ಅವರ ದಟ್ಟ ಪ್ರಭಾವವನ್ನು ಗುರುತಿಸಬಹುದಾಗಿದೆ ಎಂದು ಇತಿಹಾಸ ಪ್ರಾಧ್ಯಾಪಕ ಪ್ರೊ. ಬಿಳಿಗೆರೆ ಕೃಷ್ಣಮೂರ್ತಿ ಹೇಳಿದರು. ಅವರು ಇದೇ ನವೆಂಬರ್ ೧೭ರಂದು ಬೆಂಗಳೂರಿನ ಸಮಾಜವಾದಿ ಅಧ್ಯಯನ ಕೇಂದ್ರ, ಗಾಂಧಿ ಸ್ಮಾರಕ ನಿಧಿ ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಗಳ ಸಂಯುಕ್ತ ಆಶ್ರಯದಲ್ಲಿ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ ಆಚಾರ್ಯ ನರೇಂದ್ರದೇವ ಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. ನರೇಂದ್ರ ದೇವ ಗಾಂಧಿಗೆ ಹತ್ತಿರವಾಗಿದ್ದ ಸಮಾಜವಾದಿ ಎಂದ ಕೃಷ್ಣಮೂರ್ತಿ, ಗಾಂಧಿ ನಿರಂತರ ಹರಿವ ನದಿಯಾಗಿದ್ದು, ಸಮಾಜವಾದಿಗಳು ಇಂದು ಗಾಂಧಿಯೊಂದಿಗೆ ಸಂವಾದ ಮಾಡಲು ಸಕಾಲವಾಗಿದೆ ಎಂದರು.

ಸಮಾಜವಾದವನ್ನು ಕುರಿತ ಗಾಂಧಿ ದೃಷ್ಟಿಕೋನದ ಬಗ್ಗೆ ಮಾತನಾಡಿದ ಬೆಂಗಳೂರಿನ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂ.ಡೇ. ಪಿ ಕೃಷ್ಣ ಅವರು ಸತ್ಯ, ಅಹಿಂಸೆ, ಸರಳ ಜೀವನ, ಅಧ್ಯಾತ್ಮ ಪ್ರಣೀತ ಆರ್ಥಿಕ ಚಿಂತನೆ, ಟ್ರಸ್ಟೀಷಿಪ್‌ಗಳ ಪರವಾಗಿದ್ದ ಗಾಂಧೀಜಿಯದ್ದು ಮಾನವೀಯ ಸಮಾಜವಾದ ಎಂದು ಹೇಳಿದರು

ಕಾರ್ಯಕ್ರಮವನ್ನು ಉದ್ಘಾಟಿಸಿದ ಹಿರಿಯ ಗಾಂಧಿವಾದಿ ಹೊ. ಶ್ರೀನಿವಾಸಯ್ಯನವರು ಗಾಂಧಿ–ನರೇಂದ್ರದೇವ ಅವರ ನಡುವಣ ನಿಕಟ ಸಂಪರ್ಕವನ್ನು ವಿವರಿಸಿ, ಇಂದು ಗಾಂಧಿವಾದ ಮತ್ತು ಸಮಾಜವಾದ ಜೊತೆಜೊತೆಯಾಗಿ ಹೆಜ್ಜೆಯಿಟ್ಟು ನಡೆಯಬೇಕಾಗಿದೆ ಎಂದರು.



ಇದಕ್ಕೆ ಮೊದಲು ಕಾರ್ಯಕ್ರಮದ ಪ್ರಸ್ತಾವಿಕ ನುಡಿಗಳನ್ನಾಡಿದ ಸಮಾಜವಾದಿ ಅಧ್ಯಯನ ಕೇಂದ್ರದ ಪ್ರೊ. ಹನುಮಂತ ಅವರು ಗಾಂಧಿ ಮತ್ತು ಸಮಾಜವಾದಿಗಳ ನಡುವೆ ಆಕರ್ಷಣೆ–ವಿಕರ್ಷಣೆಗಳ ಪ್ರಭಾವ ಮತ್ತು ಸಂಬಂಧವಿದ್ದು, ಇಂದು ಗಾಂಧಿವಾದಿಗಳು ಮತ್ತು ಸವಾಜವಾದಿಗಳಿಬ್ಬರೂ ಒಟ್ಟುಗೂಡಿ ಯುವ ಜನತೆಯನ್ನು ಸಮಾಜವಾದದತ್ತ ಸೆಳೆಯಬೇಕಾಗಿದೆ ಎಂದರು

ಹಿರಿಯ ಗಾಂಧಿವಾದಿ ವಿ.ಪಿ. ಮೆನನ್, ಸಮಾಜವಾದಿ ಅಧ್ಯಯನ ಕೇಂದ್ರದ ಬಾಪು ಹೆದ್ದೂರ್‌ಶೆಟ್ಟಿ, ಶ್ರೀಕಂಠಮೂರ್ತಿ, ದಲಿತ ಚಳವಳಿಯ ಚಿಂತಕ ಲಕ್ಷ್ಮೀನಾರಾಯಣ ನಾಗವಾರ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

(ವರದಿ: **ಖಾದ್ರಿ ಎಸ್. ಅಚ್ಯುತನ್**)

# ನಮ್ಮ ಸಮಾಜವಾದಿಗಳು | ಸಮನ್ವಯ ಸಮಾಜವಾದಿ ಖಾದ್ರಿ ಶಾಮಣ್ಣ



ಕರ್ನಾಟಕದಲ್ಲಿ ಚಳವಳಿ ಮತ್ತು ಪತ್ರಿಕೋದ್ಯಮವನ್ನು ಜೊತೆ ಜೊತೆಯಾಗಿ ಹೊಂದಿಸಿಕೊಂಡು ಈ ಎರಡೂ ಕ್ಷೇತ್ರಗಳಿಗೆ ವಿಶಿಷ್ಟ ಕೊಡುಗೆ ನೀಡಿದ ಕೆಲವೇ ಪ್ರತಿಭೆಗಳಲ್ಲಿ ಖಾದ್ರಿ ಶಾಮಣ್ಣ ಎದ್ದು ಕಾಣುವ ವ್ಯಕ್ತಿತ್ವ. ನಾಡಿನಲ್ಲಿ ಸಮಾಜವಾದಿ ಚಳವಳಿ ಹುಟ್ಟು ಹಾಕಿದ ಗೆಳೆಯರ ಗುಂಪಿನ ಗಟ್ಟಿ ಕುಳ ಇವರು.

ಮೇಲುಕೋಟೆಯ ಸಾಂಪ್ರದಾಯಿಕ ಪರಿಸರದಿಂದ ಬಂಡೆದ್ದು ಬಂದ ಖಾದ್ರಿ ಶಾಮಣ್ಣ ಅವರಿಗೆ ಮನೆಯ ಪರಿಸರದಲ್ಲೇ ಸ್ವಾತಂತ್ರ್ಯ ಸಂಗ್ರಾಮದ ಪರಿಚಯ ಮಾಡಿಸಿದವರು ಅವರ ಚಿಕ್ಕಪ್ಪ.. ಬಾಲ್ಯದಲ್ಲಿ ಮದ್ರಾಸಿನ ಮೆರಿನಾ ಕಡಲ ತೀರದಲ್ಲಿ ರಾಷ್ಟ್ರ ನಾಯಕರ ಭಾಷಣಗಳಿಗೆ ಎಳೆಯ ಶಾಮಣ್ಣ ಅವರನ್ನು ಅವರು ಕರೆದುಕೊಂಡು ಹೋಗುತ್ತಿದ್ದರು. ನಂತರ ಪ್ರೌಢಶಾಲೆಗೆ ಬರುವ ವೇಳೆಗೆ ಆ ಕಾಲದ ಎಲ್ಲ ಭಾರತೀಯ ಯುವಜನರಲ್ಲಿ ಹೊಂಗನಸನ್ನು ಚಿಗುರಿಸಿದ್ದ ವಿವೇಕಾನಂದರಿಂದ ಗಾಂಧೀಜಿಯವರೆಗಿನ ನವೋದಯದ ದೊಡ್ಡ ಬೀಸಿನ ಪ್ರಭಾವಕ್ಕೆ ಸಿಕ್ಕಿದರು. ಹೊಸ ಭಾರತವನ್ನು ಕಾಣುವ ತವಕ. ಯಾವ ಪರಿವೆಯೂ ಇಲ್ಲ ಯಾರ ಅಂಜಿಕೆಯೂ ಇಲ್ಲ. ಸ್ವಾತಂತ್ರ್ಯ ಆಂದೋಲನದೊಂದಿಗೆ ಸಹಜವಾಗಿ ಮೂಡಿಬಂದದ್ದು ಅಧ್ಯಯನ ಶೀಲತೆ. ಶಾಲೆ, ಕಾಲೇಜುಗಳಲ್ಲಿ ಓದಿನಲ್ಲಿ ಮುಂದು. ಅದರೊಟ್ಟಿಗೆ ಶಾಲೆಯ ಹೊರಗೆ ಕಲಿತದ್ದು ಅಪಾರ. ಪತ್ರಿಕೆಗಳು, ಪುಸ್ತಕಗಳು ಎಡಬಿಡದ ಸಂಗಾತಿಗಳು.

ಆಗ ಗಾಂಧೀಜಿ ನಂತರ ಯುವ ಜನರಿಗೆ ಮುಖ್ಯ ಆಕರ್ಷಣೆ ನೆಹರು ಮತ್ತು ಜಯಪ್ರಕಾಶ್‌ನಾರಾಯಣ್. ಸಹಜವಾಗಿಯೇ ಯುವಕರಲ್ಲಿ ಎರಡು ಕವಲು. ಆದರೆ ಅದು ವೈಚಾರಿಕ ನೆಲೆಗಟ್ಟಿನದು. ಹಜಾರಿಬಾಗ್ ಸೆರೆಮನೆಯ ಗೋಡೆಗಳನ್ನು ಹಾರಿ ಹೊರಬಂದು ಭೂಗತರಾಗಿ ವಿದ್ಯಾರ್ಥಿ ಚಳವಳಿಯನ್ನು ದಿಗ್ದರ್ಶಿಸಿದ ಜೆಪಿ ಕಡೆ ಖಾದ್ರಿಯಂತಹ ಬಂಡಾಯದ ವ್ಯಕ್ತಿತ್ವಕ್ಕೆ ಸಹಜವಾಗಿಯೇ ಒಲವು. ಖಾದ್ರಿ ಮೈಸೂರಿನಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಸಂಘಟಿಸುವುದರಲ್ಲಿ ತೊಡಗಿಸಿಕೊಂಡರು. " ಇಗೋ ಹೊರಟೆವು ಬಿಡುಗಡೆಗಾಗಿ ಬಹರಾರು ನಮಗಿದಿರಾಗಿ..." –ವರಕವಿ ಬೇಂದ್ರೆ ಅವರ ಸಾಲುಗಳು ಖಾದ್ರಿಯಂತಹ ಯುವಕರ ನಾಲಿಗೆಯ ಮೇಲೆ ನಲಿದಾಡಿದವು.

ಮನೆಯಲ್ಲಿ ಅಜ್ಜನ ಬಲವಂತಕ್ಕೆ ಮೈಸೂರಿನ ಲಕ್ಷ್ಮೀಪುರದ ಸಾಹುಕಾರರ ಮನೆಯ ಮುಂದೆ ಒಂದು ರೂಪಾಯಿ ಸ್ಕಾಲರ್‌ಶಿಪ್‌ಗಾಗಿ ಜುಟ್ಟು ಬಿಟ್ಟುಕೊಂಡು ನಾಮ ಹಾಕಿಕೊಂಡು ನಿಲ್ಲಬೇಕಾಗುತ್ತಿತ್ತು. ಭಿಕ್ಷೆಯಂತೆ ಆ ಮನೆಯವರು ನೀಡುತ್ತಿದ್ದ ಒಂದು ರೂಪಾಯಿ ಖಾದ್ರಿ ಶಾಮಣ್ಣ ಜಾತಿ ವಿರುದ್ಧ ಸಿಡಿದೇಳಲು ಮೂಲವಾಯಿತು. ಅಲ್ಲೇ ಸಮತೆಗಾಗಿ ತುಡಿತ ಅವರ ಮನದಾಳದಲ್ಲಿ ಪುಟಿಯಿತು. ಅವರಿಗೆ ಮನೆಯವರು ಸೇರಿ ಜನಿವಾರ ಹಾಕಿದಾಗ, ಉಪನಯನದ ಸ್ಥಳದಿಂದ ಹೊರಬಂದ ಕೂಡಲೇ ಅದನ್ನು ಕಿತ್ತೆಸೆದರು. ಎಂಜಲಿನಿಂದ ಹಣೆಯ ಮೇಲಿನ ನಾಮವನ್ನು ಅಳಿಸಿಕೊಂಡವರು ಮತ್ತೆಂದೂ ಅವುಗಳ ಗೋಜಿಗೆ ಹೋಗಲಿಲ್ಲ. ಪ್ರಬಂಧ ಸ್ಪರ್ಧೆಯಲ್ಲಿ ಬಂದ ಐದು ರೂಪಾಯಿ ಬಹುಮಾನ ಗಾಂಧೀಜೀಯವರ 'ಯಂಗ್ ಇಂಡಿಯಾ' ಸಂಪುಟ ಕೊಳ್ಳಲು ಬಳಕೆಯಾಯಿತು. ಖಾದ್ರಿಯವರೇ ತಮ್ಮ ಆ ದಿನಗಳನ್ನು ನೆನಪಿಸಿಕೊಳ್ಳುತ್ತಾ ಗಣಿತದ ತರಗತಿಯಲ್ಲಿ ಕುಳಿತು ಕಾರ್ಲ್ ಮಾರ್ಕ್ಸ್‌ನ 'ದಾಸ್ ಕ್ಯಾಪಿಟಲ್' ಓದುತ್ತಿದ್ದುದ್ದಾಗಿ ಒಂದು ಕಡೆ ಹೇಳಿರುವುದು ಆ ಕಾಲದಲ್ಲಿ ಸಾಮ್ಯವಾದದ ಪ್ರಭಾವ ವಿದ್ಯಾರ್ಥಿ ಸಮುದಾಯದ ಮೇಲೆ ಎಷ್ಟು ದಟ್ಟವಾಗಿತ್ತು ಎಂಬುದನ್ನು ಸೂಚಿಸುತ್ತದೆ. ಹಾಗೇ, ಗಾಂಧೀಜೀಯ ಆತ್ಮಕಥೆ ಹಾಗೂ 'ಹಿಂದ್‌ಸ್ವರಾಜ್' ಪುಸ್ತಕಗಳು ನಮ್ಮ ಹತ್ತಿರದ ಗೆಳೆಯರೆಲ್ಲರನ್ನೂ ಹೇಗೊ ಮೋಡಿ ಮಾಡಿತ್ತು ಎಂಬುದನ್ನೂ ಅವರು ಇನ್ನೊಂದು ಕಡೆ ಬರೆದಿದ್ದಾರೆ.

ಮೈಸೂರಿನಲ್ಲಿ ವಿದ್ಯಾರ್ಥಿ ಚಳುವಳಿ ನಂತರ ಸಹಜವಾಗಿ ಸೋಷಲಿಸ್ಟ್ ಆಂದೋಲನಕ್ಕೆ ಹೊರಳಿತು. ಇಂಟರ್‌ಮಿಡೀಯಟ್ ಓದಿಗಾಗಿ ಯುವರಾಜ ಕಾಲೇಜ್ ವಿದ್ಯಾರ್ಥಿಯಾಗಿದ್ದಾಗ ಕಾಲೇಜಿನ ಗ್ರಂಥ ಭಂಡಾರದಲ್ಲಿ ಖಾದ್ರಿ ಮತ್ತು ಅವರ ಗೆಳೆಯರ ಗುಂಪು ನಾಡ ಬಾಂಬ್ ಒಂದನ್ನು ಸ್ಫೋಟಿಸಿತು. ಖಾದ್ರಿ ಸೆರೆಮನೆ ಸೇರಿದರು. ಅಲ್ಲಿಗೆ ವಿದ್ಯಾಭ್ಯಾಸಕ್ಕೆ ವಿದಾಯ. ಲೋಕ ಜೀವನ ಶಿಕ್ಷಣಕ್ಕೆ ಪದಾರ್ಪಣೆ. ಜೈಲಿನಿಂದ ಬಂದ ಮೇಲೆ ೧೯೪೪ರ ಮಧ್ಯ ಭಾಗದಲ್ಲಿ 'ಜನವಾಣಿ' ಪತ್ರಿಕೆ ಉಪಸಂಪಾದಕ. ಅದೇ ವರ್ಷ ನವಂಬರ್‌ನಲ್ಲಿ ಗಾಂಧೀಜೀಯವರ ಸೇವಾ ಗ್ರಾಮಕ್ಕೆ. ಬಾಪುಗೆ ಬರುತ್ತಿದ್ದ ನೂರಾರು ಪತ್ರಿಕೆಗಳು, ಮುಖ್ಯ ಇಂಗ್ಲೀಷ್ ಪತ್ರಿಕೆಗಳನ್ನು ಓದಿ ಗಾಂಧಿಜೀ ಅವಗಾಹನೆಗಾಗಿ ಕತ್ತರಿಸಿಡುವ ಕೆಲಸ ಖಾದ್ರಿಯವರ ಪಾಲಿಗೆ.

ಸೇವಾಗ್ರಾಮದಿಂದ ಮರಳಿ ಬಂದ ಮೇಲೆ ಗೆಳೆಯರ ಜತೆಗೂಡಿ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಸಂಘಟಿಸುವ ತೀರ್ಮಾನ. ಅದಕ್ಕೆ ಚೈತನ್ಯ ತುಂಬುವ ಕೆಲಸವನ್ನು ಕಮಲಾದೇವಿ ಚಟ್ಟೋಪಾಧ್ಯಾಯ ಕೈಗೊಂಡಿದ್ದರು. ಇದರ ಅಂಗವಾಗಿ ಜೆಪಿ ಕರ್ನಾಟಕವನ್ನು ಸಂಚರಿಸಿದಾಗ ಅವರ ನಿಕಟ ಸಂಪರ್ಕಕ್ಕೆ ಬಂದರು. ಮಂಗಳೂರಿನಲ್ಲಿ ಕರ್ನಾಟಕದ ಸಮಾಜವಾದಿಗಳ ಸಮ್ಮೇಳನದಲ್ಲಿ ಪಾಲ್ಗೊಂಡು ನಂತರ ಕಮಲಾದೇವಿಯವರ ಅಣತಿಯಂತೆ ಮುಂಬೈಯಿಂದ 'ಜಾಗೃತಿ' ವಾರಪತ್ರಿಕೆ ಆರಂಭಿಸಲು ಅಲ್ಲಿಗೆ ನಡೆದರು. ಬೆಂಗಳೂರಿಗೆ ೨೦೦೦ ಪ್ರತಿಗಳು ಬರುತ್ತಿದ್ದವು. ಬಂದ ಕೆಲವೇ ತಾಸುಗಳಲ್ಲಿ ಎಲ್ಲ ಖರ್ಚಾಗಿ ಹೋಗುತ್ತಿತ್ತು. ಮೆಜೆಸ್ಟಿಕ್ ಚೌಕದಿಂದ ಬಳೆಪೇಟೆ ಚೌಕದವರೆಗೆ ಸೋಷಲಿಸ್ಟ್ ಸಂಗಾತಿಗಳೆಲ್ಲಾ ಘೋಷಣೆ ಕೂಗುತ್ತಾ 'ಜಾಗೃತಿ' ಪತ್ರಿಕೆ ಮಾರುತ್ತಿದ್ದರು. ಪತ್ರಿಕೆಯ ಮೂಲಕ ಪಾರ್ಟಿ ಕಟ್ಟಿದರು. ರಾಜ್ಯಾದ್ಯಂತ ವೈ.ಆರ್. ಪರಮೇಶ್ವರಪ್ಪ (ಅಣ್ಣಯ್ಯ), ಗೋಪಾಲಗೌಡ, ಜಿ. ಸದಾಶಿವರಾವ್, ಧಾರವಾಡದ ನರಿಬೋಳ ಮುಂತಾದ ಪ್ರತಿಭಾಶಾಲಿ ದಿಟ್ಟ ಹುಡುಗರ ಕೂಟವೇ ಎದ್ದು ನಿಂತಿತು.

೧೯೪೮ರಲ್ಲಿ 'ಜಾಗೃತಿ' ಪತ್ರಿಕೆ ಬೆಂಗಳೂರಿಗೆ ಬಂತು. ಆಗ ಜವಾಬ್ದಾರಿ ಸರ್ಕಾರಕ್ಕಾಗಿ ರಾಜ್ಯದಲ್ಲಿ ನಡೆದಿದ್ದ 'ಮೈಸೂರು ಚಲೋ' ಹೋರಾಟದಲ್ಲಿ ಸೋಷಲಿಸ್ಟರು ಭಾಗಿಗಳಾಗಿದ್ದರು. ಖಾದ್ರಿಯವರೇ ಪತ್ರಿಕೆಯ ಸಂಪಾದಕ, ಪ್ರಕಾಶಕ ಹಾಗೂ ಮುದ್ರಕ. ಆಗತಾನೇ ಅಧಿಕಾರಕ್ಕೆ ಬಂದ ಕೆ.ಸಿ. ರೆಡ್ಡಿಯವರ ಸರ್ಕಾರ ಪತ್ರಿಕೆಯಿಂದ ಕೇಳಿದ ೫೦೦೦ ರೂಪಾಯಿ ಠೇವಣಿ ಕೊಡಲಾಗದೆ ಪತ್ರಿಕೆ ಮುಚ್ಚಿಹೋಯಿತು. ಅದೇ ವರ್ಷ ನಾಸಿಕ್‌ನಲ್ಲಿ ಸಮಾಜವಾದಿ ಸಮ್ಮೇಳನ. ಖಾದ್ರಿ ಭಾಗವಹಿಸಿದ್ದರು. ಸೋಷಲಿಸ್ಟರು ಕಾಂಗ್ರೆಸ್ ಪಕ್ಷ ತೊರೆಯಲು ನಿರ್ಧರಿಸಿದರು. ಆಗ ಸಿಜಿಕೆ ರೆಡ್ಡಿಯವರ ಜತೆ ಕೂಡಿಕೊಂಡು 'ಪ್ರಜಾವಾಣಿ' ಪತ್ರಿಕೆ ಹುಟ್ಟಿನೊಡನೆ ನಂಟು. ಅದರ ಸುದ್ದಿ ಸಂಪಾದಕ ಹಾಗೂ ಜಂಟಿ ಸಂಪಾದಕರೂ ಆದರು. ಆದರೆ ಹೋರಾಟದ ಮನೋಭಾವ ಬಿಡದ ಖಾದ್ರಿ ಸಿಜಿಕೆ ಜತೆಗೂಡಿ ಹಿಂದುಸ್ಥಾನ್ ವಿಮಾನಕಾರ್ಖಾನೆ ಕಾರ್ಮಿಕ ಮುಷ್ಕರ ಸಂಘಟನೆ ಮಾಡಿದ್ದರಿಂದಾಗಿ 'ಪ್ರಜಾವಾಣಿ'ಗೆ ರಾಜೀನಾಮೆ ನೀಡಿದರು. ಮತ್ತೆ ೧೯೫೨ರ ಮೊದಲ ಚುನಾವಣೆಯವರೆಗೂ ಸೋಷಲಿಸ್ಟ್ ಪಾರ್ಟಿ ಸಂಘಟನೆಯಲ್ಲಿ ತೊಡಗಿಕೊಂಡು ಕಾಗೋಡು

ಸತ್ಯಾಗ್ರಹದಲ್ಲಿ ಭಾಗಿಯಾದರು. ಶಿವಮೊಗ್ಗದಲ್ಲಿ ನೆಲೆಯೂರಿ ಶಾಂತವೇರಿಯವರ ಜತೆಗೂಡಿ ಸಮಾಜವಾದಿ ಚಳವಳಿಗೆ ಅಡಿಪಾಯ ಹಾಕುವುದರಲ್ಲಿ ಖಾದ್ರಿ ಶಾಮಣ್ಣ, ಗರುಡಶರ್ಮಾ ಹಾಗೂ ಬಾಸು ಕೃಷ್ಣಮೂರ್ತಿ ಈ ತ್ರಿಮೂರ್ತಿಗಳ ಪರಿಶ್ರಮ ನಂತರದ ಪೀಳಿಗೆಯ ಸಮಾಜವಾದಿಗಳಿಗೆ ಅಪರಿಚಿತವಾದ ಆಯಾಮ. 'ನೀವು ಸೋಷಲಿಸ್ಟ್ ಪಾರ್ಟಿ ಸೇರಬೇಕು ಎಂದು ಶಾಮಣ್ಣ ನಿನ್ನೆ ತಾನೇ ಬಂದು ನನ್ನನ್ನು ರಾಜಕೀಯಕ್ಕೆ ಎಳೆದು ತಂದನೇನೋ ಎನ್ನುವಷ್ಟು ಆ ನೆನಪು ಹಸಿರಾಗಿದೆ' ಎಂದು ಜೆ.ಹೆಚ್. ಪಟೇಲರು ಖಾದ್ರಿ ಶಾಮಣ್ಣ ೧೯೮೦ರ ಮೇನಲ್ಲಿ ತೀರಿಕೊಂಡ ನಂತರ ಅವರನ್ನು ಈ ಲೇಖಕ ಭೇಟಿಯಾದಾಗ ಹೇಳಿದ ಮಾತು ಈ ವಿದ್ಯಮಾನಕ್ಕೆ ಜ್ವಲಂತ ಉದಾಹರಣೆ.

೫೨ರ ಚುನಾವಣೆಯಲ್ಲಿ ಖಾದ್ರಿಯವರು ತುಮಕೂರು ಲೋಕಸಭಾ ಸ್ಥಾನಕ್ಕೆ ಸ್ಪರ್ಧಿಸಿದರು. ಖರ್ಚು ಮಾಡಿದ ಹಣ ಕೇವಲ ೩೫೦ ರೂಪಾಯಿ. ಟಾಂಗಾ ಗಾಡಿಯಲ್ಲಿ ಪ್ರಚಾರ. ಸೋತರೂ ಠೇವಣಿ ಉಳಿಯಿತು. ಚುನಾವಣೆ ನಂತರ ಸೋಷಲಿಸ್ಟ್ ಪಕ್ಷ ಪ್ರಜಾ ಸೋಷಲಿಸ್ಟ್ ಪಕ್ಷವಾಗಿ;ಆನಂತರ ಆ ಪಕ್ಷ ಹಲವು ಗೊಂದಲಗಳಿಗೆ ಸಿಕ್ಕಿದ ಮೇಲೆ ಜೆಪಿ ಸರ್ವೋದಯದ ಕಡೆ ವಾಲಿದಾಗ ಇವರೂ ಅವರನ್ನು ಹಿಂಬಾಲಿಸಿದರು.

ನಂತರ 'ಪತ್ರಿಕೋದ್ಯಮವೇ ನಿನ್ನ ಸ್ವಧರ್ಮ' ಎಂದು ಅವರ ಗುರು ಸಮಾನರಾದ ಸಿದ್ದವನಹಳ್ಳಿ ಕೃಷ್ಣಶರ್ಮರ ಹಿತನುಡಿಯಿಂದಾಗಿ ಖಾದ್ರಿ ಶಾಮಣ್ಣ ಪತ್ರಿಕೋದ್ಯಮದತ್ತ ನಡೆದರು. ಆದರೂ ಸೋಷಲಿಸ್ಟ್ ನಂಟು ಮುಂದುವರಿದೇ ಇತ್ತು. ಡಾ. ಲೋಹಿಯಾ, ಮಧುಲಿಮಯೆ, ಸುರೇಂದ್ರಮೋಹನ್, ಮಧು ದಂಡವತೆ, ರಾಜ್‌ನಾರಾಯಣ್, ರಬಿರಾಯ್ ಅವರೊಡನೆ ಕೊನೆಯ ತನಕ ನಿಕಟ ನಂಟು ಹೊಂದಿದ್ದರು. ಪತ್ರಿಕೋದ್ಯಮ ಖಾದ್ರಿ ಅವರಿಗೆ ಸಮಾಜವಾದಿ ವಿಚಾರಧಾರೆ ಪ್ರಚುರ ಪಡಿಸಲು ಸಾಧನವಾಗಿತ್ತು. ಜೆಪಿ ಹಾಗೂ ಲೋಹಿಯಾ ಅವರನ್ನು ತಮ್ಮ ಲೇಖನಗಳಲ್ಲಿ ಸಮನ್ವಯಗೊಳಿಸಿ ಬರೆಯುತ್ತಿದ್ದ ಅವರ ಶೈಲಿ ಖಾದ್ರಿ ಅವರು ಬೆಳೆದು ಬಂದ ಸಮನ್ವಯದ ಬದುಕಿಗೆ ಅನುರೂಪವಾಗಿತ್ತು.

ಖಾದ್ರಿಯವರ ನಿಧನಾನಂತರ ಮಧುಲಿಮಯೆ ಅವರನ್ನು ನಾನು ಭೇಟಿಯಾದಾಗ ಅವರು ಕರ್ನಾಟಕದ ಸೋಷಲಿಸ್ಟರನ್ನು ಪ್ರತಿಭಾವಂತರೆಂದು ಮೆಚ್ಚಿಕೊಂಡರಾದರೂ ಅವರಲ್ಲಿ ಕೆಲವರು ತಮ್ಮ ಆರೋಗ್ಯ ಹಾಳು ಮಾಡಿಕೊಂಡ ಪರಿಯ ಬಗ್ಗೆ ವ್ಯಥೆ ವ್ಯಕ್ತ ಪಡಿಸಿದರು. ಹಾಗೆಯೇ ಮುಂಬೈನಲ್ಲಿ ಜಾರ್ಜ್ ಅವರನ್ನು ಭೇಟಿಯಾದಾಗ, 'ಖಾದ್ರಿ ಶಾಮಣ್ಣ ನಾ ಕಂಡ ಪರಮ ಮಾನವತಾವಾದಿ' ಎಂದು ಭಾವುಕರಾದರು. ಸಮೀಪಕ್ಕೆ ಬಂದವರಿಗೆ ಸುಲಭ ಸ್ನೇಹಿಯಾದ ಖಾದ್ರಿ ಹತ್ತಿರವಾಗದವರಿಗೆ ಅರ್ಥವಾಗುವುದು ದುಸ್ತರ.

**–ಖಾದ್ರಿ ಎಸ್. ಅಚ್ಯುತನ್**

# ಮುವ್ವರು ಸಮಾಜವಾದಿ ಮಿತ್ರರಿಗೆ ರಾಜ್ಯೋತ್ಸವ ಪ್ರಶಸ್ತಿ







**ಈ** ಬಾರಿ ನಮ್ಮ ಮುವ್ವರು ಸಮಾಜವಾದಿ ಮಿತ್ರರಿಗೆ, ನಮ್ಮ ಪತ್ರಿಕೆಯ ಮೂವ್ವರು ಓದುಗರಿಗೆ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಅವರೆಂದರೆ, ಕೃಷಿ ಮತ್ತು ಪರಿಸರ ಕ್ಷೇತ್ರದಲ್ಲಿನ ಸಾಧನೆಗಾಗಿ ರಾಮನಗರ ಜಿಲ್ಲೆಯ ಅರಳಾಳು ಸಂದ್ರದ ಅನಸೂಯಮ್ಮ, ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ತುಮಕೂರಿನ ಕೆ.ಬಿ.ಸಿದ್ಧಯ್ಯ ಹಾಗೂ ಪತ್ರಿಕೋದ್ಯಮದಲ್ಲಿನ ಸಾಧನೆಗಾಗಿ ಹಾಸನದ ಆರ್.ಪಿ. ವೆಂಕಟೇಶ ಮೂರ್ತಿ.

ಔಪಚಾರಿಕವಾಗಿ ಅಷ್ಟೇನೂ ಶಿಕ್ಷಣ ಪಡೆಯದ ಅನಸೂಯಮ್ಮ ೮೦ರ ದಶಕದಿಂದಲೇ, ತಮ್ಮೂರಿನಲ್ಲಿ ಸ್ಥಾಪಿತವಾದ ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯದ ಕೆಲಸಗಳೊಂದಿಗೆ ಗುರುತಿಸಿಕೊಂಡು, ನಂತರ ರೈತ ಚಳುವಳಿಯ ನಾಯಕಿಯಾಗಿ ಬೆಳೆದವರು. ಕನಕಪುರ ಸುತ್ತಮುತ್ತ ನಡೆಯುತ್ತಿದ್ದ ಕಲ್ಲು ಗಣಿಗಾರಿಕೆ ಹಾಗೂ ಗುಂಡೂರಾಯರ ಕಾಲದ ರೈತರ ಮನೆಗಳ ಜಪ್ತಿ ವಿರುದ್ಧದ ಚಳುವಳಿಗಳುಲ್ಲಿ ದಿಟ್ಟ ಹೋರಾಟ ಪ್ರದರ್ಶಿಸಿದ ಅನುಸೂಯಮ್ಮ ರೈತ ಮತ್ತು ಪರಿಸರ ಸಮಸ್ಯೆಗಳ ಕುರಿತಾದ ಅನೇಕ ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲೂ ಭಾಗವಹಿಸಿದ್ದಾರೆ.

ದಲಿತ ಸಂವೇದನೆಯ ಮುಖ್ಯ ಕವಿಗಳಲ್ಲೊಬ್ಬರಾದ ಕೆ.ಬಿ. ಸಿದ್ಧಯ್ಯ ತಮ್ಮ ವಿದ್ಯಾರ್ಥಿ ದೆಸೆಯಲ್ಲಿಯೇ ರಾಮಮನೋಹರ ಲೋಹಿಯಾರ ವಿಚಾರಗಳಿಂದ ಆಕರ್ಷಿತರಾಗಿ ಸಮಾಜವಾದಿ ಯುವಜನ ಸಭಾದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದವರು. ನಂತರ ದಲಿತ ಮತ್ತು ರೈತ ಚಳುವಳಿಗಳೆಡರಲ್ಲೂ ಸಕ್ರಿಯವಾಗಿ ತೊಡಗಿಕೊಂಡಿದ್ದ ಇವರು ಗಾಂಧಿ–ಲೋಹಿಯಾ–ಅಂಬೇಡ್ಕರ್ ಈ ಮುವ್ವರಿಂದಲೂ ಪಡೆಯಬೇಕಾದ್ದನ್ನು ಪಡೆದು ಇಂದಿನ ಕಾಲದ ಬಿಕ್ಕಟ್ಟುಗಳನ್ನು ಎದುರಿಸಬೇಕಾಗಿದೆ ಎಂದು ನಂಬಿರುವವರು. ಸಿದ್ಧಯ್ಯ, ಭಗವಾನ್ ಬುದ್ಧ ಮತ್ತು ಅಲ್ಲಮರ ಲೋಕದೃಷ್ಟಿಯಿಂದ ಪ್ರಭಾವಿತರಾಗಿ ಕಾವ್ಯ ರಚನೆಯಲ್ಲಿ ತೊಡಗಿರುವವರು.

ಆರ್.ಪಿ. ವೆಂಕಟೇಶ ಮೂರ್ತಿ ಎಪ್ಪತ್ತರ ದಶಕದಲ್ಲಿ ಜೆಪಿ ಚಳುವಳಿಯಿಂದ ಪ್ರಭಾವಿತರಾಗಿ ಸಮಾಜವಾದಿ ಚಳುವಳಿಗೆ ಬಂದವರು. ಎಪ್ಪತ್ತರ ದಶಕದಲ್ಲಿ ಹಾಸನದಲ್ಲಿ ತಮ್ಮ ಸಮಾಜವಾದಿ ಗೆಳೆಯರೊಂದಿಗೆ 'ಜನತಾ ಮಾಧ್ಯಮ' ಎಂಬ ಪತ್ರಿಕೆಯನ್ನು ಆರಂಭಿಸಿ ಅದರ ಸಂಪಾದಕರಾಗಿ ಈವರೆಗೂ ಯಶಸ್ವಿಯಾಗಿ–ಜಿಲ್ಲೆಯ ಅತಿ ಜನಪ್ರಿಯ ಪತ್ರಿಕೆಯಾಗಿ–ನಡೆಸಿಕೊಂಡು ಬಂದ ಹೆಗ್ಗಳಿಕೆ ಅವರದ್ದು. ಜೊತೆಗೆ ಎಂಭತ್ತರ ದಶಕದಲ್ಲಿ ರೈತ ಚಳುವಳಿಯನ್ನು ಕಟ್ಟಿ ಬೆಳೆಸಿದ ಪ್ರಮುಖ ಯುವ ನಾಯಕರಲ್ಲಿ ಇವರೂ ಒಬ್ಬರು.

ಈ ಮೂವರನ್ನು 'ಹೊಸ ಮನುಷ್ಯ' ಹಾರ್ದಿಕವಾಗಿ ಅಭಿನಂದಿಸುತ್ತದೆ.

# ಪ್ರೊ. ಹನುಮಂತ ಅವರಿಗೆ 'ಜೆಪಿ' ಪ್ರಶಸ್ತಿ



ಇದೇ ಸಂದರ್ಭದಲ್ಲಿ ನಮ್ಮ ಓದುಗರೊಂದಿಗೆ ಹಂಚಿಕೊಳ್ಳಬೇಕಾದ ಮತ್ತೊಂದು ಸಂತೋಷದ ಸುದ್ದಿಯೆಂದರೆ, ನಮ್ಮ ಪತ್ರಿಕೆಯ ಇನ್ನೋರ್ವ ಓದುಗರೂ, ಹಿರಿಯ ಸಮಾಜವಾದಿಯೂ ಆದ ಪ್ರೊ. ಹನುಮಂತ ಅವರಿಗೆ ಭಾರತ ಯಾತ್ರಾ ಕೇಂದ್ರದವರು ಜೆಪಿ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ ಎಂಬುದು. ಸಮಾಜವಾದಿ ಚಳುವಳಿಗೆ ವಿಶಿಷ್ಟ ಕೊಡುಗೆ ಸಲ್ಲಿಸಿದವರಿಗೆ ಜಯಪ್ರಕಾಶ್ ನಾರಾಯಣರ ಹುಟ್ಟುಹಬ್ಬವಾದ ಅಕ್ಟೋಬರ್ ೧೧ರಂದು ಪ್ರದಾನ ಮಾಡಲಾಗುವ ಈ ಪ್ರಶಸ್ತಿಯನ್ನು ಹೋದ ವರ್ಷ ಮಂಗಳೂರಿನ ಹಿರಿಯ ಸಮಾಜವಾದಿ ಅಮ್ಮೆಂಬಳ ಆನಂದ ಅವರಿಗೆ ನೀಡಲಾಗಿತ್ತು.

ಎಪ್ಪತ್ತರ ದಶಕದಿಂದಲೂ ಸಮಾಜವಾದಿ ವಿಚಾರ ಧಾರೆಯ ಪ್ರಚಾರದಲ್ಲಿ ಹಲವು ಬಗೆಯಲ್ಲಿ ತೊಡಗಿಕೊಂಡು ತಮ್ಮ ಸಹಮನಸ್ಕ ಗೆಳೆಯರೊಂದಿಗೆ ಬೆಂಗಳೂರಿನಲ್ಲಿ ಸಮಾಜವಾದಿ ಅಧ್ಯಯನ ಕೇಂದ್ರವೊಂದನ್ನು ನಡೆಸುತ್ತಿರುವ ಹನುಮಂತ ಅವರು ನಿವೃತ್ತ ಕನ್ನಡ ಪ್ರಾಧ್ಯಾಪಕರು. ಇವರಿಗೂ ನಮ್ಮ ಹಾರ್ದಿಕ ಅಭಿನಂದನೆಗಳು.

**–ಸಂಪಾದಕ**

## ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ-೧೩

–ಇಂದಿರಾ ಬಿ.ಕೃಷ್ಣಪ್ಪ

# ದೊಡ್ಡದಾದ ಕುಟುಂಬ; ಆರಂಭವಾದ ನನ್ನ ಉದ್ಯೋಗ ಪರ್ವ

**ಶಿ**ವಮೊಗ್ಗ ಜಿಲ್ಲೆ ಕುಂಸಿ ಹೋಬಳಿ, ಹುಬ್ಬನಹಳ್ಳಿಯಲ್ಲಿ ಒಂದು ಪದ್ಧತಿ ಇತ್ತು. ದಲಿತರು ಸಾರ್ವಜನಿಕ ಬಾವಿಯಿಂದ ನೀರು ಸೇದುವಂತಿರಲಿಲ್ಲ. ನೂರು ಮನೆಗಳಿರುವ ಆ ಗ್ರಾಮದಲ್ಲಿ ದಲಿತರ ೧೨ ಕುಟುಂಬಗಳೂ, ದೇವಾಂಗದವರ ೪೯ ಕುಟುಂಬಗಳೂ, ಮತ್ತಿತರರು ವಾಸವಿದ್ದರು. ದಲಿತರು ಕುಡಿಯುವ ನೀರಿಗಾಗಿ, ಬಾವಿಕಟ್ಟೆ ಬಳಿ ಬರಬೇಕಿತ್ತು. ಅಲ್ಲಿ, ಮೇಲ್ಜಾತಿಯವರು, ನೀರು ಸೇದಿಹಾಕಿದಾಗ ಮಾತ್ರ ಇವರು ಕುಡಿಯುವ ನೀರು ಪಡೆಯಬಹುದಾಗಿತ್ತು. ಇಂತಹ ವ್ಯವಸ್ಥೆಯ ವಿರುದ್ಧ, ಶಿವಮೊಗ್ಗ ಜಿಲ್ಲೆಯಲ್ಲಿ ಅದಾಗ ತಾನೇ ಸಂಘಟಿತರಾಗುತ್ತಿದ್ದ, ವಿದ್ಯಾರ್ಥಿಗಳಾದ ಹೆಚ್. ನಾಗರಾಜ್, ಹೆಚ್. ಲಕ್ಷ್ಮಣ್ ಹಾಗೂ ಎ.ಆರ್. ಪರಮೇಶ್ವರಪ್ಪ ಇವರು ದಲಿತ ಮಹಿಳೆಯೊಬ್ಬಳಿಂದ ಸಾರ್ವಜನಿಕ ಬಾವಿಯಿಂದ ನೀರು ಸೇದುವ ಮೂಲಕ ಸಮಸ್ಯೆಯನ್ನು ಬಗೆಹರಿಸಲು, ಕೃಷ್ಣಪ್ಪನವರೊಂದಿಗೆ ಚರ್ಚಿಸಿ ಮುಂದಡಿಯಿಟ್ಟರು. ನಿಗದಿತ ದಿನದಂದು ಸಾರ್ವಜನಿಕ ಬಾವಿಯಿಂದ ದಲಿತ ಮಹಿಳೆಯಿಂದ ನೀರನ್ನು ಸೇದಿಸೆಯೇ ಬಿಟ್ಟರು. ಊರಿನ ಲಿಂಗಾಯಿತರು, ದೇವಾಂಗದವರು ಇವರಿಗೆ ಬಹಿಷ್ಕಾರ ಹಾಕಿದರು, ಅವರಿಗಾಗಿ ಪ್ರತ್ಯೇಕ ಬಾವಿಯನ್ನೇ ತೋಡಿಕೊಂಡರು. ಇದನ್ನು ಕೃಷ್ಣಪ್ಪ ನನಗೆ ಬಹಳ ವಿವರವಾಗಿ ತಿಳಿಸಿದ್ದರು. ಇದು ನನ್ನ ಮನದಾಳದಲ್ಲಿ ತಳಮಳವನ್ನುಂಟುಮಾಡಿತ್ತು. ಇದನ್ನೇ ಕಥಾವಸ್ತುವನ್ನಾಗಿ ಮಾಡಿಕೊಂಡು, ನಾನು "ಕೆಂಚವ್ವ ನೀರು ಸೇದಿದಳು" ಎಂಬ ಸಣ್ಣಕತೆಯೊಂದನ್ನು ಬರೆದೆ. ಇದು ೧೯೭೫ ರಲ್ಲಿ, ಹೆಚ್. ಹಾಲಪ್ಪನವರ ಸಂಪಾದಕತ್ವದಲ್ಲಿ ಶಿವಮೊಗ್ಗ ಜಿಲ್ಲಾ ಹೊಸ ಬರಹಗಾರರ ಕಥಾಸಂಕಲನ 'ಆಗಮನ'ದಲ್ಲಿ ಪ್ರಕಟವಾಯಿತು. ಈ ಕಥಾಸಂಕಲನದ ವಿಮರ್ಶೆಯನ್ನು 'ಕನ್ನಡಪ್ರಭ' ಪತ್ರಿಕೆಯಲ್ಲಿ, ವಿಮರ್ಶಕ ಡಿ.ಎ.ಶಂಕರ್‌ರವರು ಮಾಡುತ್ತಾ, ಈ ಕತೆ ಬಗ್ಗೆ ನಾಲ್ಕಾರು ಮೆಚ್ಚುಗೆಯ ನುಡಿಗಳನ್ನು ಬರೆದದ್ದು, ಸಣ್ಣಕತೆಗಳನ್ನು ಬರೆಯಲು ನನಗೆ ಸ್ಫೂರ್ತಿ ನೀಡಿತ್ತು.

ಕೌಟುಂಬಿಕವಾಗಿ ಯಾವುದೇ ಯೋಜನೆಗಳಿಲ್ಲದ ನಮಗೆ ಮಗಳು ಶಾಲಿನಿಗೆ ಒಂದುವರ್ಷವಾಗುವುದರೊಳಗೆ ನಾನು ಪುನಃ ಗರ್ಭಿಣಿಯಾಗಿದ್ದು ತಿಳಿದು ಬರಲೇ ಇಲ್ಲ. ಅನ್ಯಕಾರಣದ ನಿಮಿತ್ತ ವೈದ್ಯರ ಬಳಿಗೆ ಹೋದಾಗಲೇ ನಾನು ಗರ್ಭಿಣಿ ಎಂಬುದು ತಿಳಿದು ಬಂದದ್ದು.. ಆರ್ಥಿಕ ಸ್ಥಿತಿ ಉತ್ತಮವಿಲ್ಲದ್ದು ಮತ್ತು ಮಗು ಶಾಲಿನಿಯ ಆರೈಕೆಯ ಭಾರ ಇವುಗಳಿಂದ ಈ ಮಗು ಈಗ ಬೇಡ ಎಂಬ ಆಲೋಚನೆ ತಲೆ ತುಂಬಿಕೊಂಡಿತ್ತು. ಹಾಗೊಮ್ಮೆ ವೈದ್ಯರನ್ನು ಸಂಪರ್ಕಿಸಿದಾಗ, ಈಗಾಗಲೇ ನಾಲ್ಕು ತಿಂಗಳಾಗಿರುವುದರಿಂದ ಗರ್ಭ ಇಳಿಸಲು ಸಾಧ್ಯವಿಲ್ಲವೆಂದು ತಿಳಿಸಿದ್ದರಿಂದ, ಚಿಂತಾಕ್ರಾಂತಳಾದೆ.. ನನ್ನ ಮನಸ್ಥಿತಿಯನ್ನು ಕೃಷ್ಣಪ್ಪನವರೊಡನೆ ಹಂಚಿಕೊಳ್ಳಲಾಗದ ದುಗುಡಗಳು ನನ್ನಲ್ಲಿ ಮಡುವುಗಟ್ಟಿಕೊಂಡಿತ್ತು. ಆದರೆ ಕೃಷ್ಣಪ್ಪ ಮಗು ಬೇಕೆ, ಬೇಡವೇ? ಎಂಬ ಬಗ್ಗೆ ತಲೆಕೆಡಿಸಿಕೊಳ್ಳಲೇ ಇಲ್ಲ.

ಇದೇ ಸಂದರ್ಭದಲ್ಲಿ ಕೆ.ಪಿ.ಎಸ್.ಸಿ ಪ್ರಕಟಣೆ ಮೇರೆಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಅದ್ಯಾವಗಲೋ ಹಾಕಿದ್ದ ಅರ್ಜಿಯಂತೆ, ಪರೀಕ್ಷೆಯ ಪ್ರವೇಶ ಪತ್ರ ಬಂದುಬಿಟ್ಟಿತು. ಹೊಟ್ಟೆಯೊಲ್ಲೊಂದು ಕೂಸು, ಕೈಯಲ್ಲೊಂದು ಕೂಸು; ಹೇಗಪ್ಪ ಓದಲಿ ಎಂಬ ತಲ್ಲಣಗಳೊಂದಿಗೇ ಪರೀಕ್ಷಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೆ. ಶಿವಮೊಗ್ಗದ ದೇಶೀಯ ವಿದ್ಯಾಶಾಲೆಯಲ್ಲಿ ಎರಡು ಹೊತ್ತು ಪರೀಕ್ಷೆ ಇದ್ದಿತು. ಪರೀಕ್ಷೆಯ ದಿನ ಬಂದೇ ಬಿಟ್ಟಿತು. ಭಾನುವಾರವಾದ್ದರಿಂದ ಕೃಷ್ಣಪ್ಪ ನನ್ನೊಡನೆ ಮಗಳನ್ನು ಕರೆದುಕೊಂಡು ಹೊರಟರು. ನಾನು ಕೊಠಡಿಯಲ್ಲಿ ಪರೀಕ್ಷೆ



**ತಮ್ಮ ಎರಡನೇ ಮಗಳು ಸೀಮಾಳ ನಾಮಕರಣ ಸಂದರ್ಭದಲ್ಲಿ ಬಿ. ಕೃಷ್ಣಪ್ಪ, ಗೆಳೆಯರಾದ ನಿಸಾರ್ ಅಹಮದ್, ಶಿವಲಿಂಗಪ್ಪ, ಮಾರಪ್ಪ, ಹನುಮಂತಪ್ಪ, ಟಿ. ರಾಜಣ್ಣ, ದಿ. ತಿರುಮಲೇಶ್, ಎಂ. ಚಂದ್ರಶೇಖರಯ್ಯ, ಕಮ್ಯೂನಿಸ್ಟ್ ಮಾನೆ, ತಿಪ್ಪೇಸ್ವಾಮಿ ಮುಂತಾದವರೊಂದಿಗೆ**

ಬರೆಯುತ್ತಿದ್ದರೆ, ಕೃಷ್ಣಪ್ಪ ಶಾಲಿನಿಯನ್ನು ಆಡಿಸಿಕೊಂಡು, ನೆಹರೂ ಪಾರ್ಕಿನಲ್ಲಿದ್ದು, ಆಗಾಗ್ಗೆ ಕಿಟಕಿಯಿಂದ ಮಗಳಿಗೆ ಅಮ್ಮನನ್ನು ತೋರಿಸಿಕೊಂಡು ಅಡ್ಡಾಡುತ್ತಿದ್ದರು. ಅರ್ಧಗಂಟೆಯ ಮಧ್ಯಾಹ್ನದ ಬಿಡುವಿನಲ್ಲಿ ಅವರು ಹೋಟೆಲ್‌ನಿಂದ ಕಟ್ಟಿಸಿಕೊಂಡು ಬಂದಿದ್ದ ತಿಂಡಿಯನ್ನು ಅದೇ ಪಾರ್ಕಿನಲ್ಲಿ ಕುಳಿತು ತಿಂದಿದ್ದೆವು. ನಂತರ ಪುನಃ ನಾನು ಮಧ್ಯಾಹ್ನದ ಪರೀಕ್ಷೆ ಬರೆಯಲು ಹೋಗಿದ್ದೆ. ಸಂಜೆ ಪರೀಕ್ಷೆ ಮುಗಿದ ನಂತರ, ಕೃಷ್ಣಪ್ಪನವರ ಹೆಗಲ ಮೇಲೆ ನಿದ್ದೆ ಮಾಡಿದ್ದ ಮಗಳನ್ನು ನನ್ನ ತೆಕ್ಕೆಗೆ ಹಾಕಿದ್ದರು. ನಾನು ಪರೀಕ್ಷೆ ಬರೆಯುವ ಬಗ್ಗೆಯಾಗಲೀ, ನೌಕರಿ ಮಾಡುವ ಬಗ್ಗೆಯಾಗಲೀ ಕೃಷ್ಣಪ್ಪನವರು ನಿರ್ಬಂಧಗಳನ್ನಾಗಲೀ, ಅಥವ ಷರತ್ತುಗಳನ್ನಾಗಲೀ ವಿಧಿಸಿರಲಿಲ್ಲ. ನೌಕರಿ ಸೇರುವುದು ಅಥವ ಬಿಡುವುದನ್ನು ನನ್ನ ಆಯ್ಕೆಗೆ ಬಿಟ್ಟಿದ್ದರು. ನಾನು ಕೆಲಸಕ್ಕೆ ಸೇರುವ ಬಗ್ಗೆ, ಉದ್ಯೋಗಸ್ಥಳಾದ ನಂತರ ಕುಟುಂಬ ನಿರ್ವಹಣೆ ಜವಾಬ್ದಾರಿಯ ಸಮಾನ ಹಂಚಿಕೆಗೆ ಕೃಷ್ಣಪ್ಪ ತೆರೆದ ಮನಸ್ಸಿನವರಾಗಿದ್ದರು. ಇವುಗಳು ನಮ್ಮ ನಡುವೆ ಚರ್ಚೆಯ ವಿಷಯವಾಗಲಿಲ್ಲ ಮತ್ತು ಸಮಸ್ಯೆಯಾಗಿ ಬರಲೇ ಇಲ್ಲ. ದಿನನಿತ್ಯ ಬೆಳಿಗ್ಗೆ ಶಾಲೆ–ಕಾಲೇಜು–ಕಚೇರಿಗೆ ತೆರಳುವ ಸಿದ್ಧತೆ ಎಲ್ಲರೂ ಕೂಡಿಮಾಡುವ ಪರಿಕ್ರಮ ನಮ್ಮಲ್ಲಿ ತನ್ನಷ್ಟಕ್ಕೇ ತಾನೇ ಬೆಳೆದುಬಿಟ್ಟಿತು. ಶಿವಮೊಗ್ಗದ ನೆಹರೂ ಪಾರ್ಕ್ ಮುಂದೆ ಹಾದು ಹೋಗುವಾಗಲೆಲ್ಲಾ ನನಗೆ ಅಂದಿನ ದಿನದ ನೆನಪು ಆವರಿಸಿಕೊಳ್ಳುತ್ತದೆ.

ನಮಗೆ ಇನ್ನೊಂದು ಮಗು ಬೇಕೇ? ಬೇಡವೇ? ಬೇಕಾದರೆ ಯಾವಾಗ? ಎಂಬ ನಿರ್ಧಾರ ತೆಗೆದುಕೊಳ್ಳುವ ಮುನ್ನವೇ, ನಾನು ಗರ್ಭಿಣಿಯಾಗಿದ್ದರಿಂದ, ನಮ್ಮ ಮುಂದೆ ಯಾವುದೇ ಆಯ್ಕೆಯ ಪ್ರಶ್ನೆ ಉಳಿದಿರಲೇ ಇಲ್ಲ. ಇದರಿಂದ ಬೇಜಾರಾದ ನಾನು ಒಂಭತ್ತು ತಿಂಗಳು ತುಂಬುವವರೆಗೂ ತಪಾಸಣೆಗೆ ವೈದ್ಯರ ಬಳಿ ಹೋಗಲೇ ಇಲ್ಲ. ಕೃಷ್ಣಪ್ಪ, ನಿರಂತರವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಉಪನ್ಯಾಸಕ ವೃತ್ತಿಯಲ್ಲಿ ಮಗ್ನರಾಗೇಬಿಟ್ಟಿದ್ದರು. ವೈದ್ಯರ ಬಳಿ ತಪಾಸಣೆಗೆ ಹೋಗಬೇಕೆಂದು ಅವರು ಒತ್ತಾಯವನ್ನು ಮಾಡಲಿಲ್ಲ. ಬಚ್ಚಿಮಾರಂತೂ ಕಾಗದ ನಗರದಲ್ಲಿ ಬಹಳ ದೂರದಲ್ಲಿದ್ದರು. ಹೆರಿಗೆಯ ದಿನಗಳು ಹತ್ತಿರವಾದಂತೆ ನನ್ನಲ್ಲಿ ಭಯ ಆವರಿಸಿಕೊಳ್ಳತೊಡಗಿತು. ಹೆರಿಗೆಯ ದಿನ ತಿಳಿದುಕೊಂಡು ಸಿದ್ಧತೆ ಮಾಡಿಕೊಳ್ಳಲೇಬೇಕೆಂದು ಮನಸ್ಸು ಒತ್ತಾಯ ಪಡಿಸುತ್ತಿತ್ತು. ಇವರಿಗೊಮ್ಮೆ ಒತ್ತಾಯ ಮಾಡಿ ನ್ಯೂಟೌನ್ ಆಸ್ಪತ್ರೆಯ ವೈದ್ಯರಾಗಿದ್ದ 'ಬೇಬಿ' ಅವರ ಮನೆಗೆ (ಬಚ್ಚಿಮ್ಮಾರವರ ಅಣ್ಣನ ಮಗಳು) ತಪಾಸಣೆಗೆ ಹೋಗಿದ್ದೆವು. ಅವರು ಮರುದಿನ ವಿದೇಶಕ್ಕೆ ಹೋಗುವ ತಯಾರಿಯಲ್ಲಿದ್ದರೂ ಸಹ ನನ್ನನ್ನು ಪರೀಕ್ಷಿಸಿ,

ಹಲವಾರು ಮಾತ್ರೆಗಳನ್ನು ಬರೆದುಕೊಟ್ಟರು. ಮನೆಗೆ ಹಿಂತಿರುಗಿ ರಾತ್ರಿ ಮಾತ್ರೆಗಳನ್ನು ತಿಂದು ಮಲಗಿದ ಸ್ವಲ್ಪ ಹೊತ್ತಿಗೆ ನನಗೆ ವಿಲವಿಲನೆ ಒದ್ದಾಡುವಂತಾಗಿತ್ತು. ಏಳಲೂ ಆಗದ, ಕೂರಲೂ ಆಗದ ಸ್ಥಿತಿಯಲ್ಲಿ, ಪದೇಪದೇ ಮೂತ್ರಕ್ಕೆ ಹೋಗುವ ಪರಿಸ್ಥಿತಿ ನನ್ನದಾಗಿಬಿಟ್ಟಿತು. ಇಡೀ ರಾತ್ರಿ ಈ ಸ್ಥಿತಿಯಲ್ಲಿ ಕೃಷ್ಣಪ್ಪ ನನ್ನನ್ನು ಮಗುವಿನಂತೆ ಸಂಭಾಳಿಸಿದರು. ಬೆಳಗ್ಗಿನ ೪ ಗಂಟೆಗೇ ನನಗೆ ಹೆರಿಗೆ ನೋವು ಶುರುವಾಗಿಬಿಟ್ಟಿತು. ಯಾವುದೇ ಪೂರ್ವತಯಾರಿ ಇಲ್ಲದ ನಾವು, ಎದುರು ಮನೆಯ ಮುಸ್ತಾಕ್ ಮತ್ತು ಇವರು ತಂದ ಕಾರಲ್ಲಿ ವಿ.ಐ.ಎಸ್.ಎಲ್. ಆಸ್ಪತ್ರೆಗೆ ಹೊರಟೆವು. ನಾವು ಅಲ್ಲಿ ತಲುಪಲು ಐದು ನಿಮಿಷ ತಡವಾಗಿದ್ದರೂ, ಕಾರಿನಲ್ಲೇ ನನಗೆ ಹೆರಿಗೆಯಾಗಿ ಬಿಡುತ್ತಿತ್ತು. ಸ್ಟ್ರೆಚರ್ ಮೇಲೆ ಹಾಕಿದ ಐದು ನಿಮಿಷದೊಳಗೆ ಹೆರಿಗೆಯಾಗಿತ್ತು. ಹಿಂದಿನ ದಿನ ಪರೀಕ್ಷಿಸಿದ ವೈದ್ಯರು ಇನ್ನು ೧೫ ದಿನಗಳ ಕಾಲಾವಕಾಶ ಹೇಳಿದ್ದರು.

ಅದೇನೇ ಇದ್ದರೂ, ಮಾನಸಿಕವಾಗಿ, ಆರ್ಥಿಕವಾಗಿ ಮತ್ತು ಅಗತ್ಯ ಸೌಕರ್ಯಗಳಿಂದ ಸಿದ್ಧರಿಲ್ಲದ ನಾವು ತಕ್ಷಣಕ್ಕೆ ನಮ್ಮ ಮನೆಗೆ ಆಗಮಿಸಿದ ಎಳೆಯ ಹೊಸ ಅತಿಥಿಯನ್ನು ಸಂತೋಷದಿಂದಲೇ ಬರಮಾಡಿಕೊಂಡೆವು. ಕೃಷ್ಣಪ್ಪ ತಮ್ಮ ದಿನಚರಿ ಪುಸ್ತಕದಲ್ಲಿ ಈ ಇಬ್ಬರೂ ಮಕ್ಕಳು ಹುಟ್ಟಿದ ದಿನ ಹಾಗು ವೇಳೆಯನ್ನು 'ಮೈ ಫರ್ಸ್ಟ್ ಬೇಬಿ ಬಾರ್ನ್ ಆನ್ ೨೨.೦೨.೧೯೭೫' ಮತ್ತು 'ಮೈ ಸೆಕೆಂಡ್ ಬೇಬಿ ಬಾರ್ನ್ ಆನ್ ೧೦.೧೦.೧೯೭೬' ಎಂದು ದಿನಚರಿಯಲ್ಲಿ ದಾಖಲಿಸಿಕೊಂಡಿದ್ದರು. ಒಂದು ತಿಂಗಳ ನಂತರ ದಲಿತ ಸಂಘರ್ಷ ಸಮಿತಿ ಮತ್ತು ಅಧ್ಯಾಪಕ ಮಿತ್ರರೊಡಗೂಡಿದ ಒಂದು ಕಿರು ಸಮಾರಂಭದಲ್ಲಿ ಮಗಳಿಗೆ ಸೀಮಾ ಎಂದೂ ನಾಮಕರಣ ಮಾಡಲಾಯಿತು.

ಮಗುವಿಗೆ ಐದು ತಿಂಗಳು ತುಂಬಿದ ಸಮಯದಲ್ಲಿ ಮನೆಗೊಂದು ಅಂಚೆ ಬಂದಿತ್ತು. ಅದನ್ನು ಒಡೆದು ಓದಿದ ನಾನು ಹೌಹಾರಿದೆ. ಅದು ನನಗೆ ಕೆಲಸಕ್ಕೆ ಹಾಜರಾಗಲು ಬಂದ ಆದೇಶವಾಗಿತ್ತು. ಭದ್ರಾವತಿಯಲ್ಲಿನ ನಗರ ಭೂ-ತೆರಿಗೆ ಕಚೇರಿಗೆ ನನ್ನನ್ನು ಪ್ರಥಮ ದರ್ಜೆ ಸಹಾಯಕಳಾಗಿ ನೇಮಿಸಲಾಗಿತ್ತು. ಪರೀಕ್ಷೆಯಲ್ಲಿ ಉತ್ತೀರ್ಣವಾಗಿದ್ದೇನೋ ಇಲ್ಲವೋ? ಎಂಬ ಮಾಹಿತಿಯೇ ಇಲ್ಲದ ನನಗೆ, ಒಮ್ಮೆಗೆ ಬಂದ ಈ ಕೆಲಸದ ಆದೇಶ ತಬ್ಬಿಬ್ಬು ಗೊಳಿಸಿತ್ತು. ಹತ್ತು ವರ್ಷಗಳ ಬಳಿಕ ಸರ್ಕಾರದ ನೌಕರಿಗಾಗಿ ಪ್ರಥಮವಾಗಿ ಕೆ.ಪಿ.ಎಸ್.ಸಿ ಯಿಂದ ಪ್ರಕಟಗೊಂಡ ಈ ಕರೆಗೆ ಹತ್ತಾರು ಸಾವಿರ ಮಂದಿ ಅರ್ಜಿಹಾಕಿ, ಪರೀಕ್ಷೆ ಬರೆದಿದ್ದರು. ಇಷ್ಟೊಂದು ಮಂದಿ ಪರೀಕ್ಷೆ ಬರೆದಾಗ ನನ್ನದೆಲ್ಲಿ ಪಾಸಾಗಿರುತ್ತೆ? ಎಂಬ ಅವಜ್ಞೆಯಿಂದ ಫಲಿತಾಂಶವನ್ನು ನೋಡಲು ಪ್ರಯತ್ನಿಸಿರಲೇ ಇಲ್ಲ. ಹಾಗೆ ನೋಡಿಕೊಂಡಿದ್ದರೆ, ನೌಕರಿಗೆ ಹೋದಾಗ ಮಕ್ಕಳ ಪಾಲನೆಯ ಬಗ್ಗೆ ಪೂರ್ವಸಿದ್ಧತೆ ಮಾಡಿಕೊಳ್ಳಬಹುದಾಗಿತ್ತು.

ಕುಟುಂಬ ನಿರ್ವಹಣೆ ಮತ್ತು ಮಕ್ಕಳ ಪೋಷಣೆಯನ್ನು ನಾವು ಹದಿನೈದು ದಿನದೊಳಗೆ ತುರ್ತಾಗಿ ಮಾಡಿಕೊಳ್ಳಬೇಕಾದ ಸಂದರ್ಭ, ಅನಿವಾರ್ಯತೆ ನಮ್ಮ ಮುಂದೆ ನಿಂತು ಬಿಟ್ಟಿತ್ತು. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಯೂ ಕೃಷ್ಣಪ್ಪ, 'ನೀನು ಕೆಲಸಕ್ಕೆ ಹೋಗ ಬೇಡ' ಎಂಬ ಒಂದು ಮಾತನ್ನು ಹೇಳದೆ ಪರಿಸ್ಥಿತಿ ಎದುರಿಸಲು ತಯಾರಾದರು. ಆಗ ನೆರವಿಗೆ ಬಂದವರು ನಮ್ಮ ಎದುರು ಮನೆಯ ಸ್ನೇಹಿತರು. ಅವರ ಪರಿಚಯದ ಒಬ್ಬಳು ಹೆಣ್ಣು ಮಗಳನ್ನು ನಮ್ಮ ಮನೆಗೆ ಪರಿಚಯಿಸಿದರು. ಅವಳೊಂದಿಗೆ ನನ್ನ ಎದುರು ಮನೆಯ ಶಾನು ಮಕ್ಕಳ ಬಗ್ಗೆ ನಿಗಾ ವಹಿಸುವುದಾಗಿ ಧೈರ್ಯ ತುಂಬಿದರು. ಮಕ್ಕಳನ್ನು ನೋಡಿಕೊಳ್ಳಲು ಬಂದ ದಿಲ್‌ಶಾದ್‌ಗೆ ಮಗುವಿಗೆ ಉಣಿಸುವುದು, ಬಟ್ಟೆಬರೆ ಹಾಕುವುದು, ಮಲಗಿಸುವುದು ಹೇಗೆ ಎಂದು ಹೇಳಿಕೊಟ್ಟೆವು. ಎದೆ ಹಾಲನ್ನು ಬಿಡಿಸಿ ಬಾಟ್ಲಿಹಾಲಿಗೆ ಒಗ್ಗಿಕೊಳ್ಳದ ಮಗುವಿಗೆ ಲೋಟ-ಚಮಚಾದಲ್ಲಿ ಹಾಲು ಕುಡಿಸುವ ಅಭ್ಯಾಸವನ್ನು ತುರಾತುರಿಯಲ್ಲಿ ಮಾಡಬೇಕಾಗಿತ್ತು. ಅದನ್ನು ಅಭ್ಯಾಸ ಮಾಡಿಸುವುದರಲ್ಲಿ, ಕೃಷ್ಣಪ್ಪ, ಶಿವಮೂರ್ತಿ, ರೇಣುಕಾ-ಎಲ್ಲರೂ ತೊಡಗಿದರು.

(ಮುಂದುವರಿಯುವುದು)

# ಅಲೆಮಾರಿಗಳು ಜಾತಿ ಗುಂಪುಗಳಲ್ಲ, ಕಲಾವಿದರ ಸಂಗಡಗಳು : ಕೆ.ರಾಮಯ್ಯ





**ನ**ಮ್ಮತ್ರ ಕಲೆ ಇದೆ, ಕಸುಬು ಇದೆ. ಭಾಳಾ ದೊಡ್ಡ ಕಸುಬುದಾರರು ನಾವು. ನಮ್ಮ ಕಸುಬುಗಳಿಂದಾಗಿಯೇ ನಮಗೆ ಜಾತಿ ಅಂಟ್ಕೊಂಡಿರೋದು. ನೀವು ಹುಟ್ಟಾ ಜಾತಿಗಳಲ್ಲ. ಹಿಂದಿನ ಕಾಲದಿಂದ ಬಂದಂತ ಜಾತಿಗಳಲ್ಲ. ಅಬ್ಬಬ್ಬಾ ಅಂದ್ರೆ ೩೦೦-೪೦೦ ವರ್ಷಗಳಿಂದ ಈಚೆಗೆ ಬಂದಿರೋ ಜಾತಿಗಳು.

ಇದು ಹ್ಯಾಗ್ ಆಯ್ತು ಅಂತ ಅರ್ಥ ಮಾಡ್ಕೋಬೇಕು. ನಮ್ಮ ಕಲೆ ಇತ್ತಲ್ಲ, ಆ ಕಲೇನ ತಮಗೋಸ್ಕರ ಉಪಯೋಗಿಸ್ಕೊಳೋಕೆ ಒಂದ್ ತಂತ್ರ ನಡೀತು. ಅದು ಏನಪ್ಪಾ ಅಂದ್ರೆ, ನಮ್ಮಲ್ಲಿದ್ದಂತಹ ಅನೇಕ ಕಲಾವಿದರನ್ನ ಆಗ ಅಧಿಕಾರದಲ್ಲಿದ್ದ ಅವ್ರು ನೀವು ನಮ್ಜೊತೆ ಬನ್ನಿ, ನಿಮಗೆ ಆದಾಯ ಕೊಡುಸ್ತಿವಿ, ನಿಮ್ ಮಕ್ಳು-ಮರಿ ಮುಂದಿನ ಕಾಲಕ್ಕೂ ಚೆನ್ನಾಗಿ ಬದುಕೋ ಹಂಗೆ ಮಾಡ್ತಿವಿ ಅಂತ ನಮ್ಮಲ್ಲಿದ್ದಂತಹ ಎಲ್ಲ ಕಲಾವಿದರನ್ನ ಸೇರಿಸಿ ಗುಂಪು ಮಾಡಿದ್ರು. ಗುಂಪು ಮಾಡಿ ಈ ವೈಷ್ಣವ ಧರ್ಮ ಪ್ರಚಾರ ಮಾಡೋದಕ್ಕೆ ನಮ್ಮನ್ನ ಬಳಸ್ಕೊಂಡ್ರು. ಪ್ರಚಾರಕರು ನಾವು. ಆವಾಗ ನಮಗೆ ಬೆಲೆ ಇತ್ತು. ಚನ್ನದಾಸರು, ಮರೆಪ್ಪ ದಾಸರು, ಯಮುನಾಬಾಯಿ. ಇವರನ್ನೆಲ್ಲಾ ನೋಡಿದ್ರೆ ಇವರೆಲ್ಲಾ ಮೊದಲು ದೊಡ್ಡ ಕಲಾವಿದರು. ಕಲಾವಿದರ ಪರಂಪರೆ, ಅವರನ್ನೆಲ್ಲಾ ಮೊದ್ಲು ಭಾಳಾ ಬೆಲೆಯಿಂದಾನೇ ನೋಡ್ಕೊಳ್ತಿದ್ರು. ಯಾಕಂದ್ರೆ ಅವರ ಧರ್ಮಾನ ಪ್ರಚಾರ ಮಾಡ್ಬೇಕಿತ್ತು.

ಈ ರೀತಿ ಜಾತಿಗಳಲ್ಲದ ನಾವು ಧರ್ಮ ಪ್ರಚಾರ ಮಾಡೋದಕ್ಕೆ ಬಳಕೆ ಆಗಿ-ಆಗಿ ಜಾತಿಗಳಾದ್ವಿ. ಮೂಲವಾಗಿ ನಾವು ಜಾತಿಗಳಲ್ಲ, ಕಲಾವಿದರ ಸಮೂಹಗಳು. ಆದ್ರೆ ನಮ್ಮನ್ನ ಜಾತಿ ಮಾಡಿಟ್ಟರು. ಅದರಲ್ಲೂ ಹೇಗೆ ಮಾಡಿದ್ದಾರೆ ಅಂದ್ರೆ ಒಬ್ಬರಿಗೊಬ್ಬರು ಅರ್ಥ ಮಾಡ್ಕೊಳೋಕೆ ಆಗದಂತೆ ಸೀಳಿ ಇಟ್ಟಿದ್ದಾರೆ. ಬೇರೆ-ಬೇರೆ ಮಾಡಿದ್ದಾರೆ. ಹಂದಿಜೋಗಿನೇ ಬೇರೆ, ಹಂಡೆಜೋಗಿನೇ ಬೇರೆ, ಕಿಳ್ಳೆ ಕ್ಯಾತರು ಬೇರೆ, ಸಿಳ್ಳೆ ಕ್ಯಾತರು ಬೇರೆ. ಹುಟ್ಟು ಜಾತೀಲಿ ಬಂದಿದ್ರೆ ಈ ತರ ಸಮಸ್ಯೆಗಳು ಬರ್ತಾ ಇರ್ಲಿಲ್ಲ. ಇದೆಲ್ಲಾ ಚರಿತ್ರೇಲಿ ದಾಖಲಾಗಿದೆ.

ಹೀಗೆ ನಮ್ಮನ್ನ ಎಲ್ಲಿವರ್ಗೂ ಬಳಸ್ಕೊಂಡ್ರು ಅಂದ್ರೆ ತಾಳೀಕೋಟೆ ಯುದ್ಧ ಆಯ್ತಲ್ಲ ಅಲ್ಲೀವರ್ಗೂ ಬಳಸ್ಕೊಂಡ್ರು. ತಾಳೀಕೋಟೆ ಯುದ್ಧದವರೆಗೂ ನಮ್ಗೆ-ಅಲೆಮಾರಿಗಳಿಗೆ-ಭಾರೀ ದೊಡ್ಡ ಬೆಲೆ ಇತ್ತು. ರಾಜಪ್ರಭುತ್ವ ಅಲೆಮಾರಿಗಳನ್ನ ಬರೀ ಕಲೆಗಷ್ಟೇ ಬಳಸಿಕೊಳ್ತಿರಲಿಲ್ಲ.

ನಮ್ಮನ್ನ ಪತ್ತೇದಾರರನ್ನಾಗಿಯೂ ಬಳಸಿಕೊಳ್ತಾ ಇದ್ರು. ಎಲ್ಲಿ ಏನ್ ನಡೀತದೆ ಅನ್ನೋ ಸೀಕ್ರೆಟ್ ತಗಂಬಂದು ಹೇಳ್ಬೇಕಿತ್ತು. ಅದಕ್ಕೆ ಈ ಅಲೆಮಾರಿ ಸಮುದಾಯಗಳಿಗೆ ಒಂದು ಮರಗು ಭಾಷೆ ಅಂತ ಇರುತ್ತೆ. ಒಂದ್ ಕಡೆಯಿಂದ ಮತ್ತೊಂದ್ ಕಡೆಗೆ ವಿಚಾರಗಳನ್ನ ಬಿತ್ತೋಕೆ, ವಿಚಾರಗಳನ್ನ ತರೋಕೆ ನಮ್ಮನ್ನ ಬಳಸ್ಕೊಂಡ್ರು.

ತಾಳೀಕೋಟೆ ಯುದ್ಧದಲ್ಲಿ ಶ್ರೀಕೃಷ್ಣದೇವರಾಯನ ಸೋಲಿನ ಮೂಲಕ ವೈಷ್ಣವ ಧರ್ಮ ಪತನದ ಹಾದಿ ಹಿಡಿಯಿತು. ಅಲ್ಲೊಂದು ಪರಿವರ್ತನೆ ಆಯ್ತು. ಬ್ರಾಹ್ಮಣರು ಬಾಳಾ ಚೆನ್ನಾಗಿ ಯೋಚ್ನೆ ಮಾಡಿದರು. ಏನಂದ್ರೆ ಧರ್ಮಾನೂ ಪ್ರಚಾರ ಮಾಡ್ಬೇಕು, ಈ ಜಾತಿಗಳ ನಡುವೆ ಭೇದ ಉಂಟು ಮಾಡ್ಬೇಕು, ಅದುನ್ನ ಗಟ್ಟಿ ಮಾಡ್ಬೇಕು, ಮುಂದೆ ಒಂದಿನ ಸಮಾನತೆ ಕೊಡಬೇಕಾಗುತ್ತೆ ಅಂತೇಳಿ ಎರಡು ಉಪಾಯ ಹೂಡಿದರು. ವ್ಯಾಸರ ಗುಂಪು ದಾಸರ ಗುಂಪು ಅಂತ ಮಾಡಿದ್ರು. ವ್ಯಾಸಪೀಠ ದಾಸಪೀಠ ಅಂತ ಹುಟ್ಕೊಂಡಿದ್ದೇ ಇಲ್ಲಿಂದ. ಇವತ್ತೂ ಕೂಡ ನಾವು ಒದ್ದಾಡ್ತಾ ಇರೋದು ಈ ಡಿವಿಷನ್‌ನಿಂದಾಗಿಯೇ. ಕನಕನ ಕಿಂಡಿ ರಾಜಕೀಯ ಈ ಎಲ್ಲಾ ಗೋಳುಗಳೂ ಈ ಕಾರಣಕ್ಕಾಗಿನೇ ಆಗಿರೋದು. ವ್ಯಾಸಪೀಠ ಅಂದ್ರೆ ಬುದ್ಧಿವಂತರು. ಅವರು ನಮಗೆ ಬರೆದು ಕೊಡ್ತಾ ಇದ್ದರು. ದಾಸಪೀಠದೋರು ಕೆಲಸಗಾರರು. ಪ್ರಚಾರ ಮಾಡೋರು.

ವ್ಯಾಸಪೀಠಕ್ಕೆ ದೊಡ್ಡ ರಾಜಾಶ್ರಯ ಇತ್ತು. ಅಗ್ರಹಾರ ನಿರ್ಮಾಣ ಮಾಡಿದ್ರು. ಸುಖವಾಗಿರೋಕೆ ಏನು ಬೇಕೋ ಎಲ್ಲಾ ಮಾಡಿದ್ರು. ಆದ್ರೆ ಅಲೆಮಾರಿಗಳನ್ನ ಎಲ್ಲಿ ಬೇಕೋ ಅಲ್ಲಿ, ಎಷ್ಟು ಬೇಕೋ ಅಷ್ಟು ಅನ್ನಂಗೆ ಇಟ್ರು. ಯಾವಾಗ ತಾಳೀಕೋಟೆ ನಂತರ ರಾಜಾಶ್ರಯ ತಪ್ಪೋ ಬೇರೆ-ಬೇರೆ ಆಶ್ರಯ ಹುಡುಕ್ಕೊಂಡು ಹೋದ್ರು. ವ್ಯಾಸಪೀಠದವರಿಗೆ ನೆಲೆ ಸಿಕ್ತು. ನಾವು ಬೀದೀಲೇ ಉಳ್ಕೊಂಡ್ವಿ, ತಬ್ಬಲಿಗಳಾದ್ವಿ, ದಿಕ್ಕಿಲ್ದಿರೋರಾದ್ವಿ. ಆಗ ನಮಗೆ ತೋಚಿದ್ ರೀತಿ ಬದುಕೋಕೆ ಶುರು ಮಾಡಿದ್ವಿ, ಆಗ ನಮ್ಮನ್ನ ಊಳಿಗದವರ ತರಹ ಬಳಸ್ಕೊಂಡಿದ್ರಲ್ಲ, ಅಲ್ಲಿಂದ ಇಲ್ಲೀವರೆಗೂ ಈ ಸಮಾಜ ಅದೇ ತರ ನೋಡ್ತಾ ಬಂದಿದೆ.

ನಮ್ಮ ಕಲೆಗಳು ಮೊದಲಿಗೆ ಭಿಕ್ಷಾಟನೆಗೆ ಇರ್ಲಿಲ್ಲ. ಶಿಷ್ಯ ಪರಂಪರೆಯನ್ನ ಉಳಿಸೋದಿಕ್ಕೋಸ್ಕರ ಅವರಿಗೊಂದು ನೇಮ ನಿಷ್ಠೆ ಇರ್ಬೇಕಲ್ಲ, ಅವರು ಹಾಡು-ಪಾಡು ಕಲೀಬೇಕಲ್ಲ, ಅದ್ಕೆ ಭಿಕ್ಷಾಟನೆ ಮಾಡ್ತಿದ್ರು. ನಮ್ಮಂಥ ಕಲಾವಿದರನ್ನ ಉಳಿಸೋದಿಕ್ಕೆ ಭಾಳಾ ನ್ಯಾಯ ಇತ್ತು. ಹೆಂಗೆ ಅಂದ್ರೆ, ಕೂರಿಗೆ ಸಾಲಿನಲ್ಲಿ ಒಂದು ಪಾಲು ಅಲೆಮಾರಿಗಳಿಗೆ ಅಂತ ಇತ್ತು. ನಾವು ಯಾವುದೇ ಹಳ್ಳಿಗೋಗಿ ಕಥನ ಮಾಡಿ ಕೊನೆಗೆ ಈ ಊರಿಗೆ ಒಳ್ಳೆದಾಗ್ಲಿ, ಒಳ್ಳೆ ಮಳೆ-ಬೆಳೆ ಆಗ್ಲಿ ಅಂತ ಒಂದ್ ನುಡಿ ನುಡ್ದೇ ವಾಪಸ್ ಬರ್ತಾ ಇದ್ದಿದ್ದು. ಬರ್ತಾ ಬರ್ತಾ ಸಮಾಜ ಬದಲಾಗ್ತಾ ಆಗ್ತಾ ಆ ನ್ಯಾಯಗಳೂ ಸಂಬಂಧಗಳೂ ಇವತ್ತಿಲ್ಲ.

ಇವತ್ತು ನಮ್ಮಲ್ಲಿರೋ ಪೈಸೆ ಪೈಸೆನೂ ಕಿತ್ಕೊಳ್ತಾ ಇದಾರೆ, ನಿಮಗೇ ಅದರ ಅನುಭವ ಆಗ್ತಾ ಇದೆ. ಈಗ ಎಣ್ಣೆ; ಮೊದ್ಲು ಗಾಣಿಗರು ಎಣ್ಣೆ ತೆಗೆಯೋರು, ಊರೂರ್ಗೆ ಹೋಗಿ ಮಾರೋರು. ಇವತ್ತು ಒಂದ್ರುಪಾಯ್ ಪ್ಯಾಕೆಟ್ನಲ್ಲಿ ಟೀ ಅಂಗ್ಡೀಲಿ ಸೈತ ಎಣ್ಣೆ ಸಿಗುತ್ತೆ, ಗಾಣಿಗರು ಹೆಂಗೆ ಬದುಕ್‌ಬೇಕು? ಈಗ ಪೊರಕೆ; ಇವತ್ತು ಇಡೀ ಇಂಡಿಯಾದಲ್ಲಿ ಈ ಪೊರಕೆ ಎಂಟು ಕುಟುಂಬಗಳ ಆಸ್ತಿ ಆಗಿದೆ. ಯಾವುದೇ ಅಂಗಡೀಲಿ ನಲವತ್ತು ರುಪಾಯ್ ಕೊಟ್ಟು ಒಂದು ಪೊರಕೆ ತಗೊಂಡ್ರೆ ಅದರ ಮೊದಲನೇ ಭಾಗ ಅವರ ಕುಟುಂಬಕ್ಕೆ ಹೋಗುತ್ತೆ. ಈಗ ತಲೆ ಮೇಲೆ ಹೊತ್ಕೊಂಡೋಗಿ ಪೊರಕೆ ಮಾರ್ತಾರಲ್ಲ ಅದು ಹೊರಟೋಗುತ್ತೆ.

ಅಂಗಾಗಿ ನಾವು ಬದುಕೋಕೆ ಇರೋ ಎಲ್ಲಾ ದಾರಿಗಳೂ ಮುಚ್ಕೋಗ್ತಾ ಇವೆ. ನಮ್ಮತ್ರ ಏನೂ ಇಲ್ಲ. ಬರಿಗೈ. ಈಗ ಹೆಂಗೆ ಯುದ್ಧ ಮಾಡ್ಬೇಕು. ನೀವೆಲ್ಲಾ ಅಂದ್ಕೊಂಡಿದೀರಿ ಏನೇನೋ ಇದೆ ಅಂತ ಆದ್ರೆ ಏನೂ ಇಲ್ಲ. ಆದ್ರೆ ನಮ್ ಪೂರ್ವಿಕರು ಏನೂ ಇಲ್ದಂಗೆ ಗೆದ್ದು ಬಂದಿದ್ದಾರೆ. ನಮ್ ದಾರಿಗಳನ್ನೂ ಅಲ್ಲಿ ಹುಡುಕಬೇಕು. ಅವಮಾನ ಆಗುತ್ತೆ ಅಂತೇಳಿ, ಆದಾಯ ಇಲ್ಲಾ ಅಂತೇಳಿ ನಮ್ಮ ಪೂರ್ವಿಕರ ಕಲೆಗಳನ್ನ ಕಡೆಗಣಿಸ್ತಾ ಇದೀವಿ.

ಈಗ ಗೊಂಬೆರಾಮರ ತೊಗಲುಗೊಂಬೆಯಾಟದ ಬಗ್ಗೆ ಮಾತಾಡೋದಾದ್ರೆ, ಆಂಧ್ರದ ಅನಂತಪುರದತ್ರ ನಿಮ್ಮಲಕುಂಟ ಅಂತ ಒಂದಿದೆ, ೮೦ ಕುಟುಂಬಗಳಿವೆ. ಅವರೂ ನಿಂ ತರಾನೇ ಆಗಿದ್ರು. ಯಾರೂ ಕರೆಯೋಲ್ಲ, ಭಿಕ್ಷೆ ಬೇಡೋಕೋದ್ರೆ ಅವಮಾನ ಮಾಡ್ತರೆ ಅಂತಿದ್ರು. ಆದ್ರೆ ನಂತ್ರ ಅದೇ ಕಲೆಯನ್ನ ತಮ್ಮ ಜೀವನದ ಮಾರ್ಗ ಮಾಡ್ಕೊಂಡವ್ರೆ. ಆ ಊರಲ್ಲಿ ಈಗ ಶಾಲೆ ಇದೆ, ಒಳ್ಳೊಳ್ಳೆ ವ್ಯವಸ್ಥೆ ಇದೆ. ಈಗ ನಮಗೆ ಗೌರವವಾಗಿ ಬದುಕೋಕೆ ಒಂದು ದಾರಿ ಬೇಕು, ಅದನ್ನ ಯಾರೂ ಕೊಡಲ್ಲ. ನಾವೇ ರೂಪಿಸ್ಕೋಬೇಕು. ನಮಗೆ ನಾವೇ ಕಂಡ್ಕೋಬೇಕು. ನಾವು ನಮ್ಮ ಸಮುದಾಯದೊಳಗಿನ ಶಕ್ತಿಯನ್ನ ಸರಿಯಾದ ರೀತಿಯಲ್ಲಿ ಅರ್ಥ ಮಾಡ್ಕೋಬೇಕು. ಹಿಂಗಾದ್ರೆ ದೊಡ್ಡ ರೀತಿನಲ್ಲಿ ನಮ್ಮ ಬದುಕುಗಳಿಗೆ ಗೌರವ ಬರುತ್ತೆ. ಇಲ್ಲಾಂದ್ರೆ ಮುಂದಿನ ಕಾಲನ ಎದುರಿಸೋಕಾಗಲ್ಲ. ಮುಂದೆ ಬರೋ ರಾಜಕಾರಣನ ಎದುರಿಸೋಕಾಗಲ್ಲ. ಮುಂದೆ ನಮ್ಮನ್ನ ನಾವು ಕೊಂದ್‌ಕೊಳ್ಳೊದನ್ನ ತಡೆಯೋಕಾಗಲ್ಲ. ಹಿಂದೆ ಹೋರಾಟಗಳ ಮೂಲಕ ಹಕ್ಕುಗಳನ್ನ ಕಿತ್ಕೋಬಹುದು, ಪಡುಕೋಬಹುದು ಅನ್ನೋದನ್ನ ಅಂಬೇಡ್ಕರ್ ತೋರಿಸಿದ್ರು. ಆದ್ರೆ ಮುಂದೆ ಅದು ಸಾಧ್ಯ ಆಗಲ್ಲ. ಆ ರೀತಿಯಾದ ಆಸೆಗಳನ್ನ ಇಟ್ಕೊಳೊಕಾಗಲ್ಲ. ನಮ್ಮೊಳಗಿಂದಾನೇ ಅದುನ್ನ ಸೃಷ್ಟಿಸಬೇಕೆ ಹೊರತು ಹೊರಗಿನಿಂದ ಸೃಷ್ಟಿಸೋಕಾಗಲ್ಲ.

ಭಾರತದಲ್ಲಿ ನಾವು ಬಹುದೊಡ್ಡ ಕಸುಬುದಾರರು. ಹಿಂದೆ ಸೀರೆ ನೇಯ್ದು ಒಂದು ಬೆಂಕಿ ಪೆಟ್ಟಿಗೇಲಿ ಇಡ್ತಾ ಇದ್ರು ಅಂತಾರಲ್ಲ ಅದು ನಿಜ. ಮಸ್ಲಿನ್ ಬಟ್ಟೆ ಅಂತಾರೆ. ಉಗುರುಗಳಲ್ಲಿ ನೇಯಬೇಕಿತ್ತು. ಅಂಗಿರಬೇಕಾದ್ರೆ ಯೂರೋಪ್‌ನಲ್ಲಿ ಬಟ್ಟೆ ಮಿಲ್‌ಗಳನ್ನ ಶುರು ಮಾಡಿದ್ರು. ಆದ್ರೆ ನಮ್ಮ ಮಾರ್ಕೆಟ್ ಮುಂದೆ ಅವರು ನಿಲ್ಲೋಕಾಗ್ಲಿಲ್ಲ. ನಾನೇಳ್ತಾ ಇರೋದು ೨ನೇ ಶತಮಾನದಿಂದ. ಆ ಕಾಲದಲ್ಲೆನೆ ಕೆಲ ದೇಶಗಳು ಭಾರತದಿಂದ ಬರುವ ಬಟ್ಟೆಗಳನ್ನ ಉಪಯೋಗಿಸಬೇಡಿ, ನಮ್ಮ ಬೆಳ್ಳಿ ರುಪಾಯೆಲ್ಲ ಅಲ್ಲಿಗೇ ಹೋಗ್ತದೆ ಅಂತ ಕಾನೂನಿನಲ್ಲಿ ರದ್ದು ಮಾಡಿದ್ದರು. ನಮ್ಮನ್ನ ಗೆಲ್ಲೋಕಾಗದ ಇಂಗ್ಲಿಷ್‌ನೋರು ನಮ್ಮವರ ಬೆರಳುಗಳನ್ನ ಕತ್ತರಿಸಿದ್ರು. ಬಟ್ಟೆ, ಲೋಹ, ಮಣ್ಣು ಎಲ್ಲದರಲ್ಲಿ ಕಲೆಗಾರರಿದ್ರು. ನಮ್ಮ ಪೂರ್ವಕಾಲದ ಆ ದೊಡ್ಡ ಕಲೆಗಾರಿಕೆ, ಕಸುಬುದಾರಿಕೆ ಉಳಿದಿಲ್ಲ. ಇಂಥಾ ದೊಡ್ಡ ಕಲೆಗಾರರನ್ನ, ಕಸುಬುದಾರರನ್ನ ಕೂಲಿಯವರನ್ನಾಗಿ ಮಾಡಿದ್ರು, ಭಿಕ್ಷುಕರನ್ನಾಗಿ ಮಾಡಿದ್ರು, ಊರಿಂದ ದೂರ ಇಟ್ರು, ತಿರಸ್ಕಾರಕ್ಕೆ ಒಳಗು ಮಾಡಿದ್ರು. ಅಂಗಾಗಿ ನಾವು ಅದನ್ನ ಕಳಕೊಂಡಿದ್ದಿವಿ.

ಈಗ ನಮ್ಮ ದೊಡ್ಡ-ದೊಡ್ಡ ವಿದ್ವಾಂಸರು ಪಾಶ್ಚಾತ್ಯರ ಶಿಕ್ಷಣ ಪದ್ಧತಿ ಒಪ್ಕೊಂಡಿರೋದ್ರಿಂದ ಜಾತಿ ದೃಷ್ಟಿಯಿಂದ ನಮ್ಮನ್ನ ನೋಡ್ತಿದಾರೆ. ನಮ್ಮ ಜಾತಿಗಳು ಹೆಂಗೆ ಹುಟ್ಟಿದವು ಅಂತ ನೋಡ್ತಿದಾರೆ, ಆದ್ರೆ ನಾವು ಜಾತಿ ಸಮುದಾಯ ಅಲ್ಲ. ಕಲೆಗಾರರ ಸಮುದಾಯಗಳು, ಕಲೆಗಾರರ ಕುಟುಂಬಗಳು, ಕಲೆಗಾರರ ಒಕ್ಕೂಟಗಳು ನಾವು, ಕಲೆಗಾರರ ಪಂಗಡಗಳು ನಮ್ಮವು. ಈ ಕಲೆಗಾರರನ್ನ ಜಾತಿ ಮಾಡಿ ಈ ಸ್ಥಿತೀಗೆ ತಗಂಬಂದು ನಿಲ್ಸಿದ್ದಾರೆ. ಈಗ ನಾವು ಅವರು ಗುರುತಿರೋ ಅಂಥ ಈ ಜಾತಿ ಗುರುತುಗಳಲ್ಲಿ ಸಿಗಾಕ್ಕಂಡು ಬಿಡುಗಡೆ ಕಾಣದಂಗೆ ಅದೇ ಶಾಸ್ತ್ರಗಳಲ್ಲಿ, ಅದೇ ಸುಳಿಯಲ್ಲಿ ಸಿಗಾಕ್ಕಂಡು ಒದ್ದಾಡ್ತಾ ಇದೀವಿ. ಇಂಥಾ ಸಂದರ್ಭದಲ್ಲಿ ನನಗನ್ನಿಸೋದು, ನಮ್ಮ ಪೂರ್ವಿಕರು ಉಳಕೊಂಡು ಬಂದಿದಾರೆ, ಅದುನ್ನ ಅರ್ಥ ಮಾಡ್ಕಂಡ್ರೆ ನಾವು ಪರಸ್ಪರ ಉಳಿಯೋ ರೀತೀನಲ್ಲಿ ಒಟ್ಟಾರೆ ಒಂದು ನಡೆಯನ್ನ ಯೋಚ್ನೆ ಮಾಡಬಹುದು. ಸಣ್ಣ-ಸಣ್ಣ ಗುಂಪುಗಳಲ್ಲಿ ಅದು ಶುರುವಾಗ್ಬೇಕು.

**(ಇತ್ತೀಚೆಗೆ ತುಮಕೂರು ಜಿಲ್ಲೆ ಶಿರಾದ ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯದಲ್ಲಿ ನಡೆದ 'ಅಲೆಮಾರಿ ಸಮುದಾಯಗಳ ಸಬಲೀಕರಣ' ಕಾರ್ಯಕ್ರಮದಲ್ಲಿ ರಾಮಯ್ಯನವರು ಮಾಡಿದ ಸಂವಾದ ಸ್ವರೂಪದ ಯಥಾವತ್ ಮಾತುಗಳು)**

ಬರಹ ರೂಪ: **ಮಲ್ಲಿಕಾರ್ಜುನ ಹೊಸಪಾಳ್ಯ**

**ಚರ್ಚೆಗೊಂದು ಆಹ್ವಾನ**

# ಸೆಕ್ಯುಲರಿಸಂ ಎಂದರೇನು?: ಆಶೀಶ್ ನಂದಿಯವರ ತಾತ್ವಿಕ ಹುಡುಕಾಟ



ಆಧುನಿಕ ಪ್ರಭುತ್ವ ಸ್ಥಾಪನೆಯ ಹುರುಪಿನಲ್ಲಿ ನಾವು ಪಶ್ಚಿಮದಿಂದ ಆಮದು ಮಾಡಿಕೊಂಡ ಹಲವು ಪರಿಕಲ್ಪನೆಗಳಲ್ಲಿ 'ಸೆಕ್ಯುಲರಿಸಂ' ಕೂಡ ಒಂದು. ಬಹು ಧರ್ಮ ಮತ್ತು ಬಹು ಸಂಸ್ಕೃತಿಗಳಿರುವ ರಾಷ್ಟ್ರವೊಂದು ಗಣರಾಜ್ಯವಾಗಿ ಬೆಳೆಯಲು ಈ 'ಸೆಕ್ಯುಲರಿಸಂ' ಅನಿವಾರ್ಯ ಎಂಬುದು ಒಂದು ಆಧುನಿಕ ನಂಬಿಕೆ. ಹಾಗಾಗಿ ಇದನ್ನು ಆಧುನಿಕ ಭಾರತದ ಸಾರ್ವಜನಿಕ ಬದುಕಿನಲ್ಲಿ, ನಂತರ ನಮ್ಮ ಸಂವಿಧಾನದಲ್ಲೂ ಒಂದು ಮೌಲ್ಯವಾಗಿ, ತತ್ವವಾಗಿ ಬಿತ್ತಲಾಯಿತು. ಆದರೆ ವಿಕಾಸಶೀಲ ಗಣರಾಜ್ಯವೊಂದರಲ್ಲಿ ಬಹು ಧರ್ಮ ಮತ್ತು ಬಹು ಸಂಸ್ಕೃತಿಗಳ ವಿವಿಧ ಕ್ರಿಯಾಶೀಲ ರೂಪಗಳು ಪ್ರಕಟವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಈ ಪರಿಕಲ್ಪನೆ ಹಲವು ಪ್ರಶ್ನೆಗಳನ್ನು ಎದುರಿಸಬೇಕಾಗಿ ಬಂದಿದೆ. ಪ್ರಾಥಮಿಕವಾಗಿ, ಈ 'ಸೆಕ್ಯುಲರಿಸಂ' ಎಂದರೇನು ಎಂಬ ಪ್ರಶ್ನೆಗೆ ಈವರೆಗೂ ಯಾರೂ ಖಚಿತ ಉತ್ತರ ಕೊಟ್ಟಿಲ್ಲ. ಹಲವು ಪರಸ್ಪರ ಸಮ್ಮತವೆನಿಸದ ವ್ಯಾಖ್ಯಾನಗಳನ್ನು–ಲೌಕಿಕ ಆಡಳಿತ, ಸರ್ವ ಧರ್ಮ ಸಮಭಾವ, ಧರ್ಮ ನಿರಪೇಕ್ಷತೆ ಇತ್ಯಾದಿ–ನೀಡಲಾಗಿದೆಯಷ್ಟೆ. ಹೀಗಾಗಿ ಈ ತತ್ವದ ಬಗ್ಗೆ ನಮ್ಮ ಬೌದ್ಧಿಕ ಲೋಕದಲ್ಲಿ ಒಂದು ಹೊಸ ಚರ್ಚೆ ಆರಂಭವಾಗಿದೆ.

ಮರುಭೂಮಿ ಧರ್ಮಗಳಿಗೆ ಹೊರತಾದ ಧರ್ಮಗಳ ಪ್ರಾಧಾನ್ಯತೆಯಿರುವ ನಿರ್ದಿಷ್ಟವಾಗಿ ಭಾರತದಂತಹ, ಸಾರ್ವತ್ರಿಕವಾಗಿ ದಕ್ಷಿಣ ಏಷಿಯಾದ ದೇಶಗಳಲ್ಲಿ ಸೆಕ್ಯುಲರಿಸಂನ್ನು ಹೇಗೆ ಅರ್ಥೈಸಿ ಎದುರುಗೊಳ್ಳುವುದು? ಎಂಬ ಬಗ್ಗೆ ಈಗಾಗಲೇ ಹಲವು ವಾದಗಳನ್ನು ಮಂಡಿಸಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಎದ್ದು ಕಾಣುವುದು ಖ್ಯಾತ ಚಿಂತಕ ಆಶೀಶ್ ನಂದಿ ಅವರದ್ದು. ಇವರ ವಾದದ ಸಾರಾಂಶ ರೂಪವೊಂದನ್ನು ಇಲ್ಲಿ ನೀಡುತ್ತಿದ್ದೇವೆ. ಈ ಮೂಲಕ ನಮ್ಮ ಕನ್ನಡ ಬೌದ್ಧಿಕ ಲೋಕದಿಂದ ಒಂದು ಮುಖ್ಯ ಚರ್ಚೆಯನ್ನು 'ಹೊಸ ಮನುಷ್ಯ' ಆಹ್ವಾನಿಸುತ್ತಿದೆ.

ಈ ಲೇಖನವನ್ನು ನಮ್ಮ ಕೋರಿಕೆಯ ಮೇರೆಗೆ ಅನುವಾದಿಸಿ ನೀಡಿರುವ ಗೆಳೆಯ ಡಾ. ಎಸ್. ಸಿರಾಜ್ ಅಹಮದ್, ಈ ಲೇಖನವನ್ನು ಅನುವಾದ ಮಾಡಿದಾಕ್ಷಣ ಈ ವಾದದ ಎಲ್ಲ ಅಂಶಗಳನ್ನು ನಾನು ಒಪ್ಪುವೆನೆಂದಲ್ಲ ಎಂದು ನಮಗೆ ಮುನ್ನೆಚ್ಚರಿಕೆ ನೀಡಿದ್ದಾರೆ. ಈ ಗೆಳೆಯರೂ ಸೇರಿದಂತೆ ನಮ್ಮ ಆಸಕ್ತ ಓದುಗರು ಈ ಲೇಖನಕ್ಕೆ ವಿಸ್ತೃತವಾಗಿ ಪ್ರತಿಕ್ರಿಯಿಸಬೇಕೆಂದು ಕೋರುವೆ. ನಮ್ಮ ಈ ಪ್ರಯತ್ನ ಯಶಸ್ವಿಯಾದರೆ, ಮುಂದಿನ ಸಂಚಿಕೆ ಈ ಚರ್ಚೆಗೇ ಮೀಸಲಾಗಿರುವುದು.–ಸಂಪಾದಕ



**ಸೆ**ಕ್ಯುಲರಿಸಂ ಎಂದರೆ ಕೋಮುಸೌಹಾರ್ದತೆಯಲ್ಲ; ಅದು ಸೌಹಾರ್ದತೆಯನ್ನು ಸ್ಥಾಪಿಸಲು ಬೇಕಾದ ಒಂದು ದಾರಿ. ಒಂದು ಸಿದ್ಧಾಂತವಾಗಿ ಅದಕ್ಕೆ ೩೦೦ ವರ್ಷಗಳಿಗಿಂತ ದೊಡ್ಡದಾದ ಇತಿಹಾಸವಿಲ್ಲ. ಹಿಂದೂ ರಾಷ್ಟ್ರವಾದ, ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಜ್ಯೂಗಳ ಮೂಲಭೂತವಾದಗಳನ್ನು–ಭಾರತ ಮತ್ತು ಪ್ರಪಂಚದಾದ್ಯಂತ–ಹತ್ತಿಕ್ಕುವಲ್ಲಿ ಸೆಕ್ಯುಲರಿಸಂ ನಿರಂತರವಾಗಿ ಸೋಲುತ್ತಿದ್ದರೂ ಅದನ್ನು ಬಿಟ್ಟು ಇನ್ನೊಂದು ಪರ್ಯಾಯವನ್ನು ಯೋಚಿಸುವ ಧೈರ್ಯ ಸಹ ಯಾರಲ್ಲಿಯೂ ಕಾಣುತ್ತಿಲ್ಲ.

ಇತ್ತೀಚಿನ ದಿನಗಳಲ್ಲಿ ನನ್ನ ಗೆಳೆಯರಾದ ಕುಲದೀಪ್ ನಯ್ಯರ್ ಅವರು ನಾನು ಸೆಕ್ಯುಲರಿಸಂನ್ನು ನಿರಾಕರಿಸುತ್ತಿರುವ ಬಗ್ಗೆ ಮತ್ತು ನನಗೆ ದಕ್ಷಿಣ ಏಶಿಯಾದ ಬಹುಸಂಸ್ಕೃತಿಗಳ ಬಗ್ಗೆ ಇರುವ ನಂಬಿಕೆ ಕಳೆದು ಹೋಗುತ್ತಿರುವ ಬಗ್ಗೆ ವಿಷಾದ ಸೂಚಿಸಿದ್ದಾರೆ. ನಾನು ಮತ್ತು ನಯ್ಯರ್ ಇಬ್ಬರೂ ಸೆಕ್ಯಲರಿಸಂನ ಹಲವು ಹೋರಾಟಗಳಲ್ಲಿ ಭಾಗವಹಿಸಿದ್ದೇವೆ. ಆದರೆ ಅವರಿಗೆ ನನ್ನನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಸೆಕ್ಯುಲರಿಸಂ ಕುರಿತ ನನ್ನ ಟೀಕೆಯು ಪರಂಪರೆಯ ಗಾಂಧಿವಾದಿ ವ್ಯಾಖ್ಯಾನದ ಪ್ರಬಲ ಸಮರ್ಥನೆ ಮತ್ತು ದಕ್ಷಿಣ ಏಶಿಯಾದ ದೇಶಗಳ ಪ್ರಜಾಪ್ರಭುತ್ವವಾದಿ ರಾಜಕಾರಣದ ಅಗತ್ಯಗಳನ್ನು ಪೂರೈಸಬಲ್ಲಂತಹ ಸೆಕ್ಯುಲರಿಸಮೋತ್ತರ ರಾಜಕೀಯ ರೂಪಗಳ ಹುಡುಕಾಟವೇ ಆಗಿದೆ.

ಯೂರೋಪಿನಲ್ಲಿ ಸೆಕ್ಯುಲರಿಸಂ ಹುಟ್ಟಿದ್ದು ಧಾರ್ಮಿಕ ಕಲಹಗಳು, ಯುದ್ಧ, ಜನಾಂಗೀಯ ಹತ್ಯೆಗಳನ್ನು ತಡೆಯುವಲ್ಲಿ ಶಾಂತಿ–ಸಹಬಾಳ್ವೆಯ ಎಲ್ಲ ಪ್ರಯತ್ನಗಳು ಸೋತು ಅಸಹಾಯಕವಾದಾಗ. ಇಂತಹ ಪರಿಸ್ಥಿತಿ ಭಾರತದಲ್ಲಿ ಇರಲಿ, ಇಡೀ ದಕ್ಷಿಣ ಏಶಿಯಾದಲ್ಲಿ ಉಂಟಾಗಿರಲಿಲ್ಲ. ಒಟ್ಟಾಗಿ ಹೇಳುವುದಾದರೆ, ಭಾರತದಲ್ಲಿ ನಡೆದ ಎಲ್ಲ ದೊಡ್ಡ ಕೋಮುಗಲಭೆಗಳು ಪಟ್ಟಣಗಳಲ್ಲಿ ಮಾತ್ರ ಸಂಭವಿಸಿದ್ದವು. ಹಳ್ಳಿಗಳಲ್ಲಿ ನಡೆದ ಗಲಭೆಗಳು ಮೊದಲು ಪಟ್ಟಣಗಳಲ್ಲಿ ಹುಟ್ಟಿ ಬೇರೆಡೆಗೆ ವ್ಯಾಪಿಸಿದವು. ಆದ್ದರಿಂದಲೇ, ಕಳೆದ ಐವತ್ತು ವರ್ಷಗಳಲ್ಲಿ ದೇಶದ ಶೇಕಡಾ ಎಪ್ಪತ್ತೈದು ಭಾಗ ಜನ ವಾಸಿಸುವ ಹಳ್ಳಿಗಳಲ್ಲಿ ಕೇವಲ ಶೇಕಡಾ ನಾಲ್ಕರಷ್ಟು ಜನ ಕೋಮುಗಲಭೆಗಳಲ್ಲಿ ಬಲಿಯಾಗಿದ್ದರೆ; ಕೇವಲ ಇಪ್ಪತ್ತೈದು ಶೇಕಡಾ ಭಾಗದ ಜನ ವಾಸಿಸುವ ಪಟ್ಟಣಗಳಲ್ಲಿ ಶೇಕಡಾ ತೊಂಬತ್ತಾರರಷ್ಟು ಜನ ಕೋಮುಗಲಭೆಗಳಿಗೆ ಬಲಿಯಾಗಿದ್ದಾರೆ. ಇಂತಹ ಹಳ್ಳಿಗಳಿಗೆ ಹೋಗಿ ಸೆಕ್ಯುಲರಿಸಂನ ಪಾಠ ಹೇಳುವ ದುರಹಂಕಾರದಲ್ಲಿ ನನಗಂತೂ ಭಾಗಿಯಾಗಲು ಇಷ್ಟವಿಲ್ಲ.

ಹಳ್ಳಿಗಳಲ್ಲಿ ವಾಸಿಸುವ ಇಂತಹ ಸಾಮಾನ್ಯ ಜನರ ಸಹಬಾಳ್ವೆಯ ಜೀವನಶೈಲಿಯಲ್ಲಿ–ಪ್ರಗತಿಪರ ಮನೋಭಾವದ ಆಧುನಿಕ ಸೆಕ್ಯುಲರ್ ಭಾರತೀಯರಿಗೆ ವಿಚಿತ್ರವಾಗಿ ಕಾಣುವ–ಧಾರ್ಮಿಕ ನಂಬಿಕೆಗಳು, ಮೂಢನಂಬಿಕೆಗಳು, ಆಚಾರಗಳು ಎಲ್ಲವೂ ಸೇರಿಕೊಂಡಿವೆ. ಆದರೆ ಆಧುನಿಕ ಭಾರತಕ್ಕೆ ಇವತ್ತಿನವರೆಗೂ–ಈಗಾಗಲೇ ಸ್ವಲ್ಪ ಮಸುಕಾದಂತೆ ತೋರುವ–ಜವಾಹರಲಾಲ್ ನೆಹರೂರನ್ನು ಹೊರತುಪಡಿಸಿ ಸೆಕ್ಯುಲರಿಸಂ ಅನ್ನು ಎತ್ತಿಹಿಡಿಯುವ ಇನ್ನೊಬ್ಬ ನಾಯಕನನ್ನು ಸೃಷ್ಟಿಸಲು ಸಾಧ್ಯವಾಗಿಲ್ಲ. ಸೆಕ್ಯುಲರಿಸ್ಟರು ಅಶೋಕ, ಅಕ್ಬರ್, ಕಬೀರ್, ಗಾಂಧಿಯವರ ಹೆಸರುಗಳನ್ನು ಯಾಂತ್ರಿಕವಾಗಿ ಜಪಿಸುತ್ತಿದ್ದರೆ, ದಕ್ಷಿಣ ಏಶಿಯಾದ ಸಾಮಾನ್ಯ ಜನ ಸೆಕ್ಯುಲರಿಸಂ ಎಂದರೇನು ಎಂದು ಗೊತ್ತಿಲ್ಲದೆಯೂ ಈ ಹೆಸರುಗಳನ್ನು ನೆನಪಿಸಿಕೊಳ್ಳಬಲ್ಲರು. ಭವಿಷ್ಯದ ದಿಕ್ಕು ತೋರುವ ಜನನಾಯಕರು, ಪ್ರಪಂಚಕ್ಕೆ ಪಾಠಹೇಳುವ ವಿದ್ವಾಂಸರು, ಚಿತ್ರವಿಚಿತ್ರ ಸಿದ್ಧಾಂತಗಳನ್ನು ಮಾರುವ ಪಂಡಿತರು/ಪತ್ರಕರ್ತರುಗಳೆಲ್ಲ ಸೇರಿ, ಈ

(೧೭ನೇ ಪುಟಕ್ಕೆ

## ಸಮಕಾಲೀನ

# ಮಾಧ್ಯಮಗಳ ಮಾಯಾ ಬಜ಼ಾರ್!



ಇದು ಮಾಧ್ಯಮಗಳ ಯುಗವಂತೆ. ಅಥವಾ ಹಾಗೆಂದು ಮಾಧ್ಯಮದವರೇ ಹೇಳಿಕೊಳ್ಳುತ್ತಿದ್ದಾರೆ. ಇಂದಿನ ಸಾರ್ವಜನಿಕ ಬದುಕೂ ಹಾಗೇ ನಡೆಯುತ್ತಿದೆ. ನಾಗರೀಕತೆಯ ಹೆಸರಿನಲ್ಲಿ ಸಮುದಾಯಗಳು ನಾಶವಾಗತೊಡಗುತ್ತಿದ್ದಂತೆ, ಜನರ ಭಾವನಾತ್ಮಕ ಅಗತ್ಯಗಳನ್ನು ಪೂರೈಸಲು ಹೊರಗಿನ ಶಕ್ತಿಯೊಂದು ಬೆಳೆಯತೊಡಗುವುದು ಸಹಜವೇ ಸರಿ. ಸಮುದಾಯಗಳ ನಾಶ ಹೆಚ್ಚೆಚ್ಚು ನೆಲೆಗಳಿಗೆ ವಿಸ್ತರಿಸತೊಡಗಿದಂತೆ ಈ ಹೊರಗಿನ ಶಕ್ತಿ ಕೂಡ ಜನರ ಬದುಕಿನ ಹೆಚ್ಚೆಚ್ಚು ನೆಲೆಗಳಿಗೆ ವಿಸ್ತರಿಸಿಕೊಂಡು ಕ್ರಿಯಾಶೀಲವಾಗತೊಡಗಿ, ಅಂತಿಮವಾಗಿ ಒಳಗಿನ ಶಕ್ತಿಯೇ ಆಗಿ ರೂಪಾಂತರಗೊಳ್ಳುತ್ತದೆ.

ಇಂದು ಮಾಧ್ಯಮ ನಮ್ಮ ಬದುಕಿನಲ್ಲಿ ಇಷ್ಟೊಂದು ಪ್ರಮಾಖ್ಯತೆಯನ್ನು ಪಡೆದಿರುವುದು ಈ ಹಾದಿಯಲ್ಲಿ ಕ್ರಮಿಸಿಯೇ. ಸಮುದಾಯಗಳ ನಾಶ ಸೃಷ್ಟಿಸಿದ ದೂರಗಳನ್ನು ತುಂಬಲು ಸುದ್ದಿ ವಾಹಕವಾಗಿ ಆರಂಭವಾದ ಮಾಧ್ಯಮವು ಪತ್ರಿಕೆ, ರೇಡಿಯೋ, ಟೆಲಿವಿಷನ್, ಗಣಕ, ಸಂಚಾರಿ ದೂರವಾಣಿ ಇತ್ಯಾದಿ ತಾಂತ್ರಿಕ ಆವಿಷ್ಕಾರಗಳ ಮೂಲಕ ಇಂದು ನಮ್ಮ ಬದುಕನ್ನೇ ಆಕ್ರಮಿಸಿಕೊಂಡು, ಅದರ ಮೂಲ ಲಂಗರುಗಳನ್ನೇ ಬದಲಾಯಿಸಿ ಅದನ್ನು ಇಡಿಯಾಗಿ ಪುನರ್ರೂಪಿಸುವ ವಿರಾಟ್ ಶಕ್ತಿಯಾಗಿ ಬೆಳೆದಿದೆ. ಪ್ರತಿ ವಾಸ್ತವ, ಪ್ರತಿ ಸತ್ಯ, ಪ್ರತಿ ಬದುಕುಗಳ ಪರಿಕಲ್ಪನೆಗಳನ್ನು ಸೃಷ್ಟಿಸಿ ಈಗ ಈ ಪ್ರತಿಗಳನ್ನೇ ನಿಜಗಳನ್ನಾಗಿಸುವ ಮಾಯಾವಿ ಶಕ್ತಿಯಾಗಿ ಮಾರ್ಪಾಡಾಗಿದೆ.

ಈ ಮಾಯಾವಿ ವಿದ್ಯಮಾನದ ಹಿಂದೆ ಇರುವುದು ಹಣ. ಆ ಹಣ ಹೂಡಿಕೆದಾರರ ಲಾಭಕೋರತನ. ಹೆಚ್ಚೆಚ್ಚು ಲಾಭಕ್ಕಾಗಿ ಹೆಚ್ಚೆಚ್ಚು ಪ್ರತಿ ವಾಸ್ತವ, ಪ್ರತಿ ಸತ್ಯ ಮತ್ತು ಪ್ರತಿ ಬದುಕಿನ ರೂಪಗಳ ನಿರ್ಮಾಣ. ಇವುಗಳ ದಾಳಿಗೆ ಸಿಕ್ಕಿ ನಮ್ಮ ನಿಜ ಬದುಕಿನ ಮೂಲ ಆಧಾರ ಅಥವಾ ಪರಿಕರಗಳಾದ ನಮ್ಮ ಭಾಷೆ, ನಮ್ಮ ಸಂಸ್ಕೃತಿ ಮತ್ತು ನಮ್ಮ ಧರ್ಮಗಳೇ ವಕ್ರ ರೂಪಗಳನ್ನು ತಾಳುತ್ತಾ, ಅವೇ ನಿಜ ರೂಪಗಳಾಗಿ ಮರ್ಪಾಡಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕ್ರಿಕೆಟ್ಟನ್ನೂ 'ಧರ್ಮ' ಎಂದು ಕರೆದು ಸಚಿನ್‌ರನ್ನು ಅದರ ದೇವರನ್ನಾಗಿ ಪ್ರತಿಷ್ಠಾಪಿಸಿ ಇಂದು ಅವರ ನಿವೃತ್ತಿಯನ್ನು ಒಂದು ಬೃಹತ್ ಭಾವೋದ್ವೇಗದ ರಾಷ್ಟ್ರೀಯ ಪ್ರದರ್ಶನದ ಉತ್ಸವವನ್ನಾಗಿ ಪರಿವರ್ತಿಸಿ ಅದು ಸೃಷ್ಟಿಸಿರುವ ಮಾರುಕಟ್ಟೆ ಮತ್ತು ಅದರ ವ್ಯಾಪಾರ ವೈವಿಧ್ಯ ಇದಕ್ಕೊಂದು ಉದಾಹರಣೆಯಷ್ಟೆ.

ಈ ಮಾಧ್ಯಮಗಳ ಮಾಯಾ ಬಜ಼ಾರ್‌ನ ಕೇಂದ್ರದಲ್ಲಿರುವ ಟೆಲಿವಿಷನ್‌ನ ಪರದೆಯನ್ನೊಮ್ಮೆ ನೋಡಿದರೆ ಸಾಕು, ಇದರ ಮಾಯಾವಿ ಸ್ವರೂಪ ಅಥವಾ ಅದರ ರಾಜಕಾರಣ ಅರ್ಥವಾಗುತ್ತದೆ. ಪುಟ್ಟ ಪರದೆಯ ಮೇಲೆ ಆಯಾ ವಾಹಿನಿಯ ವಾಣಿಜ್ಯ ಸಾಮರ್ಥ್ಯಕ್ಕೆ ತಕ್ಕಂತೆ ಕನಿಷ್ಠ ಮೂರರಿಂದ ಏಳು ವಿದ್ಯಮಾನಗಳು ಒಟ್ಟಿಗೇ ನಡೆಯುತ್ತಿರುತ್ತವೆ. ಇದರ ಹಿಂದೆ ಇರುವುದು ಬರೀ ದುರಾಸೆಯಲ್ಲ. ಒಟ್ಟಿಗೇ ನಡೆಯುತ್ತಿರುವ ಈ ಬಹು ವಿದ್ಯಮಾನಗಳಲ್ಲಿ ಯಾವುದೊಂದನ್ನೂ ಪೂರ್ಣವಾಗಿ, ಸ್ಪಷ್ಟವಾಗಿ, ಖಚಿತವಾಗಿ ತನ್ನ ಗ್ರಹಿಕೆಗೆ ತಂದುಕೊಳ್ಳಲಾಗದ 'ನಾಗರಿಕ ವೀಕ್ಷಕ'ನ ಮನಸ್ಸು ಅಸ್ಥಿರ ಮತ್ತು ಅತೃಪ್ತವಾಗಿಯೇ ಉಳಿದುಬಿಟ್ಟು, ಅವನು/ಅವಳು ಸ್ಥಿರತೆ ಮತ್ತು ತೃಪ್ತಿಯನ್ನು ಅರಸುತ್ತಾ ಆ ಪರದೆಗೆ ನಿರಂತರ ದಾಸನಾಗಿ ಇರುವಂತೆ ಮಾಡಿಕೊಳ್ಳುವ ಭಯಾನಕ ದುರುದ್ದೇಶವೂ ಇದರ ಹಿಂದೆ ಇದ್ದಂತಿದೆ.

೨೪ x ೭ ಟೆಲಿವಿಷನ್ ಎಂದರೆ ಮತ್ತೇನಲ್ಲ. ಅದು ನಿರಂತರ ಹಸಿವಿನ ಭೂತ. ಅದು ಸಿಕ್ಕಿದ್ದನ್ನೆಲ್ಲ ತಿನ್ನುತ್ತಿರುತ್ತದೆ;ಅದೆಲ್ಲವೂ ರುಚಿಯಾಗಿದೆ ಎನ್ನುವಂತೆ ಸದಾ ಚಪ್ಪರಿಸುತ್ತಾ ನಮ್ಮಲ್ಲೂ ನಿರಂತರ ಹುಸಿ ಹಸಿವಿನ್ನು ಉದ್ರೇಕಿಸುತ್ತಿರುತ್ತದೆ. ಆ ಮೂಲಕ ನಮ್ಮ ರುಚಿ-ಅಭಿರುಚಿಗಳನ್ನೂ, ನಮ್ಮ ನಿಜ ಬದುಕನ್ನೂ ನಾಶ ಮಾಡುತ್ತಿರುತ್ತದೆ. ಇದು ಈಗಾಗಲೇ ರೇಡಿಯೋವನ್ನು ಹೆಚ್ಚೂ ಕಡಿಮೆ ತಿಂದು ಹಾಕಿದೆ. ಪತ್ರಿಕೆಗಳನ್ನು ಅವುಗಳಲ್ಲಿ ಉಳಿವಿನ ಭೀತಿ ಹುಟ್ಟಿಸಿ ಅವುಗಳನ್ನು ತನ್ನ ಅಕ್ಷರ ಆವೃತ್ತಿಯನ್ನಾಗಿ ಮಾಡಿಕೊಂಡು ಅವನತಿಗೊಳಿಸಿದೆ. ಇಂದು ನಮ್ಮ ಎಷ್ಟು ಪತ್ರಿಕೆಗಳಿಗೆ ಮಾಲೀಕೇತರ ಸ್ವತಂತ್ರ ಸಂಪಾದಕರಿದ್ದಾರೆ ಒಮ್ಮೆ ಎಣಿಸಿ ನೋಡಿ. ಜೊತೆಗೆ ಸಾಮಾಜಿಕ ಮಾಧ್ಯಮಗಳೆಂಬ ತನ್ನ ಮರಿಗಳನ್ನು ಬೇರೆ ಹುಟ್ಟು ಹಾಕುತ್ತಾ ತನಗೆ ಸ್ಪರ್ಧೆಯನ್ನು ತಾನೇ ಹುಟ್ಟುಹಾಕಿಕೊಳ್ಳುವ ಅಪಾರ ವೃತ್ತಿ ಜಾಣ್ಮೆಯನ್ನು ಮೆರೆಯುತ್ತಿದೆ!

ಈ ಎಲ್ಲ ವಿದ್ಯಮಾನಗಳ ಒಂದು ಪಕ್ಷಿ ನೋಟ ಇಲ್ಲಿದೆ.-ಸಂ.

# ಪತ್ರಿಕೋದ್ಯಮದ ಹೊಸ ಯಜಮಾನರುಗಳು...

-ಜಿ. ರಾಜಶೇಖರ್




"ದಿನೇ ದಿನೇ ಹೆಚ್ಚುತ್ತಿರುವ, ಬಹುರಾಷ್ಟ್ರೀಯ ಕಂಪನಿಗಳ ಪ್ರಭಾವ ಮತ್ತು ದೇಶದ ರಾಜಕೀಯವನ್ನು ಅವು ನಿಯಂತ್ರಿಸುತ್ತಿರುವ ಬಗೆ -ಇವುಗಳ ಕುರಿತು ಮುಕ್ತ ಚರ್ಚೆ ಕೂಡಾ ನಡೆಸಲು ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಇದೆ. ಚರ್ಚೆಯ ತರ್ಕ ಮತ್ತು ಅದು ಒಳಗೊಳ್ಳಬೇಕಾದ ವಿಷಯಗಳು ಈ ಎರಡನ್ನೂ ಈಗ ಈ ಕಂಪನಿಗಳೇ ನಿರ್ಧರಿಸುತ್ತಿವೆ. ಇತ್ತೀಚೆಗೆ ನಮ್ಮಲ್ಲಿ ನೀರಾ ರಾಡಿಯಾ ಟೇಪುಗಳು ಬಹಿರಂಗಗೊಂಡದ್ದು ಮತ್ತು ಅಮೇರಿಕದಲ್ಲಿ ಆ ರಾಷ್ಟ್ರದ ಸರಕಾರ ತನ್ನ ಗೂಢ ಚರ್ಯೆ ಸಂಸ್ಥೆ ಮುಖಾಂತರ ನಡೆಸುತ್ತಿದ್ದ ಕದ್ದಾಲಿಕೆಯ ವಿವರಗಳನ್ನು ಸ್ವತಃ ಆ ಸಂಸ್ಥೆಯ ಓರ್ವ ನೌಕರ ಎಡ್ವರ್ಡ್ ಸ್ನೋಡೆನ್ ಜಗಜ್ಜಾಹೀರು ಪಡಿಸಿದ್ದು



- ಈ ವಿದ್ಯಮಾನಗಳ ನಂತರ ಸರಕಾರ, ಕಾರ್ಪೊರೇಟುಗಳು ಮತ್ತು ಮಾಧ್ಯಮಗಳ ನಡುವೆ ಇರುವ ಕೊಡುಕೊಳುಗೆಯ ನಿಕಟ ಬಾಂಧವ್ಯ ಎಲ್ಲರಿಗೂ ಮನವರಿಕೆಯಾಗಿದೆ. ಅದರ ಕುರಿತು ಮಾತನಾಡುವವರನ್ನು ತಲೆಕೆಟ್ಟವರು ಎಂದು ಜನ ಭಾವಿಸುತ್ತಿದ್ದ ಕಾಲವೊಂದಿತ್ತು. ಕೆಲವು ವರ್ಷಗಳ ಹಿಂದೆ ನಾನು ಅರಣ್ಯಗಳಲ್ಲಿ ಗಣಿಗಾರಿಕೆ ಮತ್ತು ಬಲಾತ್ಕಾರದ ಭೂಸ್ವಾಧೀನಗಳ ನಡುವಿನ ಸಂಬಂಧದ ಬಗ್ಗೆ ಹೇಳಿದಾಗ ಜನ ನನ್ನನ್ನು ಹುಚ್ಚಿ ಎಂಬಂತೆ ಕಂಡರು. ಈಗ ವಾಸ್ತವ ಏನು ಎಂಬುದು ಎಲ್ಲರಿಗೂ ಅರಿವಾಗಿದೆ." (ಇತ್ತೀಚೆಗೆ ಪತ್ರಕರ್ತರ ಜೊತೆ ಸಂಭಾಷಣೆಯಲ್ಲಿ ಅರುಂಧತಿ ರಾಯ್ ಹೇಳಿದ್ದು).

ಮೇಲಿನ ಉದ್ಧ್ರತದಲ್ಲಿ ಸರಕಾರ, ಕಾರ್ಪೊರೇಟ್ ಬಂಡವಾಳಶಾಹಿ ಮತ್ತು ಮಾಧ್ಯಮಗಳ ನಡುವಿನ ಸಂಬಂಧ ಯಾವ ಬಗೆಯದ್ದು ಎಂಬ ಸುಳಿವು ನಮಗೆ ಸಿಗುತ್ತದೆ. ಜನರನ್ನು ಪೂರ್ತಿ ದೋಚಲೆಂದೇ ಪರಸ್ಪರ ಕೈಜೋಡಿಸಿರುವ ದುಷ್ಟಕೂಟ ಇದು.




ಹಾಗೆಂದು ಬಂಡವಾಳ ಶಾಹಿಯ ಒಡೆತನದಲ್ಲಿ ಪತ್ರಿಕೆಗಳು ನಡೆಯುವುದು ಹೊಸ ವಿದ್ಯಮಾನವೇನೂ ಅಲ್ಲ. ಬಂಡವಾಳ ತೊಡಗಿಸದೆ ಪತ್ರಿಕೆಯೊಂದನ್ನು ಪ್ರಾರಂಭಿಸುವುದು ಸಾಧ್ಯವಿಲ್ಲ. Freedom of the press is the freedom of one who owns the press ಎಂಬ ಮಾತು ಸಾಕಷ್ಟು ಹಳೆಯದೇ. ಒಂದು ಸಣ್ಣ ಮಟ್ಟದ ದಿನಪತ್ರಿಕೆಯನ್ನೋ ವಾರಪತ್ರಿಕೆಯನ್ನೋ ಪ್ರಕಟಿಸಲು ಅವಶ್ಯವಿರುವ ಯಂತ್ರೋಪಕರಣ, ಸಿಬ್ಬಂದಿ, ಕಾಗದ ದಾಸ್ತಾನು ಇತ್ಯಾದಿಗಳು ಸಹ ಸಾಮಾನ್ಯರ ಕಿಸೆಗೆ ಮೀರಿದ್ದು. ಹಾಗಾಗಿ ಪತ್ರಿಕೆ, 'ಪತ್ರಿಕೋದ್ಯಮ'ವಾಗುವುದು ಒಂದು ಅನಿವಾರ್ಯ ಬೆಳವಣಿಗೆ. ಕೇವಲ ಒಬ್ಬನ ಬಳಕೆಗಾಗಿ ಒಂದು ಕುರ್ಚಿಯನ್ನೋ, ಮೇಜನ್ನೋ ಅದು ಮರದ್ದಾದರೆ ಉತ್ಪಾದಿಸಬಹುದು. ಆದರೆ ಕೇವಲ ಒಬ್ಬನಿಗಾಗಿ ಒಂದು ಕಾರನ್ನೋ ಬ್ಲೇಡನ್ನೋ ತಯಾರಿಸಲಾಗುವುದಿಲ್ಲ. ಹಾಗೆಯೇ ಕೇವಲ ಒಬ್ಬನ ಓದಿಗಾಗಿ ಒಂದು ದಿನ ಪತ್ರಿಕೆಯನ್ನು ಅಚ್ಚಿಸಲಾಗದು. ಒಂದು ಪ್ರಮಾಣದ ಬಂಡವಾಳ ಹೂಡಿಕೆ ಮತ್ತು ಕೇಂದ್ರೀಕರಣವಿಲ್ಲದೆ, ಪತ್ರಿಕೆಗಳನ್ನು ಹೊರತರುವುದೇ ಅಸಾಧ್ಯ. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಹುಟ್ಟಿಕೊಂಡ ಮೂರು ಆಂಗ್ಲ ಪತ್ರಿಕೆಗಳು – *ಟೈಮ್ಸ್ ಆಫ್ ಇಂಡಿಯಾ*, *ಸ್ಟೇಟ್ಸ್‌ಮನ್* ಮತ್ತು *ದಿ ಹಿಂದು* ಸ್ವಾತಂತ್ರ್ಯಾನಂತರದಲ್ಲಿ ಬೃಹತ್ ಪ್ರಕಾಶನಗಳಾಗಿ ಬೆಳೆದು ನಿಂತಿವೆ. ಆದರೆ ಆ ಪತ್ರಿಕೆಗಳು ಮತ್ತು ಹೆಚ್ಚಿನ ದೇಶಭಾಷಾ ಪತ್ರಿಕೆಗಳು ಸಹ, ತಮ್ಮ ಮೊದಲ ದಿನಗಳಲ್ಲಿ ಬ್ರಿಟಿಷ್ ವಸಾಹತುಶಾಹಿಯನ್ನು ಎದುರು ಹಾಕಿಕೊಂಡು ದೇಶದ ಸ್ವಾತಂತ್ರ್ಯ ಚಳುವಳಿಯನ್ನು ಬೆಂಬಲಿಸಿದ್ದವು. ಸರಕಾರ, ಬಂಡವಾಳ ಮತ್ತು ಮಾಧ್ಯಮಗಳ ನಡುವೆ ಈಗ ಕಾಣಿಸುವಂತಹ ಮೈತ್ರಿ ಆಗಿನ್ನೂ ಏರ್ಪಟ್ಟಿರಲಿಲ್ಲ.

ಈ ತ್ರಿಕೋಣ ಮೈತ್ರಿ, ಭಾರತದ ಪತ್ರಿಕಾರಂಗದಲ್ಲಿ ೯೦ರ ದಶಕದ ನಂತರ ಕಾಣಿಸಿಕೊಂಡ ಬೆಳವಣಿಗೆಯಾಗಿದೆ. ಭಾರತ ಸರಕಾರ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣಗಳ ಹೊಸ ಆರ್ಥಿಕ ನೀತಿಯನ್ನು ಅಳವಡಿಸಿಕೊಂಡಿದ್ದರ ನೇರ ಪರಿಣಾಮವಿದು. ದೇಶದೊಳಗೆ ಪ್ರವೇಶಿಸಿದ ಅನತಿಕಾಲದಲ್ಲಿಯೇ, ಮನೆಮನೆಗಳ ಒಳಹೊಕ್ಕ ಟೀವಿ ಅಕಾಲ ಘಟ್ಟದ ಇನ್ನೊಂದು ಮಹತ್ವದ ವಿದ್ಯಮಾನ. ಟೀವಿಯು ಮಾಧ್ಯಮದ ಸ್ವರೂಪವನ್ನೇ ಬದಲಾಯಿಸಿತು. ಚಿಂತಕರು 'ಮೂರ್ಖರ ಪೆಟ್ಟಿಗೆ' ಎಂದು ಸಕಾರಣವಾಗಿ ಹೀಗೆಳೆಯುವ ಈ ಮಾಧ್ಯಮ, ಕೆಲವೇ ವರ್ಷಗಳ ಒಳಗೆ ಗಳಿಸಿಕೊಂಡ ಅಪಾರ ಜನಪ್ರಿಯತೆ ಒಂದು ಅಭೂತಪೂರ್ವ ವಿದ್ಯಮಾನವಾಗಿದೆ. ಜನಪ್ರಿಯ ದಿನಪತ್ರಿಕೆಯೊಂದು, ತನ್ನ ಮೊದಲ ಒಂದು ಲಕ್ಷ ಪ್ರತಿಗಳ ಗುರಿ ತಲುಪಲು ಹಲವು ವರ್ಷ ತೆಗೆದುಕೊಂಡರೆ ಎರಡನೆಯ ಮತ್ತು ಆನಂತರದ ಆವೃತ್ತಿಗಳನ್ನು ಹೊರತರಲು ದಶಕಗಳೇ ಬೇಕಾಗುತ್ತದೆ. ಆದರೆ ಟೀವಿ, ದೇಶದಲ್ಲಿ ಪ್ರಾಯೋಗಿಕವಾಗಿ ಶುರುವಾಗಿ ದೂರದರ್ಶನದ ನೀರಸ ಕಪ್ಪು ಬಿಳುಪು ಪ್ರಸಾರದಿಂದ ಬಣ್ಣಕ್ಕೆ ಹೊರಳಿಕೊಂಡು, ನಂತರ ನೂರಾರು ಚಾನೆಲ್ಲುಗಳ ಅಹೋ ರಾತ್ರಿ ಪ್ರಸಾರದ ಜೊತೆ ೨೪ ಗಂಟೆಯ ಸುದ್ದಿ ಪ್ರಸಾರಕ್ಕೆ ಮೀಸಲಾದ ಚಾನೆಲ್ಲುಗಳವರೆಗೆ ಈ ಹೊಸ ಮಾಧ್ಯಮದ ಬೆಳವಣಿಗೆ, ಕಳೆದ ಶತಮಾನದ ಕೊನೆಯ ೧೦–೧೫ ವರ್ಷಗಳ ಅವಧಿಯಲ್ಲಿ ನಡೆದು ಹೋಗಿದೆ. ತಾಂತ್ರಿಕ ಸಹಕಾರವೂ ಸೇರಿದಂತೆ ಎಲ್ಲ ಸಂಪನ್ಮೂಲಗಳನ್ನೂ ಸರಕಾರ ಈ ಹೊಸ ಮಾಧ್ಯಮಕ್ಕೆ ಒದಗಿಸಿದ್ದೇ ಇದು ಇಷ್ಟು ಬೇಗ ಸರ್ವವ್ಯಾಪಿಯಾಗಲು ಒಂದು ಪ್ರಮುಖ ಕಾರಣ. ಪ್ರಭುತ್ವ ಮತ್ತು ಆಳುವ ವರ್ಗದ ಉದ್ದೇಶಗಳಿಗೆ ಈ ಹೊಸ ಮಾಧ್ಯಮ ಹೇಳಿ ಮಾಡಿಸಿದಂತಿತ್ತು. ತನ್ನ ಹಿತಾಸಕ್ತಿಗಳಿಗೆ "ಪ್ರಜೆಗಳ ಸಮ್ಮತಿಯನ್ನು ಉತ್ಪಾದಿಸುವುದು" ( ನೋಮ್ ಚೋಮ್ಸ್‌ಕಿಯವರ ಮಾತು) ಮತ್ತು ಆ ಮುಖಾಂತರ ಜನರ ಒಪ್ಪಿಗೆ ಪಡೆದುಕೊಂಡೇ, ತನ್ನ ಯಜಮಾನಿಕೆಯನ್ನು ಅವರ ಮೇಲೆ ಹೇರುವುದು – ಆಳುವ ವರ್ಗದ ಈ ಕಾರ್ಯಯೋಜನೆ, ಟೀವಿಯಿಂದಾಗಿ ಹಿಂದೆಂದಿಗಿಂತಲೂ ಈಗ ಸುಲಭವಾಯಿತು. ಟೀವಿ ಹೇಳಿ ಕೇಳಿ ಒಂದು ದೃಶ್ಯ ಮಾಧ್ಯಮ; ಅದೂ ಅಲ್ಲದೆ ಪ್ರತ್ಯಕ್ಷ ನೋಡುವುದು ಎಲ್ಲರೂ ಒಪ್ಪಿಕೊಂಡಿರುವ ಒಂದು ಪ್ರಮಾಣ. ಹಾಗಾಗಿ ಜನ ಟೀವಿಯಲ್ಲಿ ತಾವು ನೋಡಿದ್ದೆಲ್ಲವೂ ನಿಜವೆಂದೇ ನಂಬಿ 'ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು' ಎಂಬ ಪರಂಪರಾಗತ ವಿವೇಕವನ್ನು ಮರೆತರು; ವಿದ್ಯುನ್ಮಾನ ಕ್ರಾಂತಿಯ ದೂರಗಾಮಿ ಪರಿಣಾಮಗಳನ್ನು ವಿಶ್ಲೇಷಿಸಿದ ಚಿಂತಕ ಮಾರ್ಷಲ್ ಮೆಕ್ ಲುಹಾನ್ ದಶಕಗಳ ಹಿಂದೆಯೇ ಹೇಳಿದ "The Medium is the message" ಎಂಬ ಮಾತನ್ನು ಟೀವಿ ನಿಜ ಮಾಡಿತು.

ಟೀವಿ ಪತ್ರಿಕಾರಂಗವನ್ನು ಎರಡು ರೀತಿಗಳಲ್ಲಿ ಪ್ರಭಾವಿಸಿದೆ. ದಿನಪೂರ್ತಿ ಸುದ್ದಿ ಪ್ರಸಾರಕ್ಕೆ ಮೀಸಲಾಗಿರುವ ಚಾನೆಲ್ಲುಗಳಿಂದಾಗಿ ಯಾರೂ ಈಗ ಹಿಂದಿನ ದಿನದ "ಬಿಸಿ ಬಿಸಿ" ಸುದ್ದಿಗಾಗಿ ಇಂದಿನ ದಿನಪತ್ರಿಕೆಯನ್ನು ಕೈಗೆತ್ತಿಕೊಳ್ಳುವುದಿಲ್ಲ .ಟೀವಿ ಈಗ ಪ್ರತಿಕ್ಷಣದ ಕ್ಷಣದ ಸುದ್ದಿಯನ್ನು ಆ ಕ್ಷಣವೆ ತಲುಪಿಸುತ್ತದೆ. ಸಾವಿನ ಸುದ್ದಿ ಕೂಡ ಈಗ ನೋಡುಗರನ್ನು ತಲುಪುವುದು "ಲೈವ್" ಆಗಿಯೇ. ಟೀವಿ, ಮೊಬೈಲು ಮತ್ತು ಇಂಟರ್‌ನೆಟ್‌ಗಳು ಈಗ ಸುದ್ದಿ ಪ್ರಸಾರದಲ್ಲಿ ಪತ್ರಿಕೆಗಳಿಗೆ ಪ್ರಬಲ ಪ್ರತಿಸ್ಪರ್ಧಿಗಳಾಗಿವೆ. ಈ ಸ್ಪರ್ಧೆಯನ್ನು ಎದುರಿಸುವ ಒಂದು ಉಪಾಯವಾಗಿ ಈಗ ಹೆಚ್ಚಿನ ಪಾಶ್ಚಿಮಾತ್ಯ ಪತ್ರಿಕೆಗಳು ಘಟನೆಗಳ ಯಥಾವತ್ ವರದಿ ಬದಲು, ಘಟನೆಗಳ ಕಥನವನ್ನು Newsನ ಬದಲು news storiesಗಳನ್ನು ಪ್ರಕಟಿಸಲು ಪ್ರಾರಂಭಿಸಿವೆ. ಆದರೆ ಭಾರತದ ಹೆಚ್ಚಿನ ಪತ್ರಿಕೆಗಳು, ಅದರಲ್ಲೂ ವಿಶೇಷವಾಗಿ ದೇಶ ಭಾಷಾ ಪತ್ರಿಕೆಗಳು ಟೀವಿಯನ್ನು ಅನುಕರಿಸುವುದೇ ಅದನ್ನು ಎದುರಿಸುವ ಅತ್ಯುತ್ತಮ ವಿಧಾನ ಎಂದು ಭಾವಿಸಿದಂತಿದೆ. ಅವು ಥೇಟು ಟೀವಿಯ ಹಾಗೇನೆ, ತಮ್ಮ ಸುದ್ದಿಗಳನ್ನು ಹೆಚ್ಚು ಹೆಚ್ಚು ರೋಚಕಗೊಳಿಸುವ ಜಿದ್ದಿಗೆ ಬಿದ್ದು ದುರಂತವನ್ನು ಸಹ ಅಪ್ಯಾಯಮಾನಗೊಳಿಸಿ ಓದುಗರಿಗೆ ಉಣಬಡಿಸುತ್ತಿವೆ. ಉದಾಹರಣೆ ಬೇಕೆಂದರೆ ಕನ್ನಡ ದಿನ ಪತ್ರಿಕೆಗಳ ಇತ್ತೀಚೆಗೆ ಯಾವುದೇ ಒಂದು ವಾರದ ಮುಖಪುಟ ತಲೆಬರಹಗಳನ್ನೇ ನೋಡಿ.

ಪತ್ರಿಕೆಗಳ ಧ್ಯೇಯ ಧೋರಣೆಗಳನ್ನು ನಿಯಂತ್ರಿಸುತ್ತಿರುವ ಯಜಮಾನ ಶಕ್ತಿಗಳ ಸ್ವರೂಪದಲ್ಲೂ ಇತ್ತೀಚೆಗೆ ಸೂಕ್ಷ್ಮವಾದ ಮಾರ್ಪಾಡುಗಳಾಗಿವೆ. ೧೯೭೫ರಿಂದ ಈಚೆಗೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಹೇರಿದ್ದ ತುರ್ತುಪರಿಸ್ಥಿತಿಯ ದಿನಗಳನ್ನು ಹೊರತುಪಡಿಸಿದರೆ ಪತ್ರಿಕಾರಂಗದಲ್ಲಿ ಸರಕಾರದ ಹಸ್ತಕ್ಷೇಪ ನಗಣ್ಯವಾಗಿತ್ತು ಎಂದೇ ಹೇಳಬೇಕು. ಆದರೆ ಕೈಗಾರಿಕೋದ್ಯಮಿಗಳು, ಹಣಕಾಸು ವಹಿವಾಟುದಾರರು ಮತ್ತು ಬಲಪಂಥೀಯ ಹಿತಾಸಕ್ತಿಗಳು ಭಾರತದ ಪತ್ರಿಕಾರಂಗದ ಮೇಲೆ ಮೊದಲಿನಿಂದಲೂ ಹಿಡಿತ ಸಾಧಿಸಿದ್ದವು. ಈಗ ಈ ನಿಯಂತ್ರಣ, ಇನ್ನಷ್ಟು ಬಿಗಿಯಾಗಿದೆ. ಯಾವ ಜನಪ್ರಿಯ ದಿನ/ವಾರ ಪತ್ರಿಕೆಯೂ ಓದುಗರು ಕೊಡುವ ಹಣದಿಂದ ನಡೆಯುವುದಿಲ್ಲ. ಆ ಪ್ರಕಟಣೆಗಳ ಒಟ್ಟು ಉತ್ಪಾದನಾ ವೆಚ್ಚದ ಒಂದು ಸಣ್ಣ ಭಾಗವೂ ಓದುಗರಿಂದ ಭರ್ತಿಯಾಗುವುದಿಲ್ಲ. ಅವುಗಳ ಆದಾಯದ ಬಹುದೊಡ್ಡ ಭಾಗ ಬರುವುದು ಜಾಹೀರಾತುಗಳಿಂದ. ಕೆಲವು ವರ್ಷಗಳ ಹಿಂದೆ ಪ್ರತಿಷ್ಠಿತ ಆಂಗ್ಲ ದಿನಪತ್ರಿಕೆಯೊಂದು ತನ್ನ ಪ್ರತಿಗಳ ದರವನ್ನು ಹಠಾತ್ತನೆ ಕಡಿತಗೊಳಿಸಿ, ಇತರ ಪತ್ರಿಕೆಗಳ ವಿರುದ್ಧ ಒಂದು ದರ ಸಮರವನ್ನೇ ನಡೆಸಿತ್ತು. ಅದರ ಪರಿಣಾಮವಾಗಿ ಎಲ್ಲ ಪತ್ರಿಕೆಗಳೂ ತಮ್ಮ ದರಗಳನ್ನು ಇಳಿಸಲೇಬೇಕಾಯಿತು. ಜಾಹೀರಾತು ಆದಾಯವನ್ನು ಅವು ಅವಲಂಬಿಸುವುದು ಜಾಸ್ತಿ ಆಯಿತು; ಕೈಗಾರಿಕೋದ್ಯಮಿಗಳ ಹಿಡಿತವೂ ಇನ್ನಷ್ಟು ಬಲವಾಯಿತು. ಹಲವು ಪತ್ರಿಕೆಗಳ ಧೋರಣೆಯನ್ನು ಸಂಪಾದಕರ ಬದಲು, ಅವುಗಳ ಜಾಹೀರಾತು ವಿಭಾಗದ ಅಧಿಕಾರಿಗಳು ರೂಪಿಸತೊಡಗಿದರು. ಎರಡು ಉದಾಹರಣೆಗಳಿಂದ ಇದನ್ನು ಸ್ಪಷ್ಟ ಪಡಿಸಬಹುದು. ೨೦೧೧ರಲ್ಲಿ


# Battle for control breaks out in *The Hindu* very divided family

ARCHNA SHUKLA
NEW DELHI, MARCH 21

A BITTER battle has broken out among family members for control of one of the country's oldest and most respected media companies, Kasturi & Sons Ltd, the publisher of the 132-year-old English newspaper *The Hindu* and business daily *The Hindu Business Line*.

At the heart of this battle is the proposed retirement of publisher and the group Editor-in-Chief N Ram and his decision to dig his heels in.

The first casualty in the battle is N Murali, Ram's younger brother and the company's managing director. He was divested of his powers this week and replaced with K Balaji, a member of the extended family and also a board member. According to people close to the developments, the board is split, one group supporting Ram and the other seeking his retirement.

The sources claimed that at a meeting held last September, Murali, who also looked after administrative processes at the company, proposed governance norms for retirement of family members on the board.

CONTINUED ON PAGE 2

No retirement age: N Ram

THE FINANCIAL EXPRESS EXCLUSIVE

ನವದೆಹಲಿಯಲ್ಲಿ ಭ್ರಷ್ಟಾಚಾರದ ವಿರುದ್ಧ ಬಾಬಾರಾಮ್‌ದೇವ್‌ರ ಸರ್ಕಸ್ ಮತ್ತು ಅಣ್ಣಾ ಹಜಾರೆಯವರ ಉಪವಾಸ ಸತ್ಯಾಗ್ರಹಕ್ಕೆ ಕೆಲವು ದಿನಗಳ ಮೊದಲು, ದೆಹಲಿಯಲ್ಲಿ ಎಡ ಪಕ್ಷಗಳ ವತಿಯಿಂದ ಆಯೋಜಿಸಿದ್ದ ಬೃಹತ್ ಕಾರ್ಮಿಕ ರ್‍ಯಾಲಿಯೊಂದು ನಡೆಯಿತು. ಸುಮಾರು ೫ ಲಕ್ಷ ಜನ ಭಾಗವಹಿಸಿದ ಈ ರ್‍ಯಾಲಿ ಯಾವ ಮಾಧ್ಯಮದಲ್ಲೂ ಸುದ್ದಿಯಾಗಲಿಲ್ಲ. ಅದೇ ವರ್ಷ ಜೂನ್ ತಿಂಗಳಲ್ಲಿ ಹರಿಯಾಣಾದ ಮನೇಸರ್‌ನಲ್ಲಿ ಮಾರುತಿ ಸುಝುಕಿ ಕಾರು ಫ್ಯಾಕ್ಟರಿಯ ಸುಮಾರು ೨೦೦೦ ಹಂಗಾಮಿ ಕಾರ್ಮಿಕರು ಫ್ಯಾಕ್ಟರಿಯ ಅಸೆಂಬ್ಲಿ ಲೈನ್‌ನ ಅಮಾನುಷ ನಿಯಮಗಳ ವಿರುದ್ಧ ಮುಷ್ಕರ ನಡೆಸಿದ್ದರು. ಕಂಪನಿಯ ಮಾಲಕರು, ಈ ಕಾರ್ಮಿಕರ ಮುಷ್ಕರಕ್ಕೆ ಸ್ಪಂದಿಸಲಿಲ್ಲ. ಉದ್ರಿಕ್ತ ಕಾರ್ಮಿಕರು, ಫ್ಯಾಕ್ಟರಿಯ ಓರ್ವ ಕಾರ್ಯನಿರತ ಅಧಿಕಾರಿಯನ್ನೇ ಥಳಿಸಿ ಕೊಂದರು. ಮಾಧ್ಯಮಗಳಲ್ಲಿ ಅದು ಮಾತ್ರ ಸುದ್ದಿಯಾಯಿತು. ಆದರೆ ಈ ಕಾರ್ಮಿಕರ ಬೇಡಿಕೆಗಳು ಹಾಗೂ ಅವರ ಆಕ್ರೋಶದ ಹಿನ್ನೆಲೆ ಏನು ಎಂಬುದನ್ನು ಯಾವ ಪತ್ರಿಕೆಯೂ ವರದಿ ಮಾಡಲಿಲ್ಲ. ಹಾಗೆ ಮಾಡಿದರೆ ಮಾರುತಿ ಸುಝುಕಿ ಕಂಪೆನಿಯ ಜಾಹೀರಾತು ನಿಂತು ಹೋಗುವ ಭಯ ಸಂಪಾದಕರ ಕೈಗಳನ್ನು ಕಟ್ಟಿಹಾಕಿದ್ದವು.

ಮಾಧ್ಯಮಗಳ ಈ ಬದಲಾದ ಪರಿಸ್ಥಿತಿಯಿಂದಾಗಿ, ಈಗ ಪತ್ರಿಕೆಗಳಿಗೆ ಮಾಲಕರೇ ಸಂಪಾದಕರೋ, ಅಥವಾ ಸ್ವತಂತ್ರ ಸಂಪಾದಕರೋ ಎಂಬ ಪ್ರಶ್ನೆಯೇ ಅಪ್ರಸ್ತುತವಾಗಿದೆ. ಆದರೆ ಪತ್ರಿಕೆಯ ಮಾಲಕರೇ ಸಂಪಾದಕರಾಗಿಯೂ, ತಮ್ಮ ಪತ್ರಿಕೆಯನ್ನು ವೃತ್ತಿ ಧರ್ಮಕ್ಕೆ ತಕ್ಕಂತೆ ನಡೆಸಿಕೊಂಡು ಹೋದದ್ದಕ್ಕೂ ಉದಾಹರಣೆಗಳಿವೆ. ಉದಾಹರಣೆಗೆ ದ ಹಿಂದು ಪತ್ರಿಕೆಯ ಮಾಲಕ ಬಳಗದಲ್ಲಿ ಒಬ್ಬರಾಗಿದ್ದ ಎನ್. ರಾಮ್ ಅನೇಕ ವರ್ಷ ಅದರ ಸಂಪಾದಕರೂ ಆಗಿದ್ದರು. ಆ ಪತ್ರಿಕೆ ಅತ್ಯಂತ ಜನಪರ ಮತ್ತು ನಿರ್ಭೀತ ವರದಿ/ಬರಹಗಳನ್ನು ಪ್ರಕಟಿಸಿದ್ದು ಕೂಡ ಆ ಅವಧಿಯಲ್ಲೇ. *ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್* ಪತ್ರಿಕಾ ಬಳಗದ ಮಾಲಕರು ಮೊದಲಿನಿಂದಲೂ ತಮ್ಮ ಸಂಪಾದಕರಿಗೆ ಸಾಕಷ್ಟು ಸ್ವಾತಂತ್ರ್ಯ ನೀಡಿದ್ದರು. ಹಾಗಾಗಿ ಪೋತನ್ ಜೋಸೆಫ್ ಟಿ.ಎಸ್. ರಾಮಚಂದ್ರರಾವ್, ವೈ ಎನ್‌ಕೆಯಂತಹವರು ಅವರ ಪತ್ರಿಕೆಗಳ ಸಂಪಾದಕರಾಗಲು ಸಾಧ್ಯವಾಯಿತು. ಇಂಡಿಯನ್ ಎಕ್ಸ್‌ಪ್ರೆಸ್ ಸಂಸ್ಥೆ ಗೋಯಂಕಾಗಳ ಒಡೆತನದಲ್ಲಿದ್ದಾಗ ಫ್ರಾಂಕ್ ಮೊರೇಸ್‌ರಂತಹವರು ಆ ಪತ್ರಿಕೆಯ ಸಂಪಾದಕರಾಗಿದ್ದರು. ಅದೇ ಸಂಸ್ಥೆ ನಡೆಸುತ್ತಿದ್ದ ಕನ್ನಡ ಪ್ರಭ'ಕ್ಕೆ ಖಾದ್ರಿ ಶಾಮಣ್ಣ, ವೈಎನ್‌ಕೆಯಂತಹವರೂ ಸಂಪಾಕದರಾಗಿದ್ದುದೂ ಆ ಕಾಲದಲ್ಲೇ. ತಮ್ಮ ವೃತ್ತಿ ಮತ್ತು ವೃತ್ತಿ ಧರ್ಮ ಎರಡಕ್ಕೂ ನಿಷ್ಠೆ ಹೊಂದಿದ್ದ ಅಂತಹ ಸಂಪಾದಕರ ಜಮಾನ ಪತ್ರಿಕಾರಂಗದಲ್ಲಿ ಬಹುಶಃ ಇನ್ನೆಂದೂ ಬರಲಾರದು.

ಈ ಮಾಧ್ಯಮ ಈಗ ಎದುರಿಸುತ್ತಿರುವ ಬಹು ಮುಖ್ಯ ಸಮಸ್ಯೆಯೊಂದು ಅಂತರಾಷ್ಟ್ರೀಯ ಶಕ್ತಿ ರಾಜಕಾರಣದೊಡನೆ ತಳಕು ಹಾಕಿಕೊಂಡಿದೆ. ಜಾಗತಿಕ ವಿದ್ಯಮಾನಗಳ ಬಗ್ಗೆ ಈಗೀಗ ಪತ್ರಿಕೆಗಳು ವರದಿ ಮಾಡುವುದು, ಅವುಗಳ ಕುರಿತ ಅಮೆರಿಕನ್ ಅಥವಾ ಬ್ರಿಟಿಷ್ ನಿರೂಪಣೆಗಳನ್ನು ಮಾತ್ರ. ಹಾಗಾಗಿ ನಮ್ಮ ನೆರೆಯ ರಾಷ್ಟ್ರಗಳ ಆಗು ಹೋಗುಗಳನ್ನು ಕೂಡ ನಾವು ನೋಡುವುದು ಅಮೆರಿಕದ ದೃಷ್ಟಿಕೋನದಿಂದಲೇ. ಅಮೇರಿಕ ಜಗತ್ತಿನಾದ್ಯಂತ ತನ್ನ ಸಾಮ್ರಾಜ್ಯಶಾಹಿಯ ರಕ್ಷಣೆ ಮತ್ತು ವಿಸ್ತರಣೆಗೆ ಬಳಸುತ್ತಿರುವ ಹತ್ಯಾರಗಳಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಜೊತೆಗೆ ಮಾಹಿತಿ ಸಂಗ್ರಹ ಮತ್ತು ಪ್ರಸಾರದಲ್ಲಿ ಅದು ಹೊಂದಿರುವ ಏಕಸ್ವಾಮ್ಯವೂ ಸೇರಿದೆ. ಹಾಗಾಗಿ, ನಮ್ಮ ವಿಶ್ವವಿದ್ಯಾಲಯಗಳ ಬುದ್ಧಿಜೀವಿಗಳಿಗೆ ಹೇಗೋ ಹಾಗೆಯೇ ನಮ್ಮ ಮಾಧ್ಯಮಗಳ ಮಟ್ಟಿಗೆ ಸಹ ಜಗತ್ತು ಎಂದರೆ ಅಮೇರಿಕ ಮಾತ್ರ. ಏಷ್ಯಾ, ಆಫ್ರಿಕಾ ಮತ್ತು ದಕ್ಷಿಣ ಅಮೇರಿಕದ ದೇಶಗಳ ರಾಜಕೀಯ ಬೆಳವಣಿಗೆಗಳನ್ನು ದೇಶ ಭಾಷಾ ಪತ್ರಿಕೆಗಳು ಮಾತ್ರವಲ್ಲ, ಆಂಗ್ಲಪತ್ರಿಕೆಗಳು ಸಹ ಸ್ವತಂತ್ರವಾಗಿ ವರದಿ ಮಾಡುವ ಗೋಜಿಗೆ ಹೋಗುವುದಿಲ್ಲ. ಭಾರತ ಉಪಖಂಡದ ಇತರ ರಾಷ್ಟ್ರಗಳ ಬಗ್ಗೆ ಕೂಡ ಅವುಗಳ ಧೋರಣೆ ಉದಾಸೀನದ್ದು.

ಪ್ರಭುತ್ವ ಮತ್ತು ನಾಗರಿಕ ಸಮಾಜದ ಬಹುತೇಕ ಸಂಸ್ಥೆಗಳ ಜೊತೆಗೆ ಪತ್ರಿಕೆಗಳು ಸಹ ಅಮೇರಿಕದ ಸಾಮ್ರಾಜ್ಯಶಾಹಿಯ ತಲೆ ಹಿಡುಕರಂತೆ ಈಗ ವರ್ತಿಸುತ್ತಿವೆ. ಆಂಗ್ಲ ಪತ್ರಿಕೆಗಳು ದೇಶಭಾಷಾ ಪತ್ರಿಕೆಗಳಿಗಿಂತ ಮೇಲು ನೋಟಕ್ಕೆ ಹೆಚ್ಚು ರಾಷ್ಟ್ರೀಯ ಮತ್ತು ವಿಶ್ವಾತ್ಮಕ ಎಂದು ಕಂಡರೂ ಅದು ಸೋಗಲಾಡಿತನವಷ್ಟೆ. ದೇಶ ಭಾಷಾ ಪತ್ರಿಕೆಗಳ ಪ್ರಾದೇಶಿಕತೆ ಕೂಡ ಅಷ್ಟೇ ಪ್ರಶ್ನಾರ್ಹವಾಗಿದೆ. ಅವೆರಡರ ಧೋರಣೆಗಳನ್ನು ಸ್ಥೂಲವಾಗಿ ನಿರ್ದೇಶಿಸುವ ಯಜಮಾನ ಒಬ್ಬನೇ ಆಗಿರುವುದರಿಂದ ಅವುಗಳ ಹೂರಣದಲ್ಲಿ ಕಾಣುವ ವ್ಯತ್ಯಾಸ ಕೇವಲ ತೋರಿಕೆಯದ್ದು. ಆಂಗ್ಲ ಮತ್ತು ದೇಶಭಾಷೆಯ ಪತ್ರಿಕೆಗಳೆರಡರಲ್ಲೂ ಒಂದು ಗಣನೀಯ ವಿಭಾಗ. ಈಗ ಮೋದಿಯ ಮೋಡಿಗೆ ಮಾರು ಹೋಗಿರುವುದು ಕೂಡ ಅದೇ ಕಾರಣಕ್ಕೆ. ಆ ಮೋಡಿ ಬಹು ಮಟ್ಟಿಗೆ ಅವುಗಳದ್ದೇ ಸೃಷ್ಟಿ. ಅದು ಮಾಧ್ಯಮ ಮತ್ತು ಬಂಡವಾಳಶಾಹಿಯ ಅನೈತಿಕ ಕೂಟದ ಪೋರ್ನೋಗ್ರಫಿ. ಆಳುವವರ ಯೋಜನೆಗಳಿಗೆ ಜನ ಸಮ್ಮತಿಯನ್ನು ಉತ್ಪಾದಿಸುವುದಷ್ಟೇ. ಇದುವರೆಗೆ ಮಾಧ್ಯಮಗಳ ಕೆಲಸವಾಗಿದ್ದರೆ ಈಗ ದೃಶ್ಯ ಮಾಧ್ಯಮದ ಜೊತೆ ಸ್ಪರ್ಧೆಯಲ್ಲಿ ಅವು ಜನರಲ್ಲಿ ಉದ್ರೇಕವನ್ನು ಸಹ ಉತ್ಪಾದಿಸಬೇಕಾಗಿದೆ. ಮೋದಿ ಮೇನಿಯಾ, ಈ ಉದ್ರೇಕದ ಅಭಿವ್ಯಕ್ತಿ.

*

# ತಂತ್ರಜ್ಞಾನದ ಮಾಯಾಲೋಕ: ವಿದ್ಯುನ್ಮಾನ ಮಾಧ್ಯಮ

–ಡಾ. ರಾಜೇಂದ್ರ ಚೆನ್ನಿ

ವಿದ್ಯುನ್ಮಾನ ಮಾಧ್ಯಮವೂ ಸೇರಿದಂತೆ, ಮಾಧ್ಯಮ ತಂತ್ರಜ್ಞಾನಗಳು, ಅವುಗಳ ಸಾಂಸ್ಕೃತಿಕ ಹಾಗೂ ರಾಜಕೀಯ ಸ್ವರೂಪ ಮತ್ತು ಪ್ರಭಾವಗಳ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ವಿಸ್ತಾರವಾದ ಅಧ್ಯಯನಗಳು ನಡೆದಿವೆ. ವಿಶೇಷವಾಗಿ ಸಾಂಸ್ಕೃತಿಕ ಅಧ್ಯಯನಗಳು ಒಂದು ಸ್ವತಂತ್ರ ಶಿಸ್ತಾಗಿ ವಿಕಸನಗೊಂಡ ಮೇಲಿಂದ ಈ ಚರ್ಚೆಯು ಅತ್ಯಂತ ಕುತೂಹಲಕಾರಿಯಾದ ಮತ್ತು ಅಷ್ಟೇ passionate ಆದ ರೀತಿಯಲ್ಲಿ ನಡೆಯುತ್ತಾ ಬಂದಿದೆ. ಈ ವಿದ್ಯಮಾನಕ್ಕೆ ಕಾರಣವೆಂದರೆ ಆಧುನಿಕ ಮನುಷ್ಯರು ಮಾಧ್ಯಮಗಳ ಸೃಷ್ಟಿಯೆನ್ನುವ ಪರಿಕಲ್ಪನೆ. ಮನುಷ್ಯರ ಅನುಭವಗಳು ಸ್ವಾಯತ್ತವಾಗಿರುತ್ತವೆ. ಅವನ ಭಾವನೆ, ಕಲ್ಪನೆ ಹಾಗೂ ಚಿಂತನೆಗಳು ಸ್ವತಂತ್ರವಾಗಿರುತ್ತವೆ. ಅವನು 'ಕಾಣುವ' ವಾಸ್ತವವು ಪ್ರಶ್ನಾತೀತವಾಗಿ ವಾಸ್ತವವೇ ಆಗಿರುತ್ತದೆ ಎನ್ನುವ ನಂಬಿಕೆಗಳು ಈಗ ನಿರಚನಗೊಂಡಿವೆ. ಆಧುನಿಕ ತಂತ್ರಜ್ಞಾನ ಆಧಾರಿತವಾದ ಬದುಕಿನಲ್ಲಿ ನಾವು 'ನೋಡಿ' ನೆಚ್ಚಿಕೊಳ್ಳುವ ಅನುಭವವು ಬಹುಪಾಲು ಮಾಧ್ಯಮಗಳಿಂದ ರಚಿತವಾಗಿರುವಂಥದು.



ಹೀಗೆ ರಚಿತವಾಗಿರದಂಥ ನೇರ, ಸಹಜ ಅನುಭವದ ಸಾಧ್ಯತೆಗಳು ಕಡಿಮೆ ಅಥವಾ ಇಲ್ಲವೇ ಇಲ್ಲ. ಅಷ್ಟು ಮಾತ್ರವಲ್ಲ, ಮಾಧ್ಯಮಗಳಲ್ಲಿ ಗೋಚರವಾಗುವುದು ಕೇವಲ virtual reality(ತೋರುವ ಸತ್ಯ?); ಅದನ್ನು ಮೀರಿದ ನಿಜವಾದ ವಾಸ್ತವವಿದೆ ಎನ್ನುವುದನ್ನು ಈಗ ಒಪ್ಪಲಾಗುತ್ತಿಲ್ಲ. ಈ ಚರ್ಚೆಯ ತಾತ್ವಿಕತೆಯ ನೆಲೆಗಳನ್ನು ಪರೀಕ್ಷಿಸುವುದು ಅವಶ್ಯಕವಿರಬಹುದು. ಆದರೆ




ಈ ಲೇಖನದಲ್ಲಿ ನಾನು ಅದನ್ನು ಮಾಡುವುದರ ಬದಲಾಗಿ, ಮಾಧ್ಯಮಗಳ ಬಗೆಗಿನ ಇಂಥ ಚಿಂತನೆಯ ಸಾಮಾಜಿಕ ಆಯಾಮಗಳನ್ನು ಗುರುತಿಸಲು ಪ್ರಯತ್ನಿಸುತ್ತೇನೆ.

ಈ ಚಿಂತನೆಯ ಮುಖ್ಯ ವೈಚಾರಿಕ ಆಕೃತಿಯ ಪ್ರಕಾರ ವಿದ್ಯುನ್ಮಾನ ಮಾಧ್ಯಮಗಳು ವಾಸ್ತವದ ಬಗ್ಗೆ ಒಂದು ನಿರೂಪಣೆ ಅಥವಾ ಕಥನವನ್ನು ರಚಿಸುತ್ತವೆ. ಈ ನಿರೂಪಣೆಯು ವಾಸ್ತವವನ್ನು ಬಿಂಬಿಸುವುದು ಮಾತ್ರವಲ್ಲ; ಅದನ್ನು ಸೈದ್ಧಾಂತಿಕವಾಗಿ(ideologically) ವ್ಯಾಖ್ಯಾನಿಸುತ್ತದೆ ಮತ್ತು ಈ ವ್ಯಾಖ್ಯಾನದ ಮೂಲಕ ನೋಡುವವರಲ್ಲಿ ಒಂದು ನಿರೀಕ್ಷಿತವಾದ ಅಭಿಪ್ರಾಯವನ್ನು ರೂಪಿಸುತ್ತದೆ. ಅಂದರೆ ಕೇವಲ 'ನೋಡುವಂತೆ' ಮಾತ್ರವಲ್ಲ, 'ತಿಳಿಯುವಂತೆ'ಯೂ ಪ್ರಭಾವಿಸುತ್ತವೆ. ಜೊತೆಗೆ ಈ ತಿಳುವಳಿಕೆಯಿಂದ ಪ್ರಬಲವಾದ ಭಾವನೆಯನ್ನು ಹುಟ್ಟಿಸುತ್ತದೆ. ಉದಾಹರಣೆಗೆ ಮುಂಬೈಯಲ್ಲಿ ಭಯೋತ್ಪಾದಕರು ನಡೆಸಿದ ಹಿಂಸೆಯನ್ನು ಸತತವಾಗಿ, ವೈವಿಧ್ಯಪೂರ್ಣವಾಗಿ ನಮ್ಮ ಎಲ್ಲಾ ಟಿವಿ ವಾಹಿನಿಗಳು ಬಿತ್ತರಿಸಿದವು. ಆ ಘಟನೆಗಳ ನೇರವಾದ ಅನುಭವವೇ ನಮಗೆ ಆದಂತೆ ಭಾಸವಾಗುವ ರೀತಿಯಲ್ಲಿ ತಮ್ಮ ವಿದ್ಯುನ್ಮಾನ ತಂತ್ರಜ್ಞಾನವನ್ನು ಬಳಸಿಕೊಂಡು ಈ ಮಾಧ್ಯಮಗಳು ಆ ಘಟನೆಯಲ್ಲಿ ಇಡೀ ರಾಷ್ಟ್ರವೇ ಭಾವನಾತ್ಮಕವಾಗಿ ಭಾಗಿಯಾಗುವಂತೆ ಮಾಡಿದವು. ಒಂದು ರೀತಿಯಲ್ಲಿ ನಾವು ಆ ಘಟನೆಗಳನ್ನು ಸ್ವತಃ ಬದುಕಿದಂತಾಯಿತು. ಆದರೆ ಮಾಧ್ಯಮಗಳು ಕೇವಲ ಒಂದು ವಾಸ್ತವಿಕ ವರದಿಯನ್ನು ಬಿತ್ತರಿಸುತ್ತಿರಲಿಲ್ಲ. ಒಂದು ಅತ್ಯಂತ ಪ್ರಭಾವಿಯಾದ ನಿರೂಪಣೆಯನ್ನು, ಕಥನವನ್ನು ನಮಗೆ ನೀಡುತ್ತಿದ್ದವು. ಈ ಕಥನದಲ್ಲಿ ಖಳನಾಯಕರು, ನಾಯಕರು, ಕ್ರೂರಿಗಳು, ಬಲಿಪಶುಗಳು ಇಂಥ ಎಲ್ಲಾ ಬಗೆಯ ಪಾತ್ರಗಳಿದ್ದವು. ಅವು ಸತತವಾಗಿ ನಮ್ಮಿಂದ ಕೋಪ, ದ್ವೇಷ, ಕರುಣೆ, ಸಹಾನುಭೂತಿ ಇಂಥ ದಟ್ಟವಾದ ಭಾವನಾತ್ಮಕ ಪ್ರತಿಕ್ರಿಯೆಯನ್ನು ಒತ್ತಾಯಿಸುತ್ತಿದ್ದವು ಮತ್ತು ಈ ಭಾವನೆಗಳ ಮೂಲಕ ಒಂದು ಸೈದ್ಧಾಂತಿಕ ನಿಲುವನ್ನೂ ಅವು ನಮ್ಮ ಮೇಲೆ ನಮಗೆ ಗೊತ್ತಾಗದಂತೆ ಒತ್ತಾಯಿಸುತ್ತಿದ್ದವು. "ಧಾರ್ಮಿಕ" ಭಯೋತ್ಪಾದನೆ, ಮೂಲಭೂತವಾದ, ಇವುಗಳೆರಡರ ಅಪಾಯದ ಮುಂದೆ ನಿಷ್ಕ್ರಿಯವಾಗಿರುವ ಭ್ರಷ್ಟ ಸರಕಾರಗಳು, ನಮ್ಮ ಮುಂದಿನ ಜವಾಬ್ದಾರಿ ಇವುಗಳ ಬಗ್ಗೆ ಸೈದ್ಧಾಂತಿಕ ನಿಲುವುಗಳನ್ನು ಅದು ಗಟ್ಟಿಗೊಳಿಸಿತು. ಇದರ ಪರಿಣಾಮವಾಗಿ ಇಡೀ ರಾಷ್ಟ್ರವೇ ಒಂದಾಗಿ ಶೋಕಾಚರಣೆ ಮಾಡಿತು ಮಾತ್ರವಲ್ಲ; ಸಾಮುದಾಯಿಕವಾದ ಕೆಲವು ನಿಲುವುಗಳನ್ನು ಅಭಿವ್ಯಕ್ತಿಸಿತು. ಹಾಗೇ, ಅಮೇರಿಕದಲ್ಲಿ ಭಯೋತ್ಪಾದನೆ ಮಾಡಿದ ವಿನಾಶವು ಮಾಧ್ಯಮಗಳ ಮೂಲಕ ಎಂಥಾ ಸೈದ್ಧಾಂತಿಕ ಕಥಾನಕಗಳನ್ನು ರಚಿಸಿತು ಎಂದರೆ ಸಾಮಾನ್ಯ ಅಮೇರಿಕನ್ ಪ್ರಜೆಗಳು ಇಡೀ ವಿಶ್ವವನ್ನೇ ನಾವು (US/ USA) ಮತ್ತು ಅವರು ಅರ್ಥಾತ್ ಒಳಿತು ಮತ್ತು ಕೆಡುಕು ಅರ್ಥಾತ್ ನಾಗರೀಕ ಮತ್ತು ಅನಾಗರೀಕವೆಂದು ಇಬ್ಭಾಗ ಮಾಡಿ ನೋಡುವಂತಾಯಿತು. ಅಲ್ಲಿಯ ಜನಪ್ರಿಯ ಬರಹ, ಸಿನಿಮಾ ಹಾಗೂ ಮಾಧ್ಯಮದ ಕಾರ್ಯಕ್ರಮಗಳನ್ನು ನೋಡಿದರೆ ಇಡೀ ಅಮೇರಿಕಾವೇ ಶಾಶ್ವತವಾಗಿ ಮುಸ್ಲಿಮ್ ದ್ವೇಷಿ, ಜನಾಂಗೀಯ ದ್ವೇಷಿ ರಾಷ್ಟ್ರವಾಗಿ ಬಿಟ್ಟೀತೆ ಎನ್ನುವ ಸಂಶಯ ಬರುತ್ತದೆ.

ವಿದ್ಯುನ್ಮಾನ ಮಾಧ್ಯಮಗಳಿಗೆ ಇಂಥ ಪ್ರಭಾವ ಬರಲು ಕಾರಣವೆಂದರೆ ಕಣ್ಣಿಗೆ ಕಾಣುವುದು ವಾಸ್ತವವೇ ಎನ್ನುವ ನಂಬಿಕೆ. Seeing is believing ಎನ್ನುವ ನಾಣ್ಣುಡಿಯ ರೀತಿಯ ನಂಬಿಕೆ. ಅಲ್ಲದೆ ಅತ್ಯಂತ ಆಧುನಿಕ ಮಾದರಿಯ ತಂತ್ರಜ್ಞಾನವು (ಉದಾಹರಣೆಗೆ ಅತ್ಯಾಧುನಿಕ ವಿಡಿಯೋ ಕ್ಯಾಮೆರಾಗಳು) ವಾಸ್ತವದ ಎಲ್ಲಾ ಮಗ್ಗುಲುಗಳನ್ನು ಇದ್ದ ಹಾಗೆ ತೋರಿಸುತ್ತದೆ; ಆದ್ದರಿಂದ ಅದು ಸುಳ್ಳನ್ನು ಹೇಳುವುದಿಲ್ಲ ಎನ್ನುವ ನಂಬಿಕೆ. ನಿಜವೇನೆಂದರೆ ಪ್ರತಿಯೊಂದು ಕ್ಯಾಮೆರಾ ಕಣ್ಣಿನ ಹಿಂದೆ ಅದರ ಮೂಲಕ ನೋಡುವ, ಚಿತ್ರಿಸುವ ಕಣ್ಣುಗಳಿರುತ್ತವೆ. ಹೀಗಾಗಿ ಅದರ ಮೂಲಕ ಹಿಡಿದು ನಮಗೆ ತೋರಿಸುವ ವಾಸ್ತವವು ಹಲವು ಆಯ್ಕೆಗಳ ಮೂಲಕ ರಚಿಸಲಾದ ಒಂದು ಮಗ್ಗುಲಿನ ಸತ್ಯ ಮಾತ್ರವಾಗಿರುತ್ತದೆ. (ಒಂದು ಪ್ರಸಿದ್ಧ ಉದಾಹರಣೆಯೆಂದರೆ, ಸುನಾಮಿಯು ಭಾರತದ ಕರಾವಳಿಗಳಲ್ಲಿ ಅಪಾರ ಜೀವಹಾನಿ ಇತ್ಯಾದಿ ತಂದ ಹೊತ್ತಲ್ಲಿ ಅಮೇರಿಕದ ಟಿವಿ ವಾಹಿನಿಗಳು ಅಮೇರಿಕನ್ ಪ್ರವಾಸಿಗರಿಗೆ ಇಲ್ಲಿ ಆದ ತೀರಾ ಸಾಮಾನ್ಯ ಅಡಚಣೆಗಳನ್ನು ತೋರಿಸುತ್ತಿದ್ದವು. ಇರಾಕ್‌ನಲ್ಲಿ ನಡೆದದ್ದು ಧರ್ಮಯುದ್ಧವೆನ್ನುವ ಅಗಾಧ ಪ್ರಚಾರವನ್ನು ಅಲ್ಲಿಯ ಮಾಧ್ಯಮಗಳು 'ತೋರಿಸಿದವು'. ಆದರೆ ಅಬು ಗರೀಬ್‌ನಲ್ಲಿ ಅಮೇರಿಕನ್ ಸೈನಿಕರ ಪಾಶವೀ ಕೃತ್ಯಗಳನ್ನು ತೋರಿಸಿರಲಿಲ್ಲ. ನಾನು ವಿದ್ಯುನ್ಮಾನ ಮಾಧ್ಯಮದ ದುರ್ಬಳಕೆಯ ಬಗ್ಗೆ ಅಥವಾ ಅದರ ರಾಜಕೀಯ ಬಳಕೆಯ ಬಗ್ಗೆ ಮಾತನಾಡುತ್ತಿಲ್ಲ. ದಿನನಿತ್ಯದ ವಾಸ್ತವವನ್ನು ತೋರಿಸುವುದರಲ್ಲಿಯೂ ಈ ಮಾಧ್ಯಮಗಳು ಆ ವಾಸ್ತವವನ್ನು ಸೈದ್ಧಾಂತಿಕವಾಗಿ ರಚಿಸುತ್ತವೆ ಎನ್ನುವುದು ಮುಖ್ಯವಾಗಿದೆ.

ಈ ತಂತ್ರಜ್ಞಾನಗಳು ಅತ್ಯಂತ ಅನಾಧುನಿಕವಾದ ಧಾರ್ಮಿಕ ಮೂಲಭೂತವಾದ, ಜನಾಂಗೀಯ ದ್ವೇಷ ಲೈಂಗಿಕ ಶೋಷಣೆ ಇವುಗಳಿಗೆ ಇಂದು ಬಳಕೆಯಾಗುತ್ತಿರುವುದು ಒಂದು ವಿಪರ್ಯಾಸವಾಗಿದೆ. ಈ ಮಾಧ್ಯಮಗಳ ಶಕ್ತಿಯ ಬಗ್ಗೆ ರೋಮಾಂಚನಗೊಳ್ಳುವವರು ಯೂರೋಪ್ ಮತ್ತು ಈಗ ಭಾರತದಲ್ಲಿ ಈ ತಂತ್ರಜ್ಞಾನವು ಮಕ್ಕಳನ್ನು ಬಳಸುವ ಲೈಂಗಿಕ ನೀಲಿ ಚಿತ್ರಗಳಿಗೆ ಬಳಕೆಯಾಗುತ್ತಿದೆ ಎನ್ನುವುದನ್ನು ನೆನಪಿನಲ್ಲಿಡಬೇಕು. ಶಿವಮೊಗ್ಗ ಭದ್ರಾವತಿಯಂಥ ಸಣ್ಣ ಪಟ್ಟಣಗಳಲ್ಲಿಯ ಕಾಲೇಜುಗಳಲ್ಲಿ ಹುಡುಗರು ತಮ್ಮ ಸಹಪಾಠಿ ವಿದ್ಯಾರ್ಥಿನಿಯರ ಚಿತ್ರಗಳನ್ನು ಮೊಬೈಲ್ ಕ್ಯಾಮರಾಗಳ ಮೂಲಕ ಹಿಡಿದ ಇಂಟರ್ನೆಟ್ ಮೂಲಕ ಹಂಚುತ್ತಾರೆ ಎನ್ನುವ ಸತ್ಯವನ್ನು ಎದುರಿಸಬೇಕಾಗಿದೆ.

ನನ್ನ ವಾದಕ್ಕೆ ಹಿಂತಿರುಗುವುದಾದರೆ, ಮುಂಬೈ ಘಟನೆಗಳು, ಆನಂತರ ಅಣ್ಣಾ ಹಜಾರೆ ಉಪವಾಸ, ದೆಹಲಿಯ ಅತ್ಯಾಚಾರ ಪ್ರಕರಣ ಇವೆಲ್ಲ ವಿದ್ಯಮಾನಗಳಲ್ಲಿ ವಿದ್ಯುನ್ಮಾನ ಮಾಧ್ಯಮಗಳು ಖಚಿತವಾದ, ಪ್ರಭಾವಿ ಪಾತ್ರವನ್ನು ವಹಿಸಿವೆ. ನಾವು ಕಲ್ಪಿಸಿಕೊಳ್ಳದೇ ಇದ್ದ ರೀತಿಯಲ್ಲಿ ಜನಸಮುದಾಯಗಳನ್ನು ಸಂಘಟಿಸಿ ಪ್ರತಿಭಟನೆಗೆ ಸಾರ್ವಜನಿಕವಾಗಿ ಹಾಜರಾಗುವಂತೆ ಮಾಡಿವೆ. ಮಾಧ್ಯಮಗಳ ಎದುರಿಗೆ ಜನರು ತಮ್ಮ ಆಕ್ರೋಶ, ಕೋಪ, ನೈತಿಕ ಪ್ರತಿಭಟನೆ ಇವೆಲ್ಲವನ್ನು ಅಭಿವ್ಯಕ್ತಿಸಿದ್ದಾರೆ. ಮುಖ್ಯವಾದ ಜನಾಭಿಪ್ರಾಯವೊಂದನ್ನು ರೂಪಿಸುವುದರಲ್ಲಿ ಯಶಸ್ವಿಯಾದಂತೆ ಕಂಡಿದೆ. ಆದರೆ ಈ ಮಾಧ್ಯಮಗಳ ಮೂಲ ಲಕ್ಷಣವೇ ಆದ ಕ್ಷಣಿಕತೆ, ತಾತ್ಕಾಲಿಕತೆಗಳು ಈ 'ಜನಾಂದೋಲನ'ಗಳಲ್ಲಿಯೂ ಕಂಡುಬಂದಿವೆ. ಜನರ ಭಾವನಾತ್ಮಕ ಪ್ರತಿಕ್ರಿಯೆಯು ಸಾಮಾಜಿಕ ಕ್ರಿಯೆಯಾಗಿ ಪರಿವರ್ತಿತವಾಗಲಿಲ್ಲ. ಗಟ್ಟಿಯಾದ ರಾಜಕೀಯ ಸ್ವರೂಪವನ್ನು ಪಡೆಯಲಿಲ್ಲ. ಅಲ್ಲದೇ ಇದರ ಜೊತೆಗೆ ಈ ಮಾಧ್ಯಮಗಳು ಎಲ್ಲವನ್ನೂ ರೋಚಕಗೊಳಿಸುವ, sensationalise ಮಾಡುವ ಮತ್ತು ಮಾರುಕಟ್ಟೆಗೆ ಒಗ್ಗಿಸುವ ಪ್ರವೃತ್ತಿಯನ್ನೇ ತೋರಿಸುತ್ತ ಬಂದಿವೆ. ಅವುಗಳ ಉದ್ದೇಶವೆಂದರೆ ತಮ್ಮ ಅತಿಶಯತೆಯಿಂದಾಗಿ





ನೋಡುವವರ ಸಂವೇದನೆಯನ್ನು ಅಂತಿಮವಾಗಿ ಜಡಗೊಳಿಸಿಬಿಡುವುದು. ಅಸೂಕ್ಷ್ಮವಾಗಿಸಿಬಿಡುವುದು. ಹಿಂಸೆ, ಅಪರಾಧ, ಅತ್ಯಾಚಾರ ಇವೆಲ್ಲವುಗಳನ್ನು ನೋಡಿ 'ಆನಂದಿಸುವ' ಮಟ್ಟಕ್ಕೆ ತಂದುಬಿಡುವುದು. ಇತ್ತೀಚೆಗೆ ವೈವಾಹಿಕ, ಕೌಟುಂಬಿಕ ಸಮಸ್ಯೆಗಳನ್ನು 'reality show'ಗಳ ಮೂಲಕ ಅಶ್ಲೀಲಗೊಳಿಸಲಾಗುತ್ತಿದೆ. ಅಂದರೆ ಈ ಮಾಧ್ಯಮಗಳು ಭಾವನಾತ್ಮಕ ಪ್ರತಿಕ್ರಿಯೆಯ ನೆಪದಲ್ಲಿ ಭಾವನೆಗಳನ್ನೇ ಕೊಲ್ಲುತ್ತಿವೆ. ಹೀಗಾಗಿ ನಾವು ಇತರ ಮನುಷ್ಯ ಜೀವಿಗಳ ಕಷ್ಟಗಳನ್ನು share ಮಾಡುತ್ತೇವೆ ಎನ್ನುವ ಭ್ರಮೆ ಹುಟ್ಟಿಸಿ, ಭಾವನೆಗಳನ್ನು ಚಿಲ್ಲರೆಗೊಳಿಸಿ, ಅಂತಿಮವಾಗಿ ಯಾವುದೇ ಮನುಷ್ಯ ಸಹಜ ಪ್ರತಿಕ್ರಿಯೆಯೇ ಸಾಧ್ಯವಾಗದಂತೆ ಮಾಡುತ್ತಿವೆ. ನಮ್ಮ ದೇಶದ ಸಜ್ಜನ ಪ್ರಜೆಗಳು ಟಿವಿ ಪರದೆಯ ಮೇಲೆ ಕೊಲೆ, ಅತ್ಯಾಚಾರ, ಇವುಗಳನ್ನು ನೋಡಿ ಅವುಗಳ ಬಗ್ಗೆ ಕಿರುಚಿಕೊಳ್ಳುವ ಚರ್ಚಾಪಟುಗಳ ಅಭಿಪ್ರಾಯಗಳನ್ನು ಕೇಳಿ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಈ ಮೂಲಕ ನಿರ್ವಹಿಸಿ ಪ್ರತಿರಾತ್ರಿ ನಿದ್ದೆ ಹೋಗುತ್ತಾರೆ. ಅದಕ್ಕಾಗಿ ನಮ್ಮ ಟಿವಿ ವಾಹಿನಿಗಳು 'ಕ್ರೈಮ್' ಕಾರ್ಯಕ್ರಮಗಳನ್ನು ಮಲಗುವ ಮೊದಲು ತೋರಿಸುತ್ತವೆ.

ಆದ್ದರಿಂದ ಮಾಧ್ಯಮಗಳು ಜನಾಭಿಪ್ರಾಯವನ್ನು ರೂಪಿಸುತ್ತವೆ ಎನ್ನುವ ವಾದವನ್ನು ಪರೀಕ್ಷಿಸಿ ನೋಡುವ ಅವಶ್ಯಕತೆ ಇದೆ. ಅಂದರೆ ಅವು ಪ್ರೇಕ್ಷಕರನ್ನು ನಿಷ್ಕ್ರಿಯಗೊಳಿಸಿ, ಅವರ ಭಾವನೆಗಳನ್ನು ಬಳಸಿಕೊಂಡು ತಮಗೆ ಅನುಕೂಲಕರವಾದ ಅಭಿಪ್ರಾಯಗಳನ್ನು ರೂಪಿಸುತ್ತವೆಯೋ ಅಥವಾ ಜನಸಮುದಾಯದಲ್ಲಿರುವ ಪ್ರತಿಕ್ರಿಯೆಗೆ ಒಂದು ವಿಸ್ತಾರವಾದ ರೂಪವನ್ನು ಕೊಡುತ್ತವೆಯೋ ಎನ್ನುವುದನ್ನು ಆಯಾ ಸಂದರ್ಭದಲ್ಲಿ ಪರೀಕ್ಷಿಸಿ ನೋಡಬೇಕಾಗುತ್ತದೆ. ಅಲ್ಲದೇ ಮಾಧ್ಯಮಗಳು ಬಂಡವಾಳಶಾಹಿಯ ಹಿಡಿತದಲ್ಲಿರುವುದರ ಮತ್ತು ಈಗ ಕಾರ್ಪೋರೇಟ್ ಬಂಡವಾಳಶಾಹಿಯ ಹಿಡಿತದಲ್ಲಿರುವುದರ ಪರಿಣಾಮಗಳು ಏನು ಎನ್ನುವುದನ್ನು ಸೂಕ್ಷ್ಮವಾಗಿ ನೋಡಬೇಕಾಗಿದೆ. ಇಂಥ ಅರ್ಥಪೂರ್ಣವಾದ ಅಧ್ಯಯನವನ್ನು ಜರ್ಮನಿಯ ಚಿಂತಕರಾದ Theodore Adorno ಮತ್ತು Max Horkheimer ಎಂಬ ಇಬ್ಬರು ಅಮೇರಿಕದ ಚಲನಚಿತ್ರ ಹಾಗೂ ಜನಪ್ರಿಯ ಸಂಗೀತ (pop music) ಇವುಗಳ ವಿಶ್ಲೇಷಣೆಯ ಮೂಲಕ ಮಾಡಿದರು. ಅವರು ತಲುಪಿದ ತೀರ್ಮಾನವೆಂದರೆ ಆಧುನಿಕ ಕಾಲದಲ್ಲಿ ಬಂಡವಾಳಶಾಹಿಯು Culture Indsutryಯನ್ನು ಸ್ಥಾಪಿಸಿ ಇದು ಒಳಗೊಳ್ಳುವ ಮಾಧ್ಯಮಗಳನ್ನು ಮಾರುಕಟ್ಟೆಯ ತತ್ವಗಳಿಗೆ ಅನುಗುಣವಾಗಿ ಬಳಸಿಕೊಳ್ಳುತ್ತದೆ. ಆದ್ದರಿಂದಲೇ ಅದು ಗಂಭೀರ ಕಲೆಯ ಬದಲಾಗಿ ಕ್ಷಣಿಕ ರೋಮಾಂಚನ, ಭ್ರಮಾತ್ಮಕ ಆನಂದ, ಹಗಲುಗನಸು ಇವುಗಳನ್ನು ಬಳಸುವ ಮಾರುಕಟ್ಟೆ ಸಂಸ್ಕೃತಿಯನ್ನು, ಜನಪ್ರಿಯ ಕಲೆಯನ್ನು ಸೃಷ್ಟಿಸುತ್ತದೆ. ಅಲ್ಲದೆ ಈ ಇಬ್ಬರು ವಿದ್ವಾಂಸರು ನಾಝಿ ಜರ್ಮನಿಯಲ್ಲಿ ಯಹೂದಿಗಳ ವಿರುದ್ಧ ಹಿಟ್ಲರ್‌ನ ಅನುಯಾಯಿಗಳು ಮಾಧ್ಯಮಗಳನ್ನು ಬಳಸಿಕೊಂಡಿದ್ದನ್ನು ಸ್ವತಃ ನೋಡಿದ್ದರಿಂದ ಮಾಧ್ಯಮಗಳ ಸೈದ್ಧಾಂತಿಕ ಸ್ವರೂಪ ಹಾಗೂ mass soceityಯಲ್ಲಿ ಅವು ಮಾಡಬಹುದಾದ ಮಿದುಳ ಮಾರ್ಜನದ ಬಗ್ಗೆಯೂ ಎಚ್ಚರವಾಗಿದ್ದರು. ನಂತರದ ದಶಕಗಳಲ್ಲಿ ಈ ವಿದ್ವಾಂಸರು ಜನಪ್ರಿಯ ಸಂಸ್ಕೃತಿಯ ಬಗ್ಗೆ ಏಕಪಕ್ಷೀಯವಾದ ಸಂಪೂರ್ಣ ತಿರಸ್ಕರಣದ ಮನೋಭಾವ ತಾಳುತ್ತಾರೆಂದು ಹೇಳಿದ ಇತರ ವಿದ್ವಾಂಸರು ಮಾಧ್ಯಮಗಳ ಬಗ್ಗೆ ಹೆಚ್ಚು ಉದಾರವಾದ ಧೋರಣೆ ತಾಳಿದರು. ಜನಪ್ರಿಯ ಸಂಸ್ಕೃತಿಯಲ್ಲಿ ಜನಪರವಾದದ್ದನ್ನು ಕಂಡರು. ಈಗ ಕಾರ್ಪೋರೇಟ್ ಬಂಡವಾಳಶಾಹಿಯು ಮಾಧ್ಯಮಗಳ ಒಡೆತನ ಪಡೆದುಕೊಂಡಿದೆ. ಪ್ರತಿಯೊಂದು ಟಿವಿ ವಾಹಿನಿಯೂ ಅದರ ಕೈಯಲ್ಲಿದೆ. ಹಾಗಿರುವಾಗ ಈ ಮಾಧ್ಯಮಗಳನ್ನು ಅದು ನಮ್ಮ ಅನುಭವದ ವಿಸ್ತರಣೆಗಾಗಿ, ನಾಗರಿಕ ಸಂಹಿತೆಯನ್ನು ಬಲಪಡಿಸುವುದಕ್ಕಾಗಿ ಅಥವಾ ಶೋಷಿತ ವರ್ಗಗಳ ಪರವಾಗಿ ಬಳಸುತ್ತದೆ ಎಂದು ನಿರೀಕ್ಷಿಸುವುದು ಅವಾಸ್ತವಿಕವಾಗಿದೆ. ಆದರೆ ಇವೆಲ್ಲ ಬಿಕ್ಕಟ್ಟುಗಳ ಮಧ್ಯ, ಗೊಂದಲಗಳ ಮಧ್ಯ ವಿದ್ಯುನ್ಮಾನ ಮಾಧ್ಯಮಗಳು ಜನರ ಪರವಾಗಿ ಕೆಲಸ ಮಾಡುವ ಸಾಧ್ಯತೆಗಳು ಇಲ್ಲವೆಂದಲ್ಲ. ಆದರ ಹಾಗೆ ಆಗಲೂ ಅವುಗಳ ಮೇಲೆ ಮಾರುಕಟ್ಟೆಯ ಹಿಡಿತವನ್ನು ಸಡಿಲಗೊಳಿಸಬೇಕಾಗಿದೆ. ಮತ್ತು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಮಾಧ್ಯಮಗಳಿಗೆ ಇರಬೇಕಾದ ಸಾಮಾಜಿಕ ಜವಾಬ್ದಾರಿಯನ್ನು ಒತ್ತಾಯಿಸಬೇಕಾಗಿದೆ.

*

# ಸಾಮಾಜಿಕ ಮಾಧ್ಯಮವೋ....? ಸಮೂಹ ಸನ್ನಿಯೋ...?

–ಬಿ. ರಾಜೇಶ್



ಹದಿನೈದು ವರುಷಗಳ ಹಿಂದೆ ನಾನು ಬೆಳಗೆ ನೀರು ಹಾಯಿಸಲೆಂದು ಹೊಲಕ್ಕೆ ಹೋದಾಗ ರಾತ್ರಿಯಿಡಿ ನೀರು ಹಾಯಿಸಿ ಹಾಗೆ ತೆವರಿನ ಮೇಲೆ ಮಲಗಿ ನಕ್ಷತ್ರಗಳನ್ನು ಎಣಿಸುತ್ತಾ ನನ್ನದೇ ಆದ ಕಲ್ಪನಾ ಲೋಕದಲ್ಲಿ ವಿಹರಿಸುತ್ತಾ ಎಲ್ಲೊ ದೂರದಿಂದ ಕೇಳಿ ಬರುತ್ತಿದ್ದ ಸಿನೆಮಾ ಹಾಡುಗಳನ್ನು ಆಲಿಸುತ್ತ ಮಲಗಿರುತಿದ್ದೆ. ನನಗೆ ತಿಳಿಯದ ಹಾಗೆ ನಿದ್ದೆ ಬಂದು ಮತ್ತೆ ಯಾವಾಗಲೋ ಎಚ್ಚರವಾಗುತ್ತಿತ್ತು. ಅದೊಂದು ಏಕಾಂತದ ಅನುಭವ. ಇಂದು ಒಂದಿಲ್ಲೊಂದು ಕಾರಣಕ್ಕೆ ಆ ಏಕಾಂತ ಇಲ್ಲವಾಗಿದೆ. ಮುಖ್ಯವಾಗಿ ಇಂದು ನಾವು ಏಕಾಂತದಲ್ಲಿರಲೂ ಈ ಸಾಮಾಜಿಕ ಮಾಧ್ಯಮಗಳು ಬಿಡುತ್ತಿಲ್ಲ.



ಆ ಕಾಲದಲ್ಲಿ ಮದುವೆಗೆ ಹೆಣ್ಣು ಅಥವಾ ಗಂಡು ಗೊತ್ತು ಮಾಡುವ ಸಂದರ್ಭದಲ್ಲಿ ಅವರ ಗುಣಗಳ ಬಗ್ಗೆ ಅರಿಯಲು ಅವರ ಸಂಬಂಧಿಗಳ ಅಥವಾ ಸ್ನೇಹಿತರ ಬಳಿ ವಿಚಾರಿಸಿ, ಸಾಧ್ಯವಾದರೆ ಅದೇ ಊರಿನ ಇತರರನ್ನು ಕೇಳಿ ತಿಳಿದು ಕೊಳ್ಳುವುದು ಸಹಜ ಕ್ರಮವಾಗಿತ್ತು. ಸುದ್ದಿಗಳಿಗಾಗಿ ದಿನಪತ್ರಿಕೆಗಳ ಮೊರೆ ಹೋಗಬೇಕಾಗಿತ್ತು. ಅಷ್ಟೆ ಅಲ್ಲ, ಯಾವುದಾದರು ಖಾಸಗಿ ಕಂಪನಿಯ ಕೆಲಸ ಸಿಗಬೇಕಾದರೂ ಯಾರದ್ದಾದರೂ ಪರಿಚಯ ಸಂಪರ್ಕವಿರಬೇಕಿತ್ತು. ಆದರೆ ಇಂದಿನ ಯುವಜನಾಂಗ ಯಾವುದೇ ಜನಸಂಪರ್ಕವಿಲ್ಲದೇ 'ಒಂಟಿ'ಯಾಗಿ ತಮಗೆ ತಾವೇ ಬೇಕಾದುದನ್ನು ಪಡೆದುಕೊಳ್ಳಲು ಸಾಮಾಜಿಕ ತಾಣದಿಂದ

ಸಾಧ್ಯ ಮಾಡಿಕೊಳ್ಳುತ್ತಿದ್ದಾರೆ. ಎಷ್ಟರ ಮಟ್ಟಿಗೆ ಈ ಸಾಮಾಜಿಕ ಮಾಧ್ಯಮಗಳು ಜನರನ್ನು ತನ್ನತ್ತ ಸೆಳೆದುಕೊಂಡಿದೆ ಎಂದರೆ ಯುವಜನಾಂಗ ತಮ್ಮ ತಮ್ಮ ಸಂಗಾತಿಗಳ ಬಗ್ಗೆ ತಿಳಿದುಕೊಳ್ಳಲು ಫೇಸ್‌ಬುಕ್ ಮೊರೆ ಹೊಗುತ್ತಿದ್ದಾರೆ. ಫೇಕ್ ಅಕೌಂಟ್‌ಗಳ ಮೂಲಕ ತಮ್ಮ ಸಂಗಾತಿಯ ಚಾರಿತ್ರ್ಯವನ್ನು ಪರೀಕ್ಷಿಸುತ್ತಾರೆ. ಅಷ್ಟೇ ಅಲ್ಲ ಇಂದಿನ ಖಾಸಗಿ ಕಂಪನಿಗಳು ಕೂಡ ತಮ್ಮ ಸಿಬ್ಬಂದಿವರ್ಗದವರ ಚಲನವಲನಗಳನ್ನು ಆ ವ್ಯಕ್ತಿಯ ಫೇಸ್‌ಬುಕ್ ಅಕೌಂಟ್‌ಗಳ ಸಹಾಯದಿಂದ ಗಮನಿಸುತ್ತಾರೆ ಅಷ್ಟೆ ಅಲ್ಲ ಹೊಸದಾಗಿ ಕೆಲಸಕ್ಕೆ ಸೇರಬಯಸುವ ಅಭ್ಯರ್ಥಿಗಳ ವಿವರಗಳನ್ನು ಕೆದಕಿ ಅವರ ಗುಣಗಳನ್ನು ಅಳೆಯುತ್ತಿದ್ದಾರೆ.

ಕೇವಲ ಗೆಳೆಯರೊಂದಿಗಿನ ಫೋಟೊ ಹಾಗೂ ಇತರ ಮಾಹಿತಿಯನ್ನು ಹಂಚಿಕೊಳ್ಳಲು ಹುಟ್ಟಿಕೊಂಡ ಇಂತಹ ತಾಣಗಳೇ ಕ್ರಮೇಣ ಸಾಮಾಜಿಕ ತಾಣಗಳಾಗಿ, ತದನಂತರ ಒಂದು ಉದ್ಯಮವಾಗಿ ರೂಪಾಂತರಗೊಂಡು ಇನ್ನಿತರ ಸಾಂಪ್ರದಾಯಿಕ ಮಾಧ್ಯಮಗಳಾದ ಪತ್ರಿಕೋದ್ಯಮ ಹಾಗು ಟೆಲಿವಿಷನ್ ಮಾಧ್ಯಮಗಳನ್ನು ಮೀರಿ ನಿಂತಿದೆ. ಕ್ಷಣ ಮಾತ್ರದಲ್ಲಿ ಕೋಟ್ಯಾಂತರ ಜನರನ್ನು ಮುಟ್ಟಲು ಸಾಧ್ಯವಿರುವ ಈ ಮಾಧ್ಯಮ ಕೇವಲ ನಗರಗಳಲ್ಲಷ್ಟೆ ಅಲ್ಲ, ಹಳ್ಳಿಗಳಲ್ಲಿಯೂ ತನ್ನ ಬೇರನ್ನು ಭದ್ರಪಡಿಸಿಕೊಳ್ಳುತ್ತಿದೆ. ಈ ತಾಣಗಳಲ್ಲಿ ತಮಗೆ ಅನಿಸಿದ ಅಭಿಪ್ರಾಯವನ್ನು ಹಾಗೂ ತಮಗೆ ಇಷ್ಟವಾದ ವಿಷಯವನ್ನು ಯಾವುದೇ ಭಿಡೆಯಿಲ್ಲದೆ ಹಂಚಿಕೊಳ್ಳುವ ಯುವಜನತೆ ಅದನ್ನು ತಮ್ಮ ಹಕ್ಕಿನ ವಿಚಾರವೆಂಬಂತೆ ಸಮರ್ಥಿಸುತ್ತಾರೆ. ಹೀಗೆ ಪ್ರತಿಯೊಬ್ಬರ ಅಭಿಪ್ರಾಯಗಳಿಗೂ ತಿಕ್ಕಲುತನಗಳಿಗೂ ಅವಕಾಶ ಕಲ್ಪಿಸಿಕೊಟ್ಟು ಪ್ರತಿಯೊಬ್ಬರ ಮನ ಗೆಲ್ಲುತ್ತಾ ತಾಣಗಳು ತಮ್ಮ ಉಳಿವನ್ನು ಭದ್ರಪಡಿಸಿಕೊಳ್ಳುತ್ತಿವೆ. ಸಾಮಾಜಿಕ ತಾಣಗಳಲ್ಲಿ ತಮ್ಮ ಇರುವಿಕೆ ಇಂದಿನ ಯುವಜನಕ್ಕೆ ಆಧುನಿಕತೆಯ/ಪ್ರತಿಷ್ಠೆಯ ಪ್ರಶ್ನೆಯೂ ಕೂಡ ಆಗಿಬಿಟ್ಟಿದೆ.

ಈ ಎಲ್ಲ ಸಾಮಾಜಿಕ ಮಾಧ್ಯಮಗಳ ಸಂಪರ್ಕ ಎಲ್ಲಾ ರೀತಿಯ ಮೊಬೈಲ್‌ಗಳಿಗು ಲಭ್ಯವಿದ್ದು, ಅತ್ಯಂತ ವೇಗವಾಗಿ ಯುವಕರನ್ನು ವಶಮಾಡಿಕೊಳ್ಳುತ್ತಿದೆ. ಅಷ್ಟೆ ಏಕೆ, ಇಂದು ಕೇವಲ ೪೦೦೦ ರೂ.ಗೆ ನಿಮಗೆ ಒಂದು ಅಂಡ್ರಾಯ್ಡ್ ಮೊಬೈಲ್ ಸಿಗಲಿದೆ. ಇತ್ತೀಚೆಗೆ ಬಂದ ವರದಿಗಳ ಪ್ರಕಾರ ಯುವಜನತೆ ಸಾಮಾಜಿಕ ಮಾಧ್ಯಮಗಳನ್ನು ಬಳಸಲೆಂದೇ *ಅಂಡ್ರಾಯ್ಡ್* ಮೊಬೈಲ್ ಹಾಗೂ ಟ್ಯಾಬ್ಲೆಟ್‌ಗಳನ್ನು ಖರೀದಿಸುತ್ತಿದ್ದಾರಂತೆ. ಇಂದು ಎಲ್ಲ ಖಾಸಗಿ ಕಂಪನಿಗಳು ಹಾಗೂ ಸರಕಾರಿ ಸಂಸ್ಥೆಗಳೂ ಕೂಡ ಈ ಎಲ್ಲ ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮ ಅಕೌಂಟ್ ಇಟ್ಟುಕೊಂಡು ಆ ಮೂಲಕವೂ ಕೂಡ ಯುವಜನರನ್ನು ತಲುಪಲು ಪ್ರಯತ್ನಿಸುತ್ತಿವೆ. ಒಟ್ಟಿನಲ್ಲಿ ಹೇಳಬೇಕೆಂದರೆ ಈ ಮಾಧ್ಯಮಗಳು ಮುಟ್ಟದ ಜಾಗ ಮತ್ತು ವಿಷಯಗಳಿಲ್ಲ.

ಆರಂಭದಲ್ಲಿ ಕೆಲವೇ ಕೆಲವು ಸಾಫ್ಟ್‌ವೇರ್ ಉದ್ಯಮದ ಮಂದಿ ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮ ಅಕೌಂಟ್‌ಗಳನ್ನು ಹೊಂದಿದ್ದರು. ಯಾಕೆಂದರೆ ಎಲ್ಲರಿಗೂ ಅಂತರ್ಜಾಲದ ಸೌಲಭ್ಯವಿರಲಿಲ್ಲ. ಆದರೆ ಇಂದಿನ ೩ಜಿ ಮತ್ತು ೪ಜಿ ತಂತ್ರಜ್ಞಾನ ಮತ್ತು ಸ್ಮಾರ್ಟ್ ಫೋನ್ ಕ್ರಾಂತಿ ಎಲ್ಲಾ ವಿಭಾಗದ ಜನರನ್ನು ಒಳಗೊಳ್ಳುವಂತೆ ಮಾಡಿದೆ ಹಾಗೂ ಅದರ ಬಳಕೆಯನ್ನು ಸರಳವನ್ನಾಗಿಸಿದೆ. ವಿಧ್ಯಾರ್ಥಿ ಸಮೂಹವಂತೂ ಈ ಮಾಧ್ಯಮಗಳತ್ತ ಸಹಜವಾಗಿಯೆ ಅತಿ ಹೆಚ್ಚು ಆಕರ್ಷಿತರಾಗುತ್ತಿದೆ. ಈ ತಾಣಗಳಲ್ಲಿ ಅಕೌಂಟ್ ಪಡೆಯುವುದು ಹಾಗೂ ಕ್ರಿಯಾಶೀಲವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಯಾರೂ ಯಾವುದೇ ಶುಲ್ಕ ನೀಡಬೇಕಾಗಿಲ್ಲ ಹಾಗೂ ಸೇರಲು ಯಾವುದೆ ಜಾತಿ, ಧರ್ಮ ಅಥವಾ ಆರ್ಥಿಕ ಮಾನದಂಡಗಳ ತಾರತಮ್ಯವಿಲ್ಲ. ಒಂದು ಇ ಮೇಲ್ ಅಕೌಂಟ್ ಇದ್ದರೆ ಅಷ್ಟೆ ಸಾಕು, ಓದು ಬರಹ ತಿಳಿಯದವರು ಕೂಡ ಇದನ್ನು ಬಳಸಬಹುದಾಗಿದೆ. ಇದು ಹೊಸ ಬಳಕೆದಾರ ಸಂಸ್ಕೃತಿಯ ಲಕ್ಷಣ.

ಈ ತಾಣಗಳಲ್ಲಿ ಗ್ರಾಹಕರು ಹೇಗೆ ವರ್ತಿಸುತ್ತಾರೆ ಹಾಗು ಏನನ್ನು ಹರಿದುಬಿಡುತ್ತಾರೆ ಎನ್ನುವುದರ ಗಣನೆ ಇಲ್ಲಿಲ್ಲ. ಬದಲಿಗೆ, ಎಷ್ಟು ಜನ ಎಷ್ಟು ಉದ್ದೇಶಗಳಿಗಾಗಿ ಬಳಸುತ್ತಾರೆ ಅನ್ನುವುದು ಮುಖ್ಯ. ಯಾಕೆಂದರೆ ಅದನ್ನ ಎಷ್ಟು ಹೆಚ್ಚು ಜನ ಹೆಚ್ಚೆಚ್ಚು ಉದ್ದೇಶಗಳಿಗಾಗಿ




ಬಳಸುತ್ತಾರೋ ಅಷ್ಟು ಹೆಚ್ಚು ಸಂಪಾದನೆ ಈ ಸಾಮಾಜಿಕ ತಾಣಗಳ ಮಾಲೀಕರಿಗೆ ಸಲ್ಲುತ್ತದೆ. ಇದನ್ನರಿತೇ ಇಂದು ಎಲ್ಲಾ ಜಾಹಿರಾತುದಾರರು ತಮ್ಮ ಕಂಪನಿಯ ಹಾಗೂ ವಸ್ತುಗಳ ಜಾಹಿರಾತುಗಳನ್ನು ಈ ಸಾಮಾಜಿಕ ತಾಣಗಳಲ್ಲಿ ಹರಿದುಬಿಡುತ್ತಿದ್ದಾರೆ. ವೃತ್ತ ಪತ್ರಿಕೆಗಳಲ್ಲಿ ಕಾಣಸಿಗದ ಎಷ್ಟೋ ಬಳಕೆಯ ವಸ್ತುಗಳ ಜಾಹಿರಾತುಗಳನ್ನು ಇಂದು ಯುವಜನತೆ ತಮ್ಮ ಮೊಬೈಲ್‌ಗಳಲ್ಲಿ ಗಮನಿಸಿ ಅವನ್ನು ಖರೀದಿಸುತ್ತಿದ್ದಾರೆ. ಅಷ್ಟೆ ಅಲ್ಲ ಕಳೆದ ವರ್ಷದ ಫೇಸ್‌ಬುಕ್ ಕಂಪನಿ ಜಾಹಿರಾತಿನಿಂದ ಬಂದ ಆದಾಯ ಅಮೇರಿಕಾದ ಎಲ್ಲ ಮುದ್ರಣ ಮಾಧ್ಯಮದ ಜಾಹೀರಾತು ಆದಾಯಕ್ಕಿಂತ ಹೆಚ್ಚಾಗಿತ್ತು. ಇಂದು ಸಾಮಾಜಿಕ ಮಾಧ್ಯಮದ ಮೂಲಕ ತಯಾರಕರು ಹಾಗು ಜಾಹಿರಾತಿನ ಮೂಲಕ ಸಾಮಾಜಿಕ ತಾಣಗಳು ಸಾವಿರಾರು ಕೋಟಿ ಹಣ ಗಳಿಸುತ್ತಿದ್ದಾರೆ. ಇಂದು ಸಿನಿಮಾ ಪ್ರಚಾರಕ್ಕೂ ಸಮೂಹ ಮಾಧ್ಯಮಮಗಳಿಗೆ ಮೊದಲ ಪ್ರಾಶಸ್ತ್ಯ ನೀಡಲಾಗುತ್ತಿದೆ. ಇಂದು ಬಹುತೇಕ ಎಲ್ಲ ಭಾಷೆಗಳ ಸಿನೆಮಾಗಳ ಟ್ರೈಲರ್‌ಗಳನ್ನು ಮೊದಲು ಯೂ ಟ್ಯೂಬ್‌ಗಳ ಮೂಲಕ ಬಿಡುಗಡೆ ಮಾಡಲಾಗುತ್ತಿದೆ. ನಂತರ ಅದು ಟಿವಿ ಚಾನಲ್‌ಗಳಲ್ಲಿ ಪ್ರಸಾರವಾಗುತ್ತದೆ. ಹೀಗೆ ಈ ಎಲ್ಲಾ ತಾಣಗಳಲ್ಲಿಯೂ ಜಾಹಿರಾತಿನ ಮೇಲೆ ಮಾತ್ರ ತಮ್ಮ ಹಿಡಿತ ಸಾಧಿಸಿಕೊಂಡು ತಮ್ಮ ಲಾಭವನ್ನು ವೃದ್ಧಿ ಮಾಡಿಕೊಳ್ಳುವ ಕಂಪನಿಗಳು, ಅದರಲ್ಲಿ ವ್ಯಕ್ತವಾಗುತ್ತಿರುವ ಅಭಿಪ್ರಾಯಗಳು/ಮಾಹಿತಿಗಳು ಹಾಗು ಅದರಿಂದ ಉಂಟಾಗುತ್ತಿರುವ ಅಪಾಯಗಳ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಿಲ್ಲ.

ಇದು ಯುವಜನರನ್ನು ಸೆಳೆದು ಉಚಿತವಾಗಿ ಪ್ರಚಾರಕ್ಕೆ ಬಳಸಿಕೊಳ್ಳುವ ಏಕೈಕ ಮಾಧ್ಯಮವಾಗಿದೆ. ಇಲ್ಲಿ ಇತರ ಖ್ಯಾತ ಪತ್ರಿಕೆಗಳ ಹಾಗು ಟಿ.ವಿ ಚಾನೆಲ್‌ಗಳ ಸುದ್ದಿಗಳ ಜೊತೆಗೆ ಸುಳ್ಳು ಸುದ್ದಿಗಳು ಯಥೇಚ್ಚವಾಗಿ ಹರಿದಾಡುತ್ತವೆ. ಏಕೆಂದರೆ ಇಲ್ಲಿ ಯಾವುದೇ ರೀತಿಯ ಸೆನ್ಸಾರ್‌ಶಿಪ್ ಇರೋದಿಲ್ಲ. ಪತ್ರಿಕೆಗಳು ಹಾಗೂ ಟಿ.ವಿ ಚಾನೆಲ್‌ಗಳಿಗಾದರೂ ತಾವು ಸುದ್ದಿ ಎಂದು ಪ್ರಸಾರ ಮಾಡುವ ಹಾಗೂ ಅದರ ಜವಾಬ್ದಾರಿಯನ್ನು ಒಪ್ಪಿಕೊಳ್ಳಲು ಒಬ್ಬ ಸಂಪಾದಕನಿರುತ್ತಾನೆ. ಆದರೆ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುವ ಎಷ್ಟೊ ಸುದ್ದಿಗಳಿಗೆ ಅಪ್ಪ ಅಮ್ಮ ಇರೋದಿಲ್ಲ. ಅದು ವೈರಸ್‌ನ ರೀತಿ ಒಬ್ಬರಿಂದ ಒಬ್ಬರಿಗೆ ತಡೆಯಿಲ್ಲದೆ ಹರಿಯುತ್ತದೆ. ಇದರಿಂದ ಮನುಷ್ಯರ ನಡುವೆ ತಪ್ಪು ತಿಳುವಳಿಕೆ ಮಾತ್ರವಲ್ಲ, ಸಮುದಾಯಗಳ ನಡುವೆ ದ್ವೇಷ ಭಾವನೆಯನ್ನು ಬಹಳ ಬೇಗ ಹರಡಬಹುದಾಗಿದೆ. ಇತ್ತೀಚೆಗೆ ಉತ್ತರಪ್ರದೇಶದಲ್ಲಿ ನಡೆದ ಕೋಮುಗಲಭೆಯೇ ಇದಕ್ಕೆ ಸಾಕ್ಷಿ. ಇದಕ್ಕೆ ಯಾವುದೇ ತತ್ವ ಸಿದ್ಧಾಂತಗಳಿರುವುದಿಲ್ಲ. ಈ ತಾಣಗಳಿಗೆ ಯಾವುದೇ ಸಾಮಾಜಿಕ ಬದ್ಧತೆ ಇರುವುದಿಲ್ಲ. ದೇಶ, ಸಮಾಜ ಮತ್ತು ಇತರ ಮನುಷ್ಯರ ಬಗೆಗಿನ ಪ್ರೀತಿಯಂತೂ ಖಂಡಿತ ಇರುವುದಿಲ್ಲ. ಯಾಕೆಂದರೆ ಇವರ ವ್ಯಾಪ್ತಿ ಇಡೀ ಜಗತ್ತಿನ ಜನರನ್ನೆಲ್ಲ ಒಳಗೊಂಡು ತನ್ನ ಲಾಭವನ್ನು ಹೆಚ್ಚು ಮಾಡಿಕೊಳ್ಳುವುದೇ ಆಗಿದೆ. ಇದೊಂದು ಮೂಲತಃ ಸರಕು ಸಂಸ್ಕೃತಿಯನ್ನು ಬೆಂಬಲಿಸುವ ಹಾಗು ಮಾರುಕಟ್ಟೆ ಉದ್ದೇಶವುಳ್ಳ ಮಾಧ್ಯಮ.

ಇಂದಿನ ಯುವಜನರು ಅತಿ ಹೆಚ್ಚು ಸಮಯ ಫೇಸ್‌ಬುಕ್‌ನಲ್ಲಿ ಕಳೆಯುತ್ತಾರೆ. ಅದು ಅವರ ಮನಸ್ಸಲ್ಲಿ ಉಂಟು ಮಾಡುವ ತಲ್ಲಣ, ಭ್ರಮೆಗಳು ಅವರನ್ನು ಮಾನಸಿಕವಾಗಿ ದುರ್ಬಲರನ್ನಾಗಿ ಮಾಡುತ್ತಿದೆ.



ಅವರನ್ನು ಬಳಕೆದಾರ ಸಂಸ್ಕೃತಿಯತ್ತ ಒಯ್ಯುತ್ತ ಅವರ ಸರಳತನ ಹಾಗೂ ಮುಗ್ಧತೆಯನ್ನು ಕಸಿದುಕೊಂಡು ಅವರ ಮನಸ್ಸನ್ನು ಮಿತಿಯಿಲ್ಲದ ಆಸೆ ಆಕಾಂಕ್ಷೆಗಳ ಗೂಡನ್ನಾಗಿ ಪರಿವರ್ತಿಸುತ್ತಿದೆ. ಇಂದಿನ ಯುವಜನತೆ ಪತ್ರಿಕೆಗಳನ್ನು ಓದುತ್ತಿಲ್ಲ, ಆಟವಾಡುತ್ತಿಲ್ಲ, ಪಕ್ಕದ ಮನೆಯವರಿರಲಿ ತಮ್ಮ ಮನೆಯವರೊಂದಿಗೂ ಕೂಡ ಹೆಚ್ಚು ಮಾತನಾಡುವುದಿಲ್ಲ. ಇನ್ನು ಆಕಾಶದಲ್ಲಿ ಕಾಣುವ ಸೂರ್ಯ, ಚಂದ್ರ ನಕ್ಷತ್ರಗಳನ್ನು ನೋಡುವುದೇ ಇಲ್ಲ. ಸಿಕ್ಕ ಕೆಲ ಸಮಯದಲ್ಲೂ ಮೊಬೈಲ್‌ನೊಂದಿಗೆ ಕಳೆಯುತ್ತ ಸಮೂಹ ಮಾಧ್ಯಮದ ಕಾಡಿನಲ್ಲಿ ಕಳೆದುಹೋಗುತ್ತಿದ್ದಾರೆ.

ಫೇಸ್‌ಬುಕ್‌ನಲ್ಲಿ ಕೆಲವರಂತೂ ತಮ್ಮ ಸುಪ್ತ ಆಲೋಚನೆಗಳನ್ನು ಹರಿದುಬಿಟ್ಟು ಎಲ್ಲರಿಂದ ಬೆಂಬಲ ಮತ್ತು ಮೆಚ್ಚುಗೆ ಗಿಟ್ಟಿಸಿ ಬೀಗುತ್ತಾ ವಾಚಾಳಿತನ ತೋರಿಸಿ, ಎದುರಿಗೆ ಸಿಕ್ಕಾಗ ಮಾತ್ರ ಮಂಕಾಗಿ, ಮಾತನಾಡದೆ ದಂಗಾಗಿ ನಿಲ್ಲುವುದನ್ನೂ ನೋಡಬಹುದು. ಇಲ್ಲಿ ಹೆಚ್ಚಾಗಿ ಆತ್ಮರತಿ ಮನಸ್ಥಿತಿಯುಳ್ಳ ಜನಗಳಿರುವ ಹಾಗೆ, ಕೆಲವರಿಗೆ ಒಂಟಿತನ ದೂರ ಮಾಡುವ, ತಮ್ಮ ಬಗ್ಗೆ ಇನ್ನೊಬ್ಬರಿಂದ ಸಹಾನುಭೂತಿ ಗಿಟ್ಟಿಸಿಕೊಳ್ಳುವ, ತಮ್ಮ ತಮ್ಮ ಅಜೆಂಡಾಗಳನ್ನು ಪ್ರತಿಪಾದಿಸಲು ಮತ್ತು ಜನರನ್ನು ಮೋಸಗೊಳಿಸಲು ತಮ್ಮ ತರಹೇವಾರಿ ವೇಷಭೂಷಣ ಹಾಗೂ ಮಾತುಗಾರಿಕೆಗಳನ್ನೆಲ್ಲ ಬಳಸುವ... ಹೀಗೆ ಎಲ್ಲಾ ತರದ ಜನರಿದ್ದಾರೆ.

ಇಂದು ಬುಹುತೇಕ ಎಲ್ಲರ ಮನೆಯಲ್ಲಿ ಮೊಬೈಲ್‌ಗಳಿವೆ ಅದರಲ್ಲಿ ಮಕ್ಕಳು ಮಾತ್ರ ಫೇಸ್‌ಬುಕ್ ಬಳಸುತಿದ್ದರೆ ಅವರ ಪೋಷಕರು ಬರೀ ಕರೆಗಳಿಗಾಗಿ ಬಳಸುತಿರುತ್ತಾರೆ. ಅವರ ಮಕ್ಕಳು ಈ ಸಾಮಾಜಿಕ ಮಾಧ್ಯಮಗಳಲ್ಲಿ ಏನು ಮಾಡುತ್ತಿರುತ್ತಾರೆ ಎಂದು ಅವರ ಪೋಷಕರಿಗೆ ತಿಳಿಯುವುದಿಲ್ಲ. ಮುಂದೊಂದು ದಿನ ತಿಳಿಯುವ ಹೊತ್ತಿಗೆ ಮಕ್ಕಳು ಅದರ ಚಟ ಹತ್ತಿಸಿಕೊಂಡಿರುತ್ತಾರೆ. ನನಗೆ ಒಮ್ಮೊಮ್ಮೆ ಅನಿಸೋದು ಮುಂದೊಂದು ದಿನ ಪ್ರತಿಯೊಬ್ಬನೂ ಫೇಸ್‌ಬುಕ್ ಬಳಸಲು ವಾರ್ಷಿಕವಾಗಿ ಒಂದು ಡಾಲರ್ ನೀಡಬೇಕೆಂದು ಕಡ್ಡಾಯ ಮಾಡಿದರೆ ಕಣ್ಣು ಮುಚ್ಚಿ ನೀಡಲು ಜನ ತಯಾರಿದ್ದಾರೆ. ಏನಾದರೂ ಫೇಸ್‌ಬುಕ್ ತಾಂತ್ರಿಕ ಕಾರಣಗಳಿಂದ ಒಂದೆರಡು ದಿನ ನಿಂತು ಹೋದರೆ ಸಾವಿರಾರು ಮಂದಿ ಆತ್ಮಹತ್ಯೆ ಮಾಡಿಕೊಂಡಾರು.

ಹಾಗಾದರೆ ಸಾಮಾಜಿಕ ಮಾಧ್ಯಮಗಳಿಂದ ಕೇವಲ ಕೆಡುಕು ಮಾತ್ರ ಆಗುತ್ತಿದೆಯಾ? ಅದರಿಂದ ಒಳ್ಳೆಯದಾಗುತ್ತಿಲ್ಲವಾ? ಅನ್ನುವ ಪ್ರಶ್ನೆಗೆ "ಅತಿಯಾದರೆ ಅಮೃತವೂ ವಿಷವಾಗುತ್ತೆ" ಎನ್ನುವ ಹಿರಿಯರ ಮಾತಿನಲ್ಲೆ ಉತ್ತರವಿದೆ. ನಮ್ಮ ಕುತೂಹಲ ಕರಗಿಸುವ, ಕನಸನ್ನು ಕಸಿವ ಹಕ್ಕು ಈ ಸಾಮಾಜಿಕ ಮಾಧ್ಯಮಗಳಿಗೆ ಇಲ್ಲ. ಆದರೂ ಅದು ಅವುಗಳ ವಶವಾಗಿಬಿಟ್ಟಿದೆ. ಇಂದು ಈ ತಾಣಗಳಲ್ಲಿರುವ ನಮ್ಮ ಫೋಟೊ ಮತ್ತು ಖಾಸಗಿ ಮಾಹಿತಿಯನ್ನು ಯಾರು ಬೇಕಾದರೂ ನೋಡಬಹುದಾಗಿದೆ ಮತ್ತು ಪಡೆಯಬಹುದಾಗಿದೆ. ಇವುಗಳ ಮೇಲಿನ ನಿರ್ಬಂಧ ಇನ್ನೂ ಕೂಡ ಸಾಧ್ಯವಾಗಿಲ್ಲ. ಆದುದರಿಂದ ನಮ್ಮ ಖಾಸಗಿ ಮಾಹಿತಿಯನ್ನು ಹಂಚಿಕೊಳ್ಳದೆ ಕೇವಲ ಸಾರ್ವತ್ರಿಕ ಮಾಹಿತಿಗೆ ಬಳಸುವಂತೆ ಈ ಮಾಧ್ಯಮಗಳ ಮೇಲೆ ನಿಯಂತ್ರಣ ಅಗತ್ಯವಾಗಿದೆ. ಆದರೆ ಇದನ್ನು ಮಾಡುವವರು ಯಾರು? ಅದೇನೇ ಇರಲಿ, ಅಲ್ಲಿರುವುದು ಕೇವಲ ಮಾಹಿತಿಯ ತಿಪ್ಪೆಗುಂಡಿಯೇ ಹೊರತು ಜ್ಞಾನವಲ್ಲ. ಇವು ನಮ್ಮ ಅವಶ್ಯಕತೆಯೂ ಅಲ್ಲ ಅನಿವಾರ್ಯತೆಯೂ ಅಲ್ಲ ಎಂಬುದು ನಮಗೆ ತಿಳಿದಿದ್ದರೆ ಸಾಕು. *

---

## ಸೆಕ್ಯುಲರಿಸಂ ಎಂದರೇನು? (೯ನೇ ಪುಟದಿಂದ)

ಜನರಿಗೆ ಇನ್ನೊಬ್ಬರ ಧರ್ಮ-ನಂಬಿಕೆಗಳನ್ನು ಗೌರವಿಸುವುದನ್ನು- ಕೂಡಿಬಾಳುವ ಜೀವನಕ್ರಮವನ್ನು ಕಲಿಸುವ ಅಗತ್ಯವಿಲ್ಲ. ಬಹಳ 'ಸಾಮಾನ್ಯ'ರಾಗಿ ಬದುಕುತ್ತಿರುವ ಈ ಜನಗಳ ನಂಬಿಕೆ-ಜೀವನ ಶೈಲಿಗಳು ಈ ಸಮಾಜವನ್ನು ಇಷ್ಟು ಕಾಲ ಹೇಗೆ ಆರೋಗ್ಯಕರವಾಗಿ ಇಟ್ಟಿದ್ದವು ಎಂಬುದನ್ನು ಅರಿಯುವುದೇ ಈ ಹೊತ್ತಿನ ಜರೂರಾಗಿದೆ.

ನಾವು ಒಪ್ಪಲಿ ಬಿಡಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನ ತಮ್ಮ ಮೌಲ್ಯಗಳನ್ನು ರಾಜಕೀಯದೊಂದಿಗೆ ಬೆರೆಸಿಬಿಡುತ್ತಾರೆ. ಇಂಗ್ಲಿಷ್‌ನ ಗಂಧಗಾಳಿ ತಿಳಿಯದ ಜನರ ಮೇಲೆ ಅವರಿಗೆ ಗೊತ್ತಾಗದ ಸೈದ್ಧಾಂತಿಕ ಪರಿಕಲ್ಪನೆಗಳನ್ನು ಹೇರುವುದು ಎಷ್ಟು ಸರಿ? 'ಧರ್ಮ ನಿರಪೇಕ್ಷತೆ'ಯೆನ್ನುವ ಪದ ನೀತಿಗೆ ಅತೀತ(ನೀತ್ಯಾತೀತತೆ)ಎನ್ನುವ ಅರ್ಥವನ್ನು ಹೊಂದಿದೆ. ಹೀಗಿರುವಾಗ ಸಾವಿರಾರು ವರ್ಷಗಳಿಂದ ಇದೇ ತತ್ವವನ್ನು ಬದುಕಿ ತೋರಿಸಿರುವ ಜನಗಳ ಜೀವನಕ್ರಮದಿಂದಲೇ ಇಂಥದೊಂದು ಸಿದ್ಧಾಂತವನ್ನು ರೂಪಿಸಲು ಸಾಧ್ಯವಿಲ್ಲವೆ? ಸೆಕ್ಯುಲರಿಸಂ ಎಂದರೆ ದಕ್ಷಿಣ ಏಶಿಯಾದ ಸಮಾಜಗಳ ಪಾರಂಪರಿಕ ಸಹಬಾಳ್ವೆ ಎನ್ನುವುದಾದರೆ, ನಮ್ಮ ಸ್ಥಳೀಯ ಸಮುದಾಯಗಳ ಇಂತಹ ಸಹಬಾಳ್ವೆಯನ್ನು ಸೂಚಿಸಲು ಬೇರೊಂದು ಸಂಸ್ಕೃತಿಯಿಂದ ಇಂಥ ಮೌಲ್ಯ/ಪರಿಕಲ್ಪನೆಗಳನ್ನು ಯಾಕೆ ಕಡ ತರಬೇಕು? ಅದರಲ್ಲೂ ಧರ್ಮ, ಜನಾಂಗ, ಸಂಸ್ಕೃತಿ, ಸಮುದಾಯಗಳ ನಡುವೆ ಸಹಬಾಳ್ವೆಯನ್ನು ಸಾಧಿಸುವಲ್ಲಿ ದೊಡ್ಡದೇನನ್ನೂ ಸಾಧಿಸದೇ ಇರುವ ದೇಶಗಳಿಂದ ಇಂಥ ಮೌಲ್ಯಗಳನ್ನು ಆಮದು ಮಾಡಿಕೊಳ್ಳುವ ಅಗತ್ಯವಾದರೂ ಏನು? ಉದಾಹರಣೆಗೆ, ನಿಜವಾದ ಅರ್ಥದಲ್ಲಿ ಕಳೆದ ಒಂದು ಸಾವಿರ ವರ್ಷಗಳಿಂದ ಬಹುಸಂಸ್ಕೃತಿಗಳ ಸಹಬಾಳ್ವೆಗೆ ಹೆಸರಾಗಿರುವ ಮಧ್ಯಯುಗದ ಇಸ್ಲಾಮಿಕ್ ಸ್ಪೇನ್‌ನ 'ದೇಶಕಾಲೀಯತೆ'ಯ ಪರಿಕಲ್ಪನೆಯನ್ನು ಯಾಕೆ ಬಳಸಬಾರದು?

ಹಾಗಿದ್ದರೂ, ಇಂಥ ಪ್ರಶ್ನೆಗಳನ್ನು ಎತ್ತುವುದರಲ್ಲಿ ಹೆಚ್ಚಿನ ಅರ್ಥವಿಲ್ಲ ಎಂಬುದು ನನಗೆ ಗೊತ್ತಿದೆ. ಯಜಮಾನಿಕೆ, ವಸಾಹತುಶಾಹಿ ಸಂಸ್ಕೃತಿಯನ್ನ ಪೋಷಿಸುವ ಇಂಡಿಯಾದ ಬೌದ್ಧಿಕ ಕಾರ್ಖಾನೆಗಳಲ್ಲಿ ಇಂಥ ವಿಚಾರಗಳನ್ನು ಬೆಳೆಸುವುದು ಸಾಧ್ಯವಿಲ್ಲ ಎಂದು ನನಗೆ ಗೊತ್ತಿದೆ. ಇಲ್ಲದಿದ್ದರೆ, ಇಲ್ಲಿನ ಎಡಪಂಥೀಯರು ಬಹಳ ಬಲವಾಗಿ ಸೆಕ್ಯುಲರಿಸಂಗೆ ಹೊರತಾಗಿರುವ ಧಾರ್ಮಿಕತೆ-ವಿಮೋಚನೆಯ ತತ್ವವನ್ನು ಪಾಲಿಸುವ ಸಾಂಡಿನಿಸ್ಟರಿಂದ ಒಂದೆರಡಾದರೂ ಪಾಠಗಳನ್ನು ಕಲಿಯುವುದು ಸಾಧ್ಯವಿತ್ತು. ಸೆಕ್ಯುಲರಿಸಂನ ಕಾರಣಕ್ಕಾಗಿ, ಲೆನಿನ್‌ನ ಕಾಲದಲ್ಲಿ ೬.೨ ಕೋಟಿ ಜನರ ಹತ್ಯೆಗೆ ಕಾರಣವಾದ ಸಂಸ್ಕೃತಿಗಳ ಉದಾಹರಣೆಯನ್ನು ಭಾರತ ಅನುಸರಿಸಬೇಕು ಎಂದು ಹೇಳುವುದನ್ನು ಬೌದ್ಧಿಕವಾಗಿ ಎಂದೋ ಸಮಾಧಿಯಾಗಿರುವ ಎಡಪಂಥೀಯರು ಬಿಡಬೇಕು.

ನಾನು ಆಧುನಿಕ ಭಾರತದ ಮೂಸೆಯಲ್ಲಿ ಹುಟ್ಟಿದವವನು. ಧಾರ್ಮಿಕತೆಯಲ್ಲಿ ನನಗೇನೂ ನಂಬಿಕೆಯಿಲ್ಲ. ಮಹಾನ್ ಆಧುನಿಕರೂ, ನಗರವಾಸಿಗಳೂ, ಪಾಶ್ಚಿಮಾತ್ಯ ಶಿಕ್ಷಣ ಪಡೆದವರೂ ಆಗಿರುವ ಜನಗಳಿಗೆ ಬದಲಾಗಿ, ಯಾವ ತತ್ವಗಳನ್ನೂ ಸಹ ಘೋಷಿಸುವ ಗೋಜಿಗೆ ಹೋಗದೆ ತಮ್ಮ ಜೀವನಶೈಲಿಯ ಮೂಲಕವೇ ಸೌಹಾರ್ದತೆಯ ಪಾಠವನ್ನು ಬದುಕಿನಲ್ಲಿ ಅಳವಡಿಸಿಕೊಂಡಿರುವ ಜನರನ್ನು ಗೌರವಿಸುವುದನ್ನು ಕಲಿಯಲು ನನಗೆ ಬಹಳ ದಿನಗಳು ಬೇಕಾದವು. ಇದರಿಂದ ನಾನೇನೂ ಧರ್ಮಪರಿಪಾಲಕನಾಗಿ ಬದಲಾಗಿಲ್ಲ. ಆದರೆ ಇದರ ಪರಿಣಾಮವಾಗಿ ನಾನು ಇದುವರೆಗೆ ೨೦ವರ್ಷಗಳಲ್ಲಿ ಬರೆದ ಕೃತಿಗಳಲ್ಲಿ ಪ್ರತಿಪಾದಿಸಿದ ಸಿದ್ಧಾಂತಗಳನ್ನು ಮರುವಿಮರ್ಶೆಗೆ ಒಡ್ಡುವ ಅನಿವಾರ್ಯತೆ ಒದಗಿಬಂತು. ಇಂಥ ಹೊತ್ತಿನಲ್ಲಿ, ಯಾರು ಧರ್ಮಕ್ಕೂ ರಾಜಕಾರಣಕ್ಕೂ ಸಂಬಂಧವಿಲ್ಲವೆನ್ನುತ್ತಾರೋ ಅವರಿಗೆ ಧರ್ಮವೂ ಗೊತ್ತಿಲ್ಲ, ರಾಜಕೀಯವೂ ಗೊತ್ತಿಲ್ಲ ಎನ್ನುವ ಗಾಂಧಿಯವರ ಮಾತು ನೆನಪಾಗುತ್ತದೆ. ನನ್ನ ಮಾತುಗಳು ಎಷ್ಟು ಅರ್ಥಪೂರ್ಣವೋ, ಎಷ್ಟು ಅರ್ಥಹೀನವೋ ಗೊತ್ತಿಲ್ಲ. ದಕ್ಷಿಣ ಏಶಿಯಾದಲ್ಲಿ ಬದುಕುತ್ತಿರುವ ಮುಂದಿನ ಪೀಳಿಗೆಯ ಜನಾಂಗವೇ ಅದರ ವಿವೇಚನೆಯನ್ನು ಮಾಡಲಿ ಎಂದು ಆಶಿಸುವೆ. *

# ಒಂದು ಕಾದಂಬರಿಯೂ, ಒಂದು ನಾಟಕವೂ

## ೧. ತೇಜಸ್ವಿಯವರ 'ಕಾಡು ಮತ್ತು ಕ್ರೌರ್ಯ'



ತೇಜಸ್ವಿಯವರ ಮೊದಲ ಮತ್ತು ಅಪ್ರಕಟಿತ ಕಾದಂಬರಿಯೆಂದು ಹೇಳಲಾದ 'ಕಾಡು ಮತ್ತು ಕ್ರೌರ್ಯ'ವನ್ನು ಪ್ರಕಾಶಕರಾದ ಬಿ.ಎನ್. ಶ್ರೀರಾಮ್ ಅವರು ಕಳಿಸಿ ಒಂದು ತಿಂಗಳು ಮೇಲಾಗುತ್ತಾ ಬಂದಿದ್ದರೂ, ಅದನ್ನು ಈವರೆಗೆ ಓದಿ ಮುಗಿಸಲಾಗಿರಲಿಲ್ಲ. ನಾಲ್ಕಾರು ಬಾರಿ ಪ್ರಯತ್ನಿಸಿ ನಾಲ್ಕಾರು ಪುಟಗಳಷ್ಟಕ್ಕೇ ಓದು ನಿಂತು ಹೋಗುತ್ತಿತ್ತು. ಆದರೆ ಮೊನ್ನೆ ತೇಜಸ್ವಿ ಕೃತಿಯೆಂದು ಹಠ ಮಾಡಿ ಕೂತು ಓದಿ ಮುಗಿಸಿದೆ. ಅದರ ಆಯಾಸ ಪರಿಹಾರ ರೂಪದಲ್ಲಿ ಈ ಟಿಪ್ಪಣಿ ಬರೆಯುತ್ತಿರುವೆ.

ಪ್ರಕಾಶಕರ ಮಾತುಗಳಲ್ಲಿ ಹೇಳಿರುವಂತೆ ಈ ಕಾದಂಬರಿಯನ್ನು ನವ್ಯ ಚಳುವಳಿಯು ಉಚ್ಛ್ರಾಯು ಕಾಲದಲ್ಲಿ–೧೯೬೨ರಲ್ಲಿ–ಬರೆಯಲಾಗಿತ್ತಂತೆ. ಅದು ತೇಜಸ್ವಿಯವರ ಬರವಣಿಗೆಯ ಬದುಕಿನ ಆರಂಭಿಕ ವರ್ಷಗಳು ಕೂಡ. ಈ ಎರಡೂ ಸಂಗತಿಗಳ ದಟ್ಟ ಸಾಕ್ಷ್ಯಗಳು ಈ ಕೃತಿಯನ್ನು ಓದುತ್ತಿರುವಾಗ ಹಲವು ರೂಪಗಳಲ್ಲಿ ನಮಗೆ ಎದುರಾಗುತ್ತವೆ. ನನ್ನ ಪ್ರಕಾರ ಕನ್ನಡದಲ್ಲಿ ನವ್ಯ ಎಂದರೆ–ಅದರ ಹಲವು ಆವೃತ್ತಿಗಳಿವೆಯೆಂಬುದು ನಿಜವಾದರೂ–ಶೇ.೮೦ ಪಾಶ್ಚಿಮಾತ್ಯ ಸಾಹಿತ್ಯ ಮತ್ತು ಚಿಂತನೆಯ ಓದು ಮತ್ತು ಅದು ಹುಟ್ಟಿಸುವ ಆಲೋಚನಾ ಲಹರಿಯ ಚಕ್ರವ್ಯೂಹ ಹಾಗೂ ಶೇ. ೨೦ ನಿಜ ಬದುಕಿನ ಅನುಭವ. ನವ್ಯ ಕೃತಿಗಳೆಂದರೆ, ಈ ಓದು ಮತ್ತು ಆಲೋಚನಾ ಚಕ್ರಕ್ಕೆ ಬದುಕಿನ ಅನುಭವಗಳ ವಿನ್ಯಾಸ ಕೊಡುವ ಕಸರತ್ತು. ತೇಜಸ್ವಿಯವರ ಈ ಕೃತಿ ಕೂಡ ಅಂತಹ ಒಂದು ಕಸರತ್ತು. ಅದೂ ಹಸಿ ಹಸಿಯಾದ ಬರವಣಿಗೆಯ ಕಸರತ್ತು. ಇಲ್ಲಿ ಪ್ರೇಮ ಕೂಡ ಬೌದ್ಧಿಕ ಕ್ರಿಯೆಯಾಗಲು ಹವಣಿಸುತ್ತಾ ಸುಸ್ತಾಗುವುದನ್ನು ನಾವು ನೋಡುತ್ತೇವೆ. ಒಂದೇ ವ್ಯತ್ಯಾಸವೆಂದರೆ, ಬಹಳಷ್ಟು ನವ್ಯ ಕೃತಿಗಳಿಗೆ ನಗರ ಜೀವನ ಹಿನ್ನೆಲೆಯಾಗಿ ಬಂದಿದ್ದರೆ, ಇದರಲ್ಲಿ ಕಾಡು, ಕಾಡು ಜನ, ಬೇಟೆ ಹಿನ್ನೆಲೆಯಾಗಿ ಬಂದಿವೆ. ಅವೆಲ್ಲ ಇಲ್ಲಿ ಸಂಕೇತ–ಧ್ವನಿ–ರೂಪಕಗಳಾಗಲು ಹೆಣಗಿ ಸುಸ್ತಾಗುತ್ತವೆ. ನಮ್ಮನ್ನೂ ಸುಸ್ತು ಮಾಡುತ್ತವೆ.

ನನಗನ್ನಿಸುತ್ತದೆ, ನವ್ಯ ಎನ್ನುವುದು ಇಂಗ್ಲಿಷ್ ಮೇಷ್ಟ್ರುಗಳಿಗೆ ಮಾತ್ರ–ಅದೂ ಒಂದಿಷ್ಟು ಪಾಶ್ಚಿಮಾತ್ಯ ಸಾಹಿತ್ಯ ಮತ್ತು ಚಿಂತನೆಗಳನ್ನು ಓದಿಕೊಂಡವರಿಗೆ (ಜೀರ್ಣಿಸಿಕೊಳ್ಳುವುದು ಬೇರೆ ವಿಷಯ)–ಒದಗಬಲ್ಲುದಾಗಿದ್ದ ಸಾಹಿತ್ಯ ಮಾರ್ಗವಾಗಿತ್ತು. ಕೆಲವು ಕನ್ನಡ ಮೇಷ್ಟ್ರುಗಳು ಈ ಶೈಲಿಯಲ್ಲಿ ಬರೆದ ಕಥೆ, ಕಾದಂಬರಿ, ಕವನ, ವಿಮರ್ಶೆಗಳ ಪಡಿಪಾಟಲುಗಳನ್ನು ನೋಡಿದರೆ ಇದು ಹೆಚ್ಚು ಸ್ಪಷ್ಟವಾದೀತು. ಒಂದಷ್ಟು ಜನ(ನಾನೂ ಸೇರಿದಂತೆ) ನವ್ಯ ಕೃತಿಗಳನ್ನು ಮೆಚ್ಚಿಕೊಂಡಿದ್ದರೆ ಅದಕ್ಕೆ ಅವರೂ ಆ ಲೇಖಕರಂತೆಯೇ ಒಂದಿಷ್ಟು ಪಾಶ್ಚಿಮಾತ್ಯ ಸಾಹಿತ್ಯ ಮತ್ತು ಚಿಂತನೆಗಳನ್ನು ಓದಿಕೊಂಡು, ಒಂದಿಷ್ಟು ಮನಸ್ಸು 'ಬಿಸಿ' ಮಾಡಿಕೊಂಡಿದ್ದೇ ಕಾರಣವಿರಬಹುದು. ಇದು ನವ್ಯ ಸಾಹಿತ್ಯವನ್ನು ಕುರಿತ ನನ್ನ ಇಡಿಯಾದ ವಿಮರ್ಶೆಯ ಮಾತುಗಳಲ್ಲ ಎಂಬುದನ್ನೂ ಇಲ್ಲಿ ಹೇಳಬೇಕು.

ಅದೇನೇ ಇರಲಿ, ಮೂಲತಃ ಅಸಲಿ ಬರಹಗಾರರಾದ ತೇಜಸ್ವಿ ಇದನ್ನು ಆದಷ್ಟು ಬೇಗ ಅರಿತುಕೊಂಡು (ಅದೇ ಒಂದು ಆಧುನಿಕ ಕನ್ನಡ ಸಾಹಿತ್ಯ ಮೀಮಾಂಸೆಯ ಪ್ರಸ್ಥಾನವಾದದ್ದು ಬೇರೆ ವಿಷಯ) ಜಾಡು ಬದಲಿಸಿದರು. ಜೊತೆಯಲ್ಲೇ ಕನ್ನಡ ಸಾಹಿತ್ಯದ ಜಾಡನ್ನೂ ಬದಲಿಸಿದರು. ನವ್ಯ ತನ್ನ ಅಥೆಂಟಿಸಿಟಿಯನ್ನು ಗಳಿಸಿಕೊಂಡದ್ದು ಈ ಸ್ಥಿತ್ಯಂತರ ಘಟ್ಟದಲ್ಲೇ. ಆದರೆ ಇದೆಲ್ಲ ಆದ ಎಷ್ಟೋ ವರ್ಷಗಳ ನಂತರ ಈ ಕೃತಿಯನ್ನು–ತಮ್ಮ ಜೀವಂತ ಕಾಲದಲ್ಲಿ ತೇಜಸ್ವಿ ಇದನ್ನು ಪ್ರಕಟಿಸಲು ಸ್ಪಷ್ಟವಾಗಿ ನಿರಾಕರಿಸಿದ್ದರೂ–ಪ್ರಕಟಿಸಿರುವುದು ಏಕೋ ತಿಳಿಯದಾಗಿದೆ. ಚರಿತ್ರೆಯ ದಾಖಲೆಯಾಗಿ? ಬಹುಶಃ ಈ ಪುಸ್ತಕಕ್ಕಾಗಿ ಕೆ.ಟಿ. ಶಿವಪ್ರಸಾದ್ ರೇಖಿಸಿರುವ ಅನನ್ಯ ಚಿತ್ರಗಳು ಮಾತ್ರ ಇದನ್ನು ದಾಖಲೆಯಾಗಿ ಕಾಪಾಡಬಲ್ಲುದು..

## ೨. ಗಿರಿಬಾಲೆ : ಒಂದು ಏಕವ್ಯಕ್ತಿ ಪ್ರದರ್ಶನ

ಇದು 'ಗಿರಿಬಾಲೆ' ಎಂಬ ಕಾವ್ಯನಾಮದೊಂದಿಗೆ ಬರೆದ ಸರಸ್ವತಿಬಾಯಿ ರಾಜವಾಡೆಯವರ ಜನ್ಮಶತಮಾನೋತ್ಸವವ ವರ್ಷ. ಇದರ ಅಂಗವಾಗಿ ಕೆ.ಜಿ. ಕೃಷ್ಣಮೂರ್ತಿಯವರ ನೇತೃತ್ವದ ತುಮರಿಯ 'ಕಿನ್ನರ ಮೇಳ' ತಂಡವು ಅವರ ಜೀವನದ ನೆನಪುಗಳ ದಾಖಲೆಯಾಗಿರುವ ವೈದೇಹಿಯವರ 'ಮುಂತಾದ ಪುಟಗಳು' ಕೃತಿಯನ್ನು ಆಧರಿಸಿ ಒಂದು ಏಕವ್ಯಕ್ತಿ ಪ್ರದರ್ಶನವನ್ನು ರೂಪಿಸಿ ಪ್ರಯೋಗಿಸುತ್ತಿದ್ದಾರೆ. ಅಂತಹ ಒಂದು ಪ್ರದರ್ಶನವೊಂದು ಮೊನ್ನೆ ಶಿವಮೊಗ್ಗದ ಕರ್ನಾಟಕ ಸಂಘದ ೮೩ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಏರ್ಪಾಟಾಗಿತ್ತು. ನಿರ್ದೇಶನ, ಬಿ.ಆರ್. ವೆಂಕಟರಮಣ ಐತಾಳರದ್ದು.



ಉಡುಪಿಯ ಕಡುಬಡತನದ ಕುಟುಂಬವೊಂದರಲ್ಲಿ ಹುಟ್ಟಿದ ಸರಸ್ವತಿಬಾಯಿ ರಾಜವಾಡೆಯವರು ಬಾಲ್ಯದಲ್ಲಿ ಪಡಬಾರದ ಪಾಡುಪಟ್ಟು, ಯಾರ ಕಣ್ಣಿಗೋ ಬಿದ್ದು ನಾಟಕ, ಸಿನಿಮಾಗಳಲ್ಲಿ ಬಾಲನಟಿಯಾಗಿ, ಆರ್ಕೆಸ್ಟ್ರಾವೊಂದರಲ್ಲಿ ಯುವ ಗಾಯಕಿಯಾಗಿ ಅಲೆಮಾರಿ ಬದುಕು ನಡೆಸುತ್ತಾ, ಅದರ ಮಧ್ಯೆಯೇ ಕಲೆಕ್ಟರನನ್ನು ಮದುವೆಯಾಗುವ ಆಸೆ ತಳೆದು, ಆಕಸ್ಮಿಕವೆಂಬಂತೆ ಅದು ಫಲಿಸಿಯೂ ಬಿಟ್ಟು, ಆದರೆ ಅದರಲ್ಲಿ–ಗಂಡ ತುಂಬ ವಯಸ್ಸಾದವನಾಗಿ–ಬಹುಶಃ ಸಂಸಾರ ಸುಖವೊಂದನ್ನು ಬಿಟ್ಟು ಇನ್ನೆಲ್ಲ ವೈಭೋಗ ಅನುಭವಿಸಿ, ಇದೆಲ್ಲ ಒತ್ತಡಗಳಿಂದ ಬಿಡುಗಡೆಯ ಮಾರ್ಗವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿ, ಪತ್ರಿಕೆಯೊಂದನ್ನು ನಡೆಸಿ, ಕೊನೆಗೆ ಗಂಡನನ್ನು ಕಳೆದುಕೊಂಡ ನಂತರ ತನ್ನ ಹುಟ್ಟೂರು ಉಡುಪಿಗೆ ಹಿಂದಿರುಗಿ ಗಂಡನ ಆಸೆ ನೆರವೇರಿಸಲು ಶಾರದಾ ದೇವಸ್ಥಾನವನ್ನು ಸ್ಥಾಪಿಸಿ ತೀವ್ರ ದೈವ ಶ್ರದ್ಧೆಯಲ್ಲಿ ಮುಳುಗಿ ಎಂಭತ್ತರ ದಶಕದಲ್ಲಿ ಅಸು ನೀಗಿದರು. ಬದುಕು ಇದಕ್ಕಿಂತ ಹೆಚ್ಚು ನಾಟಕೀಯವಾಗಿರಲಾರದು.



ಈ ಏಕವ್ಯಕ್ತಿ ಪ್ರದರ್ಶನ, ಈ ಎಲ್ಲ ನಾಟಕೀಯತೆಯ ಹಿಂದೆ ಅಡಗಿರುವ ಹೆಣ್ಣೊಬ್ಬಳು ತಾನೇ ನಿರ್ದೇಶಿಸಿಕೊಂಡು ನಡೆಸಿದ ಬದುಕಿನ ಆಳದ ಪಿಸು ಮಾತುಗಳನ್ನು ನಮ್ಮ ಅಂತಃಕರಣಕ್ಕೆ ಮುಟ್ಟಿಸುತ್ತದೆ. ಒಂದೆರಡು ಕುರ್ಚಿಗಳು, ಒಂದು ದೀಪ, ಒಂದೆರಡು ಹೂ ಕಟ್ಟುವ ತಟ್ಟೆಗಳು ಇಷ್ಟು ಸರಳ ರಂಗಸಜ್ಜಿಕೆಯೊಂದಿಗೆ ಈ ಪ್ರಯೋಗ ಒಂದು ತಾಸು ನಮ್ಮನ್ನು ಹಿಡಿದಿಡುತ್ತದೆಂದರೆ, ಅದಕ್ಕೆ ರಾಜವಾಡೆಯವರು ಏನೂ ಆಗಿಲ್ಲವೇನೋ ಎಂಬಂತೆ ತಮ್ಮ ಬದುಕಿನ ಏನೆಲ್ಲವನ್ನೂ ಹೇಳಿರುವ ಹದ, ವೈದೇಹಿಯವರು ಆ ಹದ ತಪ್ಪದಂತೆ ಅದನ್ನು ದಾಖಲು ಮಾಡಿರುವ ರೀತಿಗಳಷ್ಟೇ ಅಲ್ಲದೆ, ಅದು ರಂಗದ ಮೇಲೆ ಬಂದಾಗಲೂ ಆ ರಂಗ ಸಂಭ್ರಮದಲ್ಲಿ ಹದಗೆಡದಂತೆ ಅದನ್ನು ಸಾಕ್ಷಾತ್ಕರಿಸಿರುವ ಸುಶೀಲಾ ಕೆಳಮನೆಯವರ ವಾಚಿಕಾಭಿನಯ ಪ್ರತಿಭೆಯೂ ಕಾರಣವಾಗಿದೆ. ಸುಶೀಲಾ ಅವರು ಇಲ್ಲಿ ಏಕವ್ಯಕ್ತಿಯಾಗಿ ಉಳಿಯದೆ ನೋಡುಗರಾದ ನಮ್ಮನ್ನೂ ರಂಗದ ಮೇಲೆ ಕರೆದು ಕೂರಿಸಿಕೊಂಡು ಬಿಡುತ್ತಾರೆ. ಈ ಪ್ರದರ್ಶನದ ಒಂದೇ ದೌರ್ಬಲ್ಯವೆಂದರೆ ಅನಗತ್ಯವಾಗಿ ಕಿವಿ ಮೇಲೆ ಬಿದ್ದು ನಾಟಕದ ಹದ ತಪ್ಪಿಸಲು ಪ್ರಯತ್ನಿಸುವ ಸಂಗೀತ. ಇದನ್ನು ಬಿಟ್ಟರೆ ಇದು ಐತಾಳರ ಇನ್ನೊಂದು ಸಾರ್ಥಕ ಪ್ರಯೋಗ.

**–ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

**ಪು: ಹಸಿರು ಸೇನಾನಿ ಪ್ರೊ.ಎಂ.ಡಿ. ನಂಜುಂಡಸ್ವಾಮಿ: ಹೋರಾಟ ಮತ್ತು ಚಿಂತನೆ** ಸಂ: **ನಟರಾಜ ಹುಳಿಯಾರ್** ಪ್ರ: **ಪಲ್ಲವ ಪ್ರಕಾಶನ,** ಚನ್ನಪಟ್ಟಣ, ೨೦೧೨ **ಪು:** ೨೯೨ **ಬೆಲೆ:** ರೂ ೧೮೦

# ಪ್ರೊಫೆಸರ್ ಹಸಿರು ಸೇನಾನಿಯಾದ ಕಥೆ, ವ್ಯಥೆ




**ಕ**ರ್ನಾಟಕದ ಸಮಾಜವಾದಿ ಚಿಂತನೆಯ ಬಹುಮುಖ್ಯ ಆಧಾರಗಳಲ್ಲೊಬ್ಬರಾಗಿದ್ದ ಪ್ರೊಫೆಸರ್ ಎಂದೇ ಖ್ಯಾತರಾದ ಎಂ.ಡಿ ನಂಜುಂಡಸ್ವಾಮಿ ಅವರ ಹೋರಾಟ ಮತ್ತು ಚಿಂತನೆಗಳು ಅವರು ಬರೆಯದೆ ಹೋದ ಆತ್ಮ ಚರಿತ್ರೆಯ ತುಣುಕುಗಳಂತೆ ಈ ಸಂಪುಟದಲ್ಲಿ ಅವರ ಶಿಷ್ಯರು ಅಭಿಮಾನಿಗಳು, ಚಳುವಳಿಯ ಸಹಚರರುಳಿಂದ ದಾಖಲಾಗಿವೆ. ಪ್ರೊಫೆಸರ್ ಇಲ್ಲಿ ಪೂರ್ಣ ಕಾಣದೆ ಹೋದರೂ ಕಂಡಷ್ಟೇ ಕಾಣ್ಕೆಯಿಂದ ಉಳಿದದ್ದನ್ನು ಗ್ರಹಿಸಬಹುದಾಗಿದೆ.

೨೮ ಲೇಖನಗಳು ೪ ಸಂದರ್ಶನಗಳನ್ನೊಳಗೊಂಡ ಈ ಪರಿಷ್ಕೃತ ಮುದ್ರಣ ೨೦೦೮ರಲ್ಲಿ ಬೆಳಕು ಕಂಡ ಮೊದಲ ಮುದ್ರಣ, ಓದುಗರಿಗೂ ರೈತರಿಗೂ ಬರೆದವರಿಗೂ ತಲುಪದೆ 'ಕಾಣೆ'ಯಾಗಿದ್ದರಿಂದ ಈ ಮುದ್ರಣ ಬರುತ್ತಿದೆ ಎಂದು ಸಂಪಾದಕರು ಹೇಳಿದ್ದಾರೆ. ಲೋಹಿಯಾವಾದವನ್ನು ಇಲ್ಲಿ ರೈತವಾದವಾಗಿ ರೂಪಾಂತರಗೊಳಿಸಿದ ಜಾದೂಗಾರನಂತೆ ಸಂಪಾದಕರಿಗೆ ನಂಜುಂಡಸ್ವಾಮಿ ಇಲ್ಲಿ ಕಾಣುತ್ತಿದ್ದಾರೆ. ಲೇಖಕರು, ಚಿಂತಕರು, ಎಂಡಿಎನ್‌ರ ನಿಷ್ಠುರ ವ್ಯಕ್ತಿತ್ವವನ್ನು ಸಾಂದರ್ಭಿಕ ಮಹತ್ವದೊಂದಿಗೆ ಅರ್ಥ ಮಾಡಿಕೊಳ್ಳದೆ ಉಪೇಕ್ಷಿಸುತ್ತಾ ಹೋಗಿದ್ದು ಕರ್ನಾಟಕದಲ್ಲಿ ಹುಟ್ಟಬಹುದಾಗಿದ್ದ ಬೃಹತ್ ಚಳುವಳಿಗೆ ತುಂಬಲಾರದ ನಷ್ಟವೆಂದು ಹುಳಿಯಾರ್ ಖೇದ ವ್ಯಕ್ತಪಡಿಸಿದ್ದಾರೆ.

ಹುಳಿಯಾರ್ ನಿಷ್ಠುರ ಎಂದು ಕರೆಯುವ ನಂಜುಂಡಸ್ವಾಮಿಯವರ ಸರ್ವಾಧಿಕಾರಿ ಗುಣ ಇಲ್ಲಿನ ಬಹುತೇಕ ಲೇಖನಗಳಲ್ಲಿ ಚರ್ಚೆಗೆ ಬಂದಿದೆ. ಕೆ.ಪುಟ್ಟಸ್ವಾಮಿ 'ಪ್ರೊಫೆಸರರನ್ನು ಅರ್ಥಮಾಡಿಕೊಂಡವರಿಗಿಂತ ಅಪಾರ್ಥ ಮಾಡಿಕೊಂಡವರೇ ಹೆಚ್ಚು' ಎಂದರೆ, ಪ್ರೊ. ರವಿವರ್ಮಕುಮಾರ್ 'ಅವರಷ್ಟು ವಾಕ್‌ಸ್ವಾತಂತ್ರ್ಯ ಪ್ರತಿಪಾದಕ ಯಾರೂ ಇಲ್ಲ. ಯಾವ ಬಂಧನ, ಪಂಜರದಿಂದ ಹಿಡಿದಿಡಲಾಗದ ಹಾರುವ ಹಕ್ಕಿ' ಎಂದಿದ್ದಾರೆ. ಅರ್ಧ ಡಜನ್ ಸರ್ಕಾರಿ ಅಧಿಕಾರಿಗಳಿಗೆ ಕಪಾಳಮೋಕ್ಷ ಮಾಡಿ ಬುದ್ಧಿ ಕಲಿಸಿದ ವಿವರದ ಕೊನೆಗೆ ಬಿ. ಚಂದ್ರೇಗೌಡರು "ಎಲ್ಲರನ್ನೂ ಟೀಕಿಸುವ ನಾಯಕರು ತಮ್ಮ ಬಗೆಗಿನ ಟೀಕೆಯನ್ನು ಸಹಿಸುವುದಿಲ್ಲ!" ಎಂದು ಮಾರ್ಮಿಕ ತೀರ್ಪು ನೀಡುತ್ತಾರೆ. ಸ್ಪೇನ್‌ನ ಹೋರಾಟಗಾರ ಶೆರ್ಗಿಯೋ ಓ ಶೇರಾನ್ಸ್ಕಿ, ವಂದನಾ ಶಿವರಂತಹವರು ಪ್ರೊಫೆಸರ್ ಬಗ್ಗೆ ಪೂರ್ವಾಗ್ರಹಿತರಾಗಿದ್ದರೆಂದು ದಾಖಲೆ ಒದಗಿಸುತ್ತಾರೆ. ಕಿ.ರಂ. 'ಲಕ್ಷಾಂತರ ಕನ್ನಡಿಗರಿಗೆ ಹೊಸ ಎಚ್ಚರ ಕಲಿಸಿಕೊಟ್ಟ'ರೆಂದು ಕೃತಜ್ಞರಾಗುತ್ತಾರೆ. ಹೀಗೆ ಅನೇಕ ವಿಮರ್ಶೆ, ಜಿಜ್ಞಾಸೆ, ಸ್ಮರಣೆ, ಮುದ ನೀಡುವ ಅನುಭವ, ಚಳುವಳಿಯ ಕಿಚ್ಚು ಬಂಧನ, ಜೈಲು, ಸಂಘಟನೆ, ವಿಘಟನೆ–ಎಲ್ಲವನ್ನು ಮಿತ್ರರು, ಅನುಯಾಯಿಗಳು, ನೆನಪಿನ ಬುತ್ತಿ ಬಿಚ್ಚಿ ಇಲ್ಲಿ ಸ್ಮರಿಸುತ್ತಾ ಹೋದಂತೆ ಅನಾವರಣಗೊಳ್ಳುವ ಪ್ರೊಫೆಸರ್‌ರ ವಿಶಿಷ್ಟ ವ್ಯಂಗ್ಯ, ಕಟಕಿ, ಕಟುತನದ ಗುಣಗಳೂ ಇಲ್ಲಿ ಮಿಂಚಿವೆ.

ಯು.ಆರ್. ಅನಂತಮೂರ್ತಿ ಎಂ.ಡಿ.ಎನ್‌ರನ್ನು ತಾತ್ವಿಕವಾಗಿ ತೂಗಿ ನೋಡುತ್ತ ಇಡೀ ಭಾರತದ ಮುಂಚೂಣಿಯಲ್ಲಿದ್ದ ರೈತ ನಾಯಕರಲ್ಲಿ ನಂಜುಂಡಸ್ವಾಮಿಯೂ ಒಬ್ಬರು ಎಂದು ಹೇಳಿ ಅವರಲ್ಲಿ ಪ್ರಜಾಸತ್ತಾತ್ಮಕ ವಿನಯವಿರಲಿಲ್ಲ ಎಂಬ ಟೀಕೆಯನ್ನು ಉಲ್ಲೇಖಿಸುತ್ತಾ ಭ್ರಷ್ಟತೆ ಮತ್ತು ಜಾಗತೀಕರಣ ವಿರುದ್ಧ ಹೋರಾಡುವವರಿಗೆ ಈ ವ್ಯಕ್ತಿತ್ವ ಅಗತ್ಯವೇನೋ ಎಂದೂ, ಇಲ್ಲಿನ ಕೆಸರಿನಲ್ಲಿ ಏನನ್ನಾದರೂ ಊರಿ ಭದ್ರವಾಗಿ ನಿಲ್ಲಿಸುವುದು ಕಷ್ಟವೆಂದ ಲೋಹಿಯಾ ಮಾತಿನೆಡೆ ಜಾರುತ್ತಾರೆ. ನಮ್ಮ ನಾಯಕರ ಮೇಲಿನ ನಿಷ್ಠೆಯಿಂದ ನಾವು ಬೇರೆ ಬೇರೆಯಾಗ ಬೇಕಾದ ಅನಿವಾರ್ಯತೆ ಇತ್ತೆಂದು ವಿಷಾದಿಸುತ್ತಾರೆ.

ಹೀಗಾಗಿ ಈ ಕೃತಿ ಒಂದೆಡೆ ಪ್ರೊಫೆಸರ್ ನಂಜುಂಡಸ್ವಾಮಿ ಸಮಾಜವಾದೀ ಚಿಂತನೆಯ ಕುಲುಮೆಯಲ್ಲಿ ಕಾದ ಕಬ್ಬಿಣವಾಗಿ ರೂಪುಗೊಂಡದ್ದನ್ನು ಹೇಳುತ್ತದೆ. ಹಾಗೇ ಅವರ ಸರ್ವಾಧಿಕಾರಿ ಗುಣವನ್ನು ಅನಾವರಣಗೊಳಿಸುತ್ತದೆ. ಹಾಗಾಗಿ, ಮೇಧಾ ಪಾಟ್ಕರ್, ಪ್ರೊಫೆಸರ್ ಅಂತರಾರಾಷ್ಟ್ರೀಯ ವೇದಿಕೆ ರೂಪಿಸುವ ಶಕ್ತಿ ಇರುವ ಸಮಾಜವಾದೀ ಗುಣ ಉಳ್ಳವರೆಂದು ಹೇಳಿರುವುದು ಒಂದರ್ಥದಲ್ಲಿ ನಿಜ–ವ್ಯಕ್ತಿ ದ್ವೇಷದ ದೌರ್ಬಲ್ಯ ಮೀರಿದ್ದರೆ! ಹಾಗೇ ಇಲ್ಲಿ ದಾಖಲಾಗಿರುವ ಈ ಮಾತುಗಳೂ ನಿಜ: ವೈದ್ಯರ ಸೂಚನೆ ಮೇರೆಗೆ ಸಿಗರೇಟು ಬಿಟ್ಟಿದ್ದರೆ ಇನ್ನಷ್ಟು ಕಾಲ ಬದುಕುತ್ತಿದ್ದರು ಮತ್ತು ಹಠಮಾರಿತನ ಇಲ್ಲದಿದ್ದರೆ ರೈತ ಚಳುವಳಿಯ ಇತಿಹಾಸ ಬೇರೆಯೇ ಆಗುತ್ತಿತ್ತು. ಡಿ.ಎಸ್. ನಾಗಭೂಷಣರು ಸಂದರ್ಶನವೊಂದರಲ್ಲಿ ಕೇಳಿದ ಪ್ರಶ್ನೆಗೆ ಶಾಮಣ್ಣನವರು ಕೊಟ್ಟ ಉತ್ತರದಿಂದ ಪ್ರೊಫೆಸರ್ ಕೆಂಡಾಮಂಡಲವಾಗಿ 'ಸಂಘಟನೆಯಲ್ಲಿ ನಾನಿರಬೇಕು ಇಲ್ಲ ಶಾಮಣ್ಣ ಇರಬೇಕು' ಎಂದು ಅವರನ್ನು ಉಚ್ಚಾಟಿಸಿದ ಘಟನೆಯನ್ನು ಶಾಮಣ್ಣನವರೇ ಇಲ್ಲಿ ದಾಖಲಿಸಿದ್ದಾರೆ. ವ್ಯಕ್ತಿನಿಷ್ಠೆಯ ಸಮಸ್ಯೆಯಿಂದ ರೈತ ಸಂಘ ಹೋಳಾದದ್ದು ತಮ್ಮ ಬದುಕಿನ ಮಹಾ ದುಃಖದ ಅಧ್ಯಾಯವೆಂದು ಅವರು ಇಲ್ಲಿ ಹೇಳುತ್ತಾರೆ. ಕಡಿದಾಳು ಶಾಮಣ್ಣ ರೈತರಿಗೆ ಹಸಿರು ಟವೆಲ್ ಟೋಪಿ ಕೊಟ್ಟರು. ನಂಜುಂಡಸ್ವಾಮಿ ಆ ಹಸಿರಿಗೆ ಸೇನಾನಿ ಆಗಿಬಿಟ್ಟರು. ತಮಿಳು ನಾಡಿನಲ್ಲಿ ನಾರಾಯಣಸ್ವಾಮಿ ರೈತರಿಂದ ಮಾಡಿಸಲಾರದ್ದನ್ನು ಕರ್ನಾಟಕದಲ್ಲಿ ಇವರು ಮಾಡಿಸಿದರು. ಮಧ್ಯದಲ್ಲೇ ಮಡಿದರು. ಇದು ತುಂಬಲಾರದ ನಷ್ಟವೆನ್ನುವುದೇ ಕೃತಿಯ ಒಡಲಾಳದ ಸೊಲ್ಲು.

ಕೊನೆಯ ಭಾಗದಲ್ಲಿ ನಾಲ್ಕು ಸಂದರ್ಶನಗಳಿವೆ. ಫ್ರೆಡ್ ಡಿ ಸ್ಯಾಮ್ ಲಾರ್ಯಾರೊ ಎಂಬ ಅಮೇರಿಕಾದ ಪತ್ರಕರ್ತನಿಗೆ ಹಸಿರುಕ್ರಾಂತಿ ಉಂಟುಮಾಡಿದ ಅಪಾಯ ವಿವರಿಸುವ ಎಂಡಿಎನ್ ಬೀಜೋತ್ಪಾದನಾ ಕಂಪನಿಗಳ ಹುನ್ನಾರ ವಿವರಿಸುತ್ತಾರೆ. ದೇವನೂರು ಮಹಾದೇವರ ದಲಿತರಿಗೆ ರೈತ ಸಂಘವೇ ಶತ್ರುವಲ್ಲವೇ ಎಂಬ ಪ್ರಶ್ನೆಗೆ ನೀಡಿದ ಉತ್ತರ ಖಚಿತ ಆತ್ಮ ವಿಶ್ವಾಸದ ಉತ್ತರದಂತಿಲ್ಲ. ರಹಮತ್ ತರೀಕೆರೆಗೆ ನೀಡಿದ ಉತ್ತರಗಳಲ್ಲಿ ಲೋಹಿಯಾರವರ 'ಗಾಂಧಿ ಮಾರ್ಕ್ಸ್ ಸೋಶಿಯಲಿಸಂ' ಕೃತಿ ಓದಿದಾಗ ಅದನ್ನು ತಾವೇ ಬರೆದಂತೆ ಅನ್ನಿಸಿತೆಂದು, ತಮ್ಮ ತಂದೆಯ ರಾಜಕೀಯ ಹಿನ್ನೆಲೆಯೂ ಅದೇ ರೀತಿಯದೆಂದು ಹೇಳುತ್ತಾ ಓದುಗರ ಹುಬ್ಬೇರುವಂತೆ ಮಾಡುತ್ತಾರೆ. ಅವರ ಇಂತಹ ಇನ್ನಷ್ಟು ಹೇಳಿಕೆಗಳು: ಗೋಪಾಲ ಗೌಡರು ಸಂಘಟಕರೇ ಅಲ್ಲ. ನಾನು ಶಿಸ್ತಿನ, ಚಾರಿತ್ರ್ಯದ ಸರ್ವಾಧಿಕಾರಿ. ಉಳುವವನಿಗೆ ಭೂಮಿ ಇನ್ನು ಆಗೇ ಇಲ್ಲ. ಬಾಬ್ರಿ ಮಸೀದಿ ಕೆಡವಲು ಡಿಸೆಂಬರ್ ೬ನ್ನು ಆರಿಸಿದ್ದು ಅಮೇರಿಕಾದ ಕುತಂತ್ರ. ಇತ್ಯಾದಿ!

ಒಟ್ಟಾರೆ ಪ್ರೊ.ಎಂ.ಡಿ. ನಂಜುಂಡಸ್ವಾಮಿಯವರ ವ್ಯಕ್ತಿತ್ವ, ಹೋರಾಟ, ಚಿಂತನೆಗಳೊಂದಿಗೆ ಸಮಾಜವಾದಿ ಸಿದ್ಧಾಂತ ಕರ್ನಾಟಕದ ಚಳುವಳಿಗಳಿಗೆ ಅದರಲ್ಲೂ ರೈತ ಚಳುವಳಿಗೆ ಪ್ರಾಯೋಗಿಕ ಅನ್ವಯ ಆಗುವಾಗ ಮೂಡಿಬಂದ ರಾಜಕಾರಣ, ಸರ್ಕಾರಿ ಕ್ರೌರ್ಯ, ಜಾತಿ, ಸಂಘಟನೆಗಳ ದೌರ್ಬಲ್ಯ, ಸಾಫಲ್ಯಗಳೂ ಇಲ್ಲಿ ವ್ಯಕ್ತವಾಗಿವೆ. ನಟರಾಜ್ ಹುಳಿಯಾರ್‌ರ ಪ್ರಯತ್ನ ಸಾರ್ಥಕವಾಗಿದೆ.

**–ಪ್ರೊ. ಎಂ. ಚಂದ್ರಶೇಖರಯ್ಯ**

'ಹೊಸ ಮನುಷ್ಯ'ಕ್ಕೆ ಹಾರ್ದಿಕ ಶುಭಾಶಯಗಳು




ಬೆಂಗಳೂರಿನಲ್ಲಿ ಕ್ಯಾಬ್‌ಗಳನ್ನು ಬುಕ್ ಮಾಡಲು ಸಂಪರ್ಕಿಸಿ: 30600600

'ಹೊಸ ಮನುಷ್ಯ'ಕ್ಕೆ ಹಾರ್ದಿಕ ಶುಭಾಶಯಗಳು

ಉತ್ತಮ ಕಾಫಿಪುಡಿ
ಬೆಳೆಗಾರರಿಂದ
ನೇರವಾಗಿ...

ಕಾಪ್ಸಿ

ಕಾಫಿಪುಡಿಗಾಗಿ ಸಂಪರ್ಕಿಸಿ:
ಕಾಫಿ ಕೋ-ಆಪರೇಟೀವ್ ಸೊಸೈಟಿ
ಕೊಳಲು ರಸ್ತೆ, ಅರೇಹಳ್ಳಿ-೫೭೩೧೦೧
(ಬೇಲೂರು ತಾ. ಹಾಸನ ಜಿಲ್ಲೆ)
ದೂರವಾಣಿ: 9242103764/99012548



**'ಹೊಸ ಮನುಷ್ಯ'ಕ್ಕೆ ಹಾರ್ದಿಕ ಶುಭಾಶಯಗಳು**

**–ಎಚ್.ಎಂ ಶಿವಾನಂದ**
**ಮತ್ತು ಕುಟುಂಬ**
**ಹಂಸಗಾರು**
**(ಸಾಗರ ತಾ. ಶಿವಮೊಗ್ಗ ಜಿ.)**

**ತಿಂಗಳ ಸಾಲುಗಳು...**



ಹುಲ್ಲು ಕಡ್ಡಿ ನೀರ ಮೇಲೆ. ಮುತ್ತು ರತ್ನ ನೀರ ತಳಗೆ. ಲೋಕದಲ್ಲಿ ಜನ ಮೇಲು ಕೀಳು ಆಗಿರುವುದು ಅವರು ಎಲ್ಲಿದ್ದಾರೆ ಎಂಬುದರಿಂದಲ್ಲ. ಏನಾಗಿದ್ದಾರೆ ಎಂಬುದರಿಂದ.

–ರಮಣ ಮಹರ್ಷಿ

**ಪತ್ರಿಕೆಗೆ ಶುಭವನ್ನು ಕೋರುವ...**

**– ಬಿ.ಸುರೇಶ**
**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 (Karnataka)